Insisting a statement on murder of Sri Bhaskar Samita

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯರೇ, ನಾನು ಹಿಂದೆಯೇ ತಮಗೆ ಭಾಸ್ಕರ ಸಮಿತಾ ಕೊಲೆ ಪ್ರಕರಣದ ಬಗ್ಗೆ ಒಂದು ಪ್ರಸ್ತಾಪಮಾಡಿದಾಗ ಆ ಬಗ್ಗೆ ಎರಡೂ ಸದನಗಳಲ್ಲಿ ಏಕಕಾಲಕ್ಕೆ ಒಂದು ಹೇಳಿಕೆಯನ್ನು ಸಂಬಂಧಪಟ್ಟ ಸಚಿವರು ಮಾಡುವುದಾಗಿ ಹೇಳಿತು. ಆದರೆ ಈ ದಿವಸ ಇದರ ಬಗ್ಗೆ ಮೇಲ್ಮನೆಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆಂದು ನಾನು ಕೇಳಿದೆ. ಇದರಿಂದ...

ಅಧ್ಯಕ್ಷರು.—ಈ ವಿಚಾರದಲ್ಲಿ ಬೇರೆ ಸದಸ್ಯರುಗಳಿಂದಲೂ ಕೆಲವು ಕಾಲ್ ಅಟೆನ್‌ಷನ್ ನೋಟೀಸುಗಳು ಬಂದಿವೆ. ಇದನ್ನು ನಾಳಿನ ಅಜೆಂಡಾದಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

MOTION OF THANKS TO THE GOVERNER'S ADDRESS

(Debate Contd.)

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ನಾನು ನೆನ್ನೆಯ ದಿವಸ ಸರ್ಕಾರದವರು ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು ಹಂಚುತ್ತೇವೆಂದು ಹೇಳುತ್ತಿದ್ದುದರ ಬಗ್ಗೆ ಮಾತನಾಡುತ್ತಿದ್ದೆ. ನನಗೆ ನೆನ್ನೆಯ ದಿವಸ ತಿಳಿದು ಬಂದಹಾಗೆ ಸರ್ಕಾರದವರು ಇಲ್ಲಿವರೆಗೆ 3 ಲಕ್ಷ ನಿವೇಶನಗಳನ್ನು ಹಂಚಿಸಿದ್ದಾರೆಂದು ಖಚಿತವಾಗಿ ತಿಳಿಯಬಂದಿತು, ಅದರೆ ಯಾರಿಗೆ ಭೂಮಿ ಹಂಚಿದ್ದಾರೋ ಅವರ ಸಾಗುವಳಿ ಚೀಟಿಯನ್ನು ಹಿಡಿದುಕೊಂಡು ಉಳುವುದಕ್ಕೆ ಹೋದಾಗ ಆ ಜನರಿಗೆ ಅಲ್ಲಿ ಯಾವ ಭೂಮಿಯೂ ಇರಲಿಲ್ಲ. ಅಲ್ಲಿ ಸರ್ವೇ ನಂಬರುಗಳೇ ಬದಲಾಗಿದ್ದುವು. ಅಲ್ಲದೆ ಆ ಜಮೀನುಗಳೆಲ್ಲಾ ಬೇರೆ ಜನರ ಸ್ವಾಧೀನದಲ್ಲಿದ್ದುವು. ಇಂಥಾ ಒಂದು ದೊಡ್ಡ ಗಡಿಬಿಡಿಯಲ್ಲಿ ಇವರು ಈ ಕೆಲಸವನ್ನು ಮಾಡಿದ್ದಾರೆ. ಹಾಗೊಂದುವೇಳೆ ಈ ಸರ್ಕಾರಕ್ಕೆ ನಿಜವಾಗಿ ಈ ವಿಚಾರದಲ್ಲಿ ಜನರಿಗೆ ಒಂದು ಸಹಾಯಮಾಡಬೇಕೆಂಬ ಆಸೆ ಇದ್ದಿದ್ದರೆ ಈ ಕಾರ್ಯವನ್ನು ಇವರು ಆರು ತಿಂಗಳ ಅವಧಿಯಲ್ಲಿ ಮಾಡಿ ಮುಗಿಸಬಹುದಿತ್ತು. ಅದರೆ ಇದು 1972ರಲ್ಲಿ ಪ್ರಾರಂಭವಾದರೂ ಇನ್ನೂ ಪೂರ್ಣವಾಗಿಲ್ಲ. ಇದರ ವಿಚಾರದಲ್ಲಿ ಸರ್ಕಾರಕ್ಕೆ ಒಂದು ನಿರ್ದಿಷ್ಟವಾದ ಕಾಲಮಿತಿಯಾಗಲಿ ಅವರಿಗೆ ಇಷ್ಟವಾಗಲೀ ಇದ್ದಂತೆ ಕಂಡುಬರುತ್ತಿಲ್ಲ.

ಇನ್ನು ಸಾಗುವಳಿಯ ಭೂಮಿಯನ್ನು ಹಂಚತಕ್ಕ ವಿಚಾರದಲ್ಲೂ ಸಹಾ ಇವರು ತಾಲ್ಲೂಕು ಮಟ್ಟದಲ್ಲಿರತಕ್ಕ ತಾಶೀಲ್ದಾರನಿಗೆ ಅಧಿಕಾರವನ್ನು ಕೊಡದಿದ್ದರೆ ಇದು ಎಂದೂ ಮುಗಿಯುವುದಿಲ್ಲ. ಈ ಕಾರ್ಯವನ್ನು ಒಂದು ಪರಿಣಾಮಕಾರಿಯಾದ ರೀತಿಯಲ್ಲಿ ಈ ಸರ್ಕಾರ ನಡೆಸುತ್ತಿಲ್ಲ. ಆದರೆ ಇಲ್ಲಿ ಆಮೂಲಾಗ್ರವಾಗಿ ಬಂದಿದ್ದ ಆ ಗೇಣಿಪದ್ಧತಿಯೊಂದನ್ನು ಮಾತ್ರ ನಿರ್ಮೂಲವಮಾಡಿದ್ದಾರೆ. ಅದಕ್ಕೆ ಇವರಿಗೊಂದು ಕಿರೀಟ ಬಂದಹಾಗೆ ಆಗಿದೆ. ಇದಕ್ಕೂ ಸಹಾ ಕರ್ಣಾಟಕದ ಜನತೆ ಒಂದು ಆಶ್ಚರ್ಯಪಡಬಹುದು. ಏಕೆಂದರೆ ಇವರು ಇಲ್ಲಿ ಒಂದು ಅರಸೊತ್ತಿಗೆಯಲ್ಲಿ ಬೆಳೆದುಬಂದ ಜನತೆ. ಇವರು ಆ ಅರಸಗೆ ತಲೆ ತಗ್ಗಿಸಿ ನಡೆಯುತ್ತಿದ್ದಂತೆ ಭೂಸ್ವಾಮಿಗಳಿಗೂ ಆ ಗೇಣಿಜನರು ತಲೆ ತಗಿಸಿ ನಡೆಯುತ್ತಿದ್ದರು. ಆದರೆ ಈ ದಿವಸ ಅದು ಹೋಗಿ ಆ ಗೇಣಿ ಜನರು ಭೂಮಾಲೀಕರ ಎದುರಿನಲ್ಲಿ ತಲೆಎತ್ತಿ ನಡೆಯುವಂತಾಗಿದೆ. ಆದರೆ ಇಷ್ಟಕ್ಕೆ ಸರ್ಕಾರ ತೃಪ್ತಿಪಟ್ಟುಕೊಂಡರೆ ಸಾಲದು. 1957ರಲ್ಲಿ ಗೇಣೀದಾರರ ವಶದಲ್ಲಿದ್ದ ಭೂಮಿಯ ಪ್ರಮಾಣ 60 ಲಕ್ಷ ಎಕರೆಗಳು. ಇದನ್ನು ಮೊನ್ನೆ ಸರ್ಕಾರದವರು ಹೇಳುತ್ತಿರು ಪ್ರಕಾರ 20 ಲಕ್ಷಕ್ಕೆ ಇಳಿಸಿದ್ದಾರೆ. ಅಂದರೆ ಇನ್ನುಳಿದ 40 ಲಕ್ಷ ಎಕರೆ ಭೂಮಿ ಗೇಣಿದಾರರ ವಶದಲ್ಲಿದ್ದದ್ದು ಎಲ್ಲಿಗೆ ಹೋಯಿತು ?

ಆದುದರಿಂದ ಈ ಸಂದರ್ಭದಲ್ಲಿ ಒತ್ತಾಯಮಾಡುವುದು ಈ 40 ಲಕ್ಷ ಎಕರೆ ಗೇಣಿದಾರರ ಕೈನಿಂದ 1957 ರಿಂದ 1974 ರವರೆಗೆ ಕಿತ್ತುಕೊಂಡಿರುವ ಜಮೀನನ್ನು ಪತ್ತೆ ಹಚ್ಚಲು ಒಂದು ಆಯೋಗ ರಚನೆಮಾಡಬೇಕಾದ ಜವಾಬ್ದಾರಿ ಸರಕಾರದ ಮೇಲಿದೆ. ಭೂಸುಧಾರಣೆಯನ್ನು ಜಾರಿಗೆ ತರುವ ಹೊಣೆಯನ್ನು ಸರಕಾರದವರು ಭೂಪಂಚಾಯಿತಿಗಳಿಗೆ ವಹಿಸಿದ್ದಾರೆ. ಜನತಾ ಪಂಚಾಯಿತಿ ನಿರ್ಮಾಣಮಾಡುವಾಗ ಕೇವಲ ಕಾಂಗ್ರೆಸ್ಸಿನವರನ್ನೇ ಅದಕ್ಕೆ ಹಾಕಿದ್ದಾರೆ, ಒಳ್ಳೆಯದು.

10-00 A. M.

ಶ್ರೀ ಬದರೀನಾರಾಯಣ್‌ರವರನ್ನು ಜನತಾ ನ್ಯಾಯಾಲಯಕ್ಕೆ ಹಾಕಿದ್ದಾರೆ, ಅವರು ಸಾಗರ ತಾಲ್ಲೂಕಿನಲ್ಲಿಲ್ಲ, ಶಿವಮೊಗ್ಗದಲ್ಲಿದ್ದಾರೆ, ಅವರು ಹೇಗೆ ತೀರ್ಮಾನ ಮಾಡುವರೆಂಬುದನ್ನು ನೋಡಬೇಕು. ಅಂಥ ದೊಡ್ಡ ಭೂಪಾಲೀಕರಿಗೆ ನ್ಯಾಯದಾನ ಮಾಡುವ ಅಧಿಕಾರ ಕೊಟ್ಟಿದ್ದಾರೆ. ಯಾರು ಜಮೀನು ಬಿಟ್ಟುಕೊಡಬೇಕೋ ಅವರ ನ್ಯಾಯಾಲಯದಲ್ಲಿದ್ದು ತೀರ್ಮಾನ ಮಾಡುವ ಪರಿಸ್ಥಿತಿಯಿದೆ. ಕೆ. ಎಚ್. ಪಾಟೀಲರು ಒಂದು ಸಲ ಸಾಗರದಲ್ಲಿ ಭಾಷಣ ಮಾಡುವಾಗ ಕಾಂಗ್ರೆಸ್ಸಿಗೆ ಸೇರಿದರೆ ಅವರಿಗೆ ಸಂಬಂಧಪಟ್ಟವರಿಗೆ ನೌಕರಿ ಕೊಡುತ್ತೇವೆ. ಸೌಲಭ್ಯ ಒದಗಿಸುತ್ತೇವೆ ಎಂದು ಹೇಳಿದ್ದಾರೆ. ಇದು ಕ್ರಾಂತಿಕಾರಕ ಕಾರ್ಯಕ್ರಮ. ಭೂಸುಧಾರಣೆಯ ಕಾನೂನನ್ನು ಕಾರ್ಯಗತ ಮಾಡಬೇಕಾದರೆ ಅದಕ್ಕೆ ಸಂಬಂಧಪಟ್ಟ ತತ್ವಗಳಲ್ಲಿ ನಂಬಿಕೆಯಿರುವವರಿರಬೇಕು. ನಂಬಿಕೆ ಇಲ್ಲದಿರುವವರಿಗೆ ಆ ಕೆಲಸ ವಹಿಸಿದರೆ ನಮ್ಮ ಪ್ರಯತ್ನ ಸಂಪೂರ್ಣವಾಗಿ ನಿಷ್ಫಲವಾಗುವುದು. ಒಬ್ಬನಿಗೆ ನ್ಯಾಯದಾನ ಮಾಡಬೇಕಾದರೆ ಯಾವ ತತ್ವ ಅನುಷ್ಠಾನಕ್ಕೆ ತರಬೇಕು ಎಂಬುದನ್ನು ತಿಳಿದಿರುವ ಕಳಕಳಿ ಇರುವವರಿಗೆ ಈ ಕೆಲಸ ವಹಿಸಿದರೆ ಒಳ್ಳೆಯ ನ್ಯಾಯ ಜನರಿಗೆ ದೊರೆಯಲು ಸಾಧ್ಯ. ಅದನ್ನು ಬಿಟ್ಟು ಇತರರಿಗೆ ಈ ಕಾರ್ಯ ವಹಿಸಿದರೆ ವಿಫಲವಾಗುವುದು. ಇದಕ್ಕೆ ಜನರನ್ನು ಪಕ್ಷಪಂಗಡಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾಮಕರಣ ಮಾಡಬಾರದು, ಬೇರೆಯವರು ಈ ಕೆಲಸ ಸರಿಯಾಗಿ ಮಾಡುವುದಿಲ್ಲವೆಂಬ ಸಂಶಯ ಬೇಡ. ನಿಜವಾಗಿಯೂ ಸರಿಯಾಗಿ ಭೂಸುಧಾರಣಾ ಕಾನೂನನ್ನು ಜಾರಿಗೆ ತರಬೇಕಾದರೆ ಜಂಟಿ ಸಲಹಾ ಸಮಿತಿಯಲ್ಲಿದ್ದು ವಿಚಾರ ಚೆನ್ನಾಗಿ ತಿಳಿದಿರುವ ಶ್ರೀ ಸುಬ್ಬಯ್ಯಶೆಟ್ಟಿಯಂಥವರಿಗೆ ಈ ಕೆಲಸ ವಹಿಸಬೇಕು. ಅವರು ಈಗ ಭೂ ಸುಧಾರಣಾ ಖಾತೆ ಮಂತ್ರಿಯಾಗಿದ್ದಾರೆ. ಅವರಿಗೆ ಇದರ ವಿಚಾರ ಚೆನ್ನಾಗಿ ಗೊತ್ತಿದೆ. ಇಂಥ ಕೆಲಸವನ್ನು ಕಾರ್ಯಗತ ಮಾಡುವಾಗ ಬಹಳ ಜವಾಬ್ದಾರಿಯುತವಾಗಿ ಮಾಡಬೇಕು. ಹಾಗೆ ಮಾಡದಿದ್ದರೆ ಇಷ್ಟು ಕಷ್ಟಪಟ್ಟು ಮಾಡಿದ್ದೆಲ್ಲಾ ವಿಫಲವಾಗಿ ವ್ಯರ್ಥ ಚರ್ಚೆಯಲ್ಲಿ ಮುಕ್ತಾಯವಾಗುವುದು. ಆದುದರಿಂದ ಕಾರ್ಯಗತ ಮಾಡುವಾಗ ಭೂ ಪಂಚಾಯಿತಿಗೆ ಜನರನ್ನು ಹಾಕುವಾಗ ಚುನಾಯಿಸಿ ಸರಿಯಾದವರನ್ನು ಹಾಕಿ. ಹಾಗೆ ಮಾಡಿದರೆ ಜನತೆಗೆ ಅನುಕೂಲವಾಗುವುದು. ಬಿಜಾಪುರ, ಬೆಳಗಾಂ ಮುಂತಾದ ಕಡೆಗಳಲ್ಲಿ ಗೇಣಿದಾರರು ಧೈರ್ಯಶಾಲಿಗಳು, ಕೋರ್ಟಿನವರೆಗೆ ನ್ಯಾಯಕ್ಕಾಗಿ ಹೋಗುವರು. ಆದರೆ ನಮ್ಮ ಕಡೆ 1950 ರಿಂದಲೂ ಗೇಣಿದಾರರ ಸಂಘಟನೆ ಮಾಡಿದರೂ ಕೂಡ ಅವರಿಗೆ ಅರ್ಜಿ ಹಾಕುವುದಕ್ಕೆ ಧೈರ್ಯವಿಲ್ಲ, ಹೆದರುತ್ತಿದ್ದಾರೆ. ಅವರು ಕೇವಲ ಹಿಂದುಳಿದ ಜನರು, ಅವರಿಗೆ ಭಯ. ಆದುದರಿಂದ ಭೂಸುಧಾರಣೆಯನ್ನು ಜಾರಿಗೆ ತರುವಾಗ ಒಂದು ಸರಿಯಾದ ವಾತಾವರಣವನ್ನು ಸೃಷ್ಟಿ ಮಾಡಬೇಕು. ಕೇವಲ ಕಾನೂನಿಂದ ಜನತೆಗೆ ಅನುಕೂಲವಾಗುವುದಿಲ್ಲ. ಸಮಾಜದಲ್ಲಿ ಪರಿವರ್ತನೆಯಾಗಬೇಕು. ಹಾಗೆ ಮಾಡಿದರೆ ಮಾತ್ರ ಈ ಕಾನೂನು ತತ್ವಶಃ ಸರಿಯಾಗಿ ಅನುಷ್ಠಾನಕ್ಕೆ ಬರುವುದು. ಹಾಗಿಲ್ಲದೆ ಕೇವಲ ಚುನಾವಣೆಗಾಗಿ ಇದನ್ನು ಮಾಡಿದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಘೋರ್ಪಡೆಯವರು ಅವರ ಕ್ಷೇತ್ರದಲ್ಲಿ ಹೇಗೆ ಮಾಡುವರೋ ನೋಡಬೇಕು. ವೀರಭದ್ರಪ್ಪನವರು ಅವರ ಕ್ಷೇತ್ರದಲ್ಲಿದ್ದಾರೆ. ಇದನ್ನು ಯಶಸ್ವಿಯಾಗಿ ಜಾರಿಗೆ ತರುತ್ತೇವೆಂದು ಪ್ರತಿಜ್ಞೆಮಾಡಿ ಅದರಂತೆ ಕಡ್ಡಾಯವಾಗಿ ನಡೆಯಬೇಕೆಂದು ಕಳಕಳಿಯಿಂದ ಹೇಳುತ್ತೇನೆ. ಈಗಾಗಲೇ ಸಮಯ ಸಾಕಷ್ಟಾಗಿದೆ, ಕಾಲವಿಳಂಬ ಮಾಡಿದರೆ ಸಾಕಷ್ಟು ಅನುಕೂಲವಾಗುವುದಿಲ್ಲ. ಪಂಚಾಯಿತಿಗಳನ್ನು ಕೆಲವು ಕಡೆ ಮಾಡಿದ್ದಾರೆ, ಇನ್ನು ಕೆಲವು ಕಡೆ ಮಾಡಿಲ್ಲ. ಇದಕ್ಕೆ ತಕ್ಕ ಸಿಬ್ಬಂದಿಯಿಲ್ಲವೆಂದು ಹೇಳುವುದು ಕೇಳಿಬರುತ್ತಿದೆ. ಕಾಲ ತಳ್ಳಿದರೆ ನಿಧಾನಮಾಡಿದರೆ ಉಪಯೋಗವಾಗುವುದಿಲ್ಲ. ದೊಡ್ಡ ಕೆಲಸ ಇದು. ಇದರ ಬಗ್ಗೆ ದೊಡ್ಡ ಸಾಹಸ ಮಾಡಬೇಕು, ಕಷ್ಟಪಡಬೇಕು. ನಿಷ್ಠೂರಕ್ಕೆ ಗುರಿಯಾಗಬೇಕು. ಇದನ್ನೆಲ್ಲಾ ಮಾಡಿದರೆ ಮೆಚ್ಚುವಂತೆ ಕಾರ್ಯವಾಗುವುದು. ಒಳ್ಳೆಯ ಜನರನ್ನು ಹಾಕಿ ಬುದ್ಧಿವಂತಿಕೆಯಿಂದ ಕೆಲಸಮಾಡಿ ಒಳ್ಳೆಯ ವಾತಾವರಣ ಕಲ್ಪಿಸಬೇಕು. ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುತ್ತೇನೆ ಈಗ ಭೂಶಾಸನ ಜಾರಿಗೆ ಬಂದಿದೆ, ಕೆಲವು ಸಣ್ಣ ಹಿಡುವಳಿದಾರರ ಭೂಮಿ, ನಾಲ್ಕಾರು ಎಕರೆ ಗೇಣಿದಾರರಿಗೆ ಹೋಗಿದೆ, ಅವರಿಗೆ ಅಡ್‌ಹಾಕ್ ಆಗಿ ಹಣ ಕೊಡುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಪ್ರತಿಯೊಂದು ತಾಲ್ಲೂಕಿನಲ್ಲೂ ಅಂಥವರಿಗೆ, ನಾಲ್ಕೈದು ಎಕರೆಗಳಿದ್ದವರಿಗೆ ತೊಂದರೆಯಾಗುವುದು. ನೂರು ಜನರಿಗೆ ಅನುಕೂಲ ಮಾಡಿ ಕೆಲವರಿಗೆ ಅನಾನುಕೂಲ ಮಾಡಬಾರದು. ಒಳ್ಳೆಯ ಕೆಲಸ ಮಾಡುವಾಗ ಯಾರೂ ಕೂಡ ತಮಗೆ ಅನ್ಯಾಯವಾಯಿತೆಂದು ಗೊಣಗಬಾರದು. ಹಾಗಾಗುವುದಕ್ಕೆ ಅವಕಾಶ ಕೊಡಬಾರದು. ಎಲ್ಲರಿಗೂ ತೃಪ್ತಿಯಾಗುವಂತೆ ಕೆಲಸಮಾಡಬೇಕು. ಸಣ್ಣ ಹಿಡುವಳಿದಾರರಿಗೆ ಒಂದೇ ಗಂಟಿನಲ್ಲಿ ಹಣ ಕೊಟ್ಟರೆ ಪರಿಹಾರ ನೀಡಿದರೆ ಅವರು ಬೇರೆ ದಂಧೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗುವುದು. ಧರ್ಮಸ್ಥಳ ಮುಂತಾದ ಕಡೆ

ದಣಿಯು ಜಮೀನನ್ನು ಪಡೆದುಕೊಂಡರೆ ಏನಾಗುವುದೋ ಎಂಬ ಭಯ ಕೆಲವರಿಗಿದೆ, ಭೂತದ ಭಯವಿದೆ. ಗೇಣಿದಾರರಿಗೆ ರಕ್ಷಣೆ ಕೊಡುವಾಗ ಸಣ್ಣ ಹಿಡುವಳಿದಾರರು ಮುಂತಾದವರು ಶಾಪ ಹಾಕಲು ಅವಕಾಶ ಕೊಡಬಾರದು.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಈ ಬಗ್ಗೆ ಸರಕಾರಕ್ಕೆ ಕಳಕಳಿಯಿದೆ, ಈ ಬಿಲ್ಲನ್ನು ತಂದಿರುವ ಉದ್ದೇಶವೇ ಅವರಿಗೆ ರಿಲೀಫ್ ಕೊಡಬೇಕೆಂಬುದಾಗಿದೆ. 1965 ರಿಂದ 1974 ರವರೆಗೆ ಪ್ರತಿವರ್ಷ ಕೋರ್ಟಿಗೆ ಹೋಗಬೇಕಾದ ಸಂದರ್ಭವಿತ್ತು, ಕೆಲವು ಕಡೆ ಗೇಣಿ ನಿರ್ಣಯವಾಗದೆ ಅದು ಸಿಕ್ಕುತ್ತಾ ಇರಲಿಲ್ಲ. ಕೋರ್ಟಿಗೆ ಹೋಗಿ ಖರ್ಚು ಮಾಡಬೇಕಾಗಿತ್ತು. ಈಗ ಅಂಥವರಿಗೆ ತಕ್ಷಣ ರಿಲೀಫ್ ದೊರೆಯುವುದು, ಕೋರ್ಟಿಗೆ ಹೋಗುವುದು ತಪ್ಪುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಇನ್ನೂ ಮೂರು ಕಾರ್ಯಕ್ರಮಗಳಿವೆ. ದುರ್ಬಲರಿಗೆ ದವಸಧಾನ್ಯ ಪೂರೈಕೆಯಾಗಬೇಕು, ಅವರು ಗ್ರಾಮಾಂತರ ಪ್ರದೇಶಗಳಲ್ಲಿದ್ದಾರೆ. ಗ್ರಾಮಾಂತರ ಪ್ರದೇಶದ ಜನರಿಂದ ಲೆವಿ ಮುಖಾಂತರ ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಿ, ತಮ್ಮ ವಶಕ್ಕೆ ತೆಗೆದುಕೊಳ್ಳುತ್ತೀರಿ. ಆದರೆ ಅದನ್ನು ಗ್ರಾಮಾಂತರ ಪ್ರದೇಶದ ಜನರಿಗೆ ಹಂಚುವ ಪ್ರಶ್ನೆಯೇ ಇಲ್ಲ. ಸರ್ಕಾರದವರು ಕೇವಲ ಪೇಟೆಯಲ್ಲಿರತಕ್ಕ ಗಲಾಟೆ ಜನರನ್ನು ತೃಪ್ತಿ ಪಡಿಸಿದರೆ ಸಾಕು ಎಂದು ತಿಳಿದುಕೊಂಡಿದ್ದಾರೆ. ಹಳ್ಳಿಯವರನ್ನು ಕೇಳುವವರೇ ಇಲ್ಲ. ಇವತ್ತು ಗ್ರಾಮಾಂತರ ಪ್ರದೇಶದ ಒಬ್ಬ ಹರಿಜನರಿಗೂ ಒಂದು ತಿಂಗಳಿಗೆ ಒಂದು ಕೆ. ಜೆ. ಅಕ್ಕಿಯೂ ಸಿಗುತ್ತಿಲ್ಲ. ಸಾಮಾನ್ಯನಿಗೆ ತೃಪ್ತಿಯಾಗಿ ಆಹಾರಧಾನ್ಯ ವಿತರಣೆಯಾಗುತ್ತದೆ ಎನ್ನುವ ಮಾತು ನಿಜಕ್ಕೆ ದೂರವಾದ ಸಂಗತಿ. ನೀವು ಕಾರ್ಯತಃ ಮಾಡಿ ತೋರಿಸಿದರೆ ಮಾತ್ರ ನಂಬುತ್ತೇನೆ, ನೀವು ನಡೆಸಿರತಕ್ಕ ಕ್ರಮದಿಂದ ನಂಬಿಕೆ ಬರುವ ಹಾಗಿಲ್ಲ. ಸಣ್ಣ ರೈತರಿಗೆ ಧನಸಹಾಯ ನೀಡಿಕೆಯ ಬಗ್ಗೆ ಹೇಳಿದ್ದಾರೆ. ಸರ್ಕಾರದ ಅಂಕಿಅಂಶಗಳ ಆಧಾರದ ಮೇಲೆ ಸಣ್ಣ ಹಿಡುವಳಿದಾರರು ಶೇಕಡ 23 ಪರ್ಸೆಂಟ್ ಇದ್ದಾರೆ, ಮಾರ್ಜಿನಲ್ ಫಾರ್ಮರ್ಸ್ ಮತ್ತು ಸ್ಮಾಲ್ ಹೋಲಡ್ಸ್ ಶೇಕಡ 40 ಭಾಗ ಇದ್ದಾರೆ. ಇವತ್ತು ಸಹಕಾರ ಸಂಘಗಳ ಮುಖೇನ ಸರ್ಕಾರ ಅನೇಕರಿಗೆ ಸಾಲಭ್ಯವನ್ನು ಸಲ್ಲಿಸುತ್ತಿದೆ. ಇದನ್ನು ಲೆಕ್ಕ ಹಾಕಿ ನೋಡಿದರೆ ಮಾರ್ಜಿನಲ್ ಫಾರ್ಮರ್ಸ್ ಶೇಕಡ 20ಕ್ಕಿಂತ ಜಾಸ್ತಿಯಿಲ್ಲ, ಇವತ್ತು ಅವರು ಯಾವುದೇ ಸಹಕಾರ ಸಂಘದಿಂದ ಸೌಲಭ್ಯ ತೆಗೆದುಕೊಂಡಿರತಕ್ಕ ಪ್ರಸಂಗ ಇಲ್ಲ. ನೂರಾರು ಜನ ವ್ಯವಸಾಯಗಾರರು ಇದ್ದಾರೆ, ಆದರೆ ಸಾಲಭ್ಯ ಸಿಕ್ಕಿರುವುದು ಒಬ್ಬಿಬ್ಬರಿಗೆ ಮಾತ್ರ. ಸಣ್ಣ ಹಿಡುವಳಿದಾರರ ಯೋಜನೆಯನ್ನು ಕೆಲವು ಕಡೆಗಳಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ರಾಜ್ಯದಾದ್ಯಂತ ಸಣ್ಣ ಹಿಡುವಳಿದಾರರ ಅಭಿವೃದ್ಧಿ ಯೋಜನೆಯನ್ನು ಕೃಷಿಕ್ಷೇತ್ರದಲ್ಲಿ ಕಾರ್ಯಗತ ಮಾಡದೇ ಹೋದರೆ ತಮ್ಮ ಯೋಜನೆಗಳು ಪ್ರಯೋಜನವಾಗುವುದಿಲ್ಲ. ಇವತ್ತು ಹಣದ ಸೌಲಭ್ಯ ಸಿಕ್ಕುವುದು ದೊಡ್ಡವರಿಗೆ ಮಾತ್ರ. ಎಲ್ಲಿಯೂ ಕೂಡ ದುರ್ಬಲವರ್ಗ ಮತ್ತು ಸಣ್ಣ ರೈತರಿಗೆ ಸೌಲಭ್ಯ ಸಿಕ್ಕಿಲ್ಲ. ಸಣ್ಣ ರೈತರು ಕೃಶರಾಗುತ್ತಿದ್ದಾರೆ. ಇದನ್ನು ಸಮತೋಲನ ಮಾಡಬೇಕಾದರೆ ಸಣ್ಣರೈತರಿಗೆ ವಿಶೇಷ ಸಹಾಯವನ್ನು ಮಾಡುವುದಕ್ಕೆ ವಿಶೇಷವಾದಂಥ ಕ್ರಮವನ್ನು ಕೈಗೊಳ್ಳಬೇಕು ಎಂದು ಒತ್ತಾಯಪಡಿಸುತ್ತೇನೆ.

ಪಂಚಾಯತಿ ಮತ್ತು ತಾಲ್ಲೂಕು ಬೋರ್ಡು ಸಂಸ್ಥೆಗಳನ್ನು ಬಲಪಡಿಸುವ ಯೋಜನೆಯನ್ನು ಹಾಕಿಕೊಂಡಿದ್ದೇವೆಂದು ತಿಳಿಸಿದ್ದಾರೆ. ಬಲಪಡಿಸಬೇಕು ಎಂದರೆ ಅರ್ಥ ಅವುಗಳ ಕತ್ತನ್ನು ಹಿಚುಕುವುದು ಎಂದು. ಕಳೆದ ಅಧಿವೇಶನದಲ್ಲಿ ಚುನಾವಣೆಗಳನ್ನು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು, ಇನ್ನೂ ಮಾಡುವುದರಲ್ಲೇ ಇದ್ದಾರೆ. ಇದರ ಜೊತೆಗೆ ವಿಶೇಷ ಆಡಳಿತಾಧಿಕಾರಿಗಳನ್ನು ನೇಮಿಸಿ ಕಾಂಗ್ರೆಸ್ ಮಾಡಿದ್ದಾರೆ. ಧೈರ್ಯವಿದ್ದರೆ ಚುನಾವಣೆಯನ್ನು ಮಾಡಲಿ, ಎರಡು ತಿಂಗಳಲ್ಲಿ ಮಾಡಬಹುದು. ಆರು ತಿಂಗಳಾದನಂತರವೂ ಚುನಾವಣೆಗಳನ್ನು ಮಾಡುವುದಕ್ಕಾಗುವುದಿಲ್ಲ. ಇನ್ನು ಎರಡು ತಿಂಗಳಲ್ಲಿ ಮಳೆಗಾಲ ಬರುತ್ತದೆ. ಪಂಚಾಯತಿಗಳನ್ನು ಬಲಪಡಿಸಬೇಕು ಎಂದರೆ ಪಂಚಾಯಿತಿಗಳ ಚುನಾವಣಾ ಅವಧಿಯನ್ನು ವಿಸ್ತಾರಮಾಡಿ, ತಾಲ್ಲೂಕು ಬೋರ್ಡುಗಳ ಅವಧಿಯನ್ನು ವಿಸ್ತಾರ ಮಾಡಿರಿ. ಅದನ್ನು ಬಿಟ್ಟು ಬಿ.ಡಿ.ಒ.ಗಳನ್ನು ಹಾಕುತ್ತೀರಿ. ಅವರು ಸರಿಯಾಗಿ ಕೆಲಸಮಾಡುವವರಾದರೆ ಸರಿ. ನಮ್ಮಲ್ಲಿ ಒಬ್ಬರು ಇದ್ದರು, ಅವರನ್ನು ಈಗ ತರೀಕೆರೆಗೆ ಹಾಕಿದ್ದಾರೆ. ಅಲ್ಲಿಯ ಜನರು ಬಂದು ಹೇಳುತ್ತಿದ್ದರು, ಅವರು ನಮ್ಮ ಊರಿಗೆ ಬಂದು ಎರಡು ಪಾರ್ಟಿ ಮಾಡಿದ್ದಾರೆಂದು. ಇಂಥವರ ಕೈಗೆ ತಾಲ್ಲೂಕು ಬೋರ್ಡುಗಳು ಸಿಕ್ಕಿದರೆ ಗತಿ ಬೇಡ. ಡೈರಿ ತೋರಿಸಿ, ಅಲೋಯನ್ಸ್ ಇತ್ಯಾದಿ ಡ್ರಾ ಮಾಡಿರುತ್ತಾರೆ. ಅಂಥವರನ್ನು ಹಾಕಿ ಇರುವ ಹಣವನ್ನು ಹಾಳುಮಾಡುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಚುನಾವಣೆಗಳನ್ನು ಆದಷ್ಟು ಬೇಗ ಮಾಡಿ ಎನ್ನತಕ್ಕ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ.

ಇವತ್ತಿನದಿವಸ ಸಹಕಾರ ಸಂಘಗಳು ನಿರ್ನಾಮವಾಗಿದೆ. ಹಿಂದೆ ಶ್ರೀಆಳ್ವ ಅವರು ಸಹಕಾರ ಸಚಿವರಾಗಿದ್ದಾಗ ಒಂದು ಭರವಸೆ ಕೊಟ್ಟಿದ್ದರು. ಏನೆಂದರೆ, ಸಹಕಾರ ಸಂಘಗಳ ಆಡಿಟ್ ಮಾಡುವುದಕ್ಕೆ ಒಂದು ವಿಶೇಷ ಸೆಲ್ ಮಾಡುತ್ತೇವೆಂದು. ಇವತ್ತು ಏನಾಗಿದೆ ಎಂದರೆ, ನಾವು ಇತ್ತೀಚೆಗೆ ಮಾನ್ಯ ಶ್ರೀಕಂಠಯ್ಯನವರ ಫೆಡರೇಷನ್‌ಗೆ ಹೋದಾಗ, ಅಲ್ಲಿ ಹೋದವರ್ಷ, ಮತ್ತು ಹಿಂದಿನ ವರ್ಷವ ಆಡಿಟ್ ಮಾಡಿ ಒಳ್ಳೆಯ ಸರ್ಟಿಫಿಕೇಟ್ ಕೊಟ್ಟಿದ್ದಾರೆ. 'ಎ' ಕ್ಲಾಸ್ ಸೊಸೈಟಿ ಎಂದೂ, ಅಧ್ಯಕ್ಷರು ಚೆನ್ನಾಗಿ ಕೆಲಸಮಾಡಿದ್ದಾರೆಂದೂ ಹೇಳಿದ್ದಾರೆ. ಅದನ್ನು ನೋಡಬೇಕು. 4–5 ವರ್ಷದಿಂದ, ದುಡ್ಡು ಕೊಟ್ಟಿದ್ದನ್ನು ಜಮ ತೆಗೆದುಕೊಂಡಿಲ್ಲ. 1972–73ನೇ ಇಸವಿಯ ಲೆಕ್ಕ ಇಲ್ಲ, ಆಡಿಟರ್ ಸರ್ಟಿಫಿಕೇಟ್ ಮಾತ್ರ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಶ್ರೀಕಂಠಯ್ಯನವರು ಅಧಿಕಾರದಲ್ಲಿ ಇರಲೇಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಅವಕ್ಕೆ ನಾವು ಮುಗುಮ್ಮಾಗಿ ಹೇಳಿದ್ದು, ನಾಳೆ ಬಹಿರಂಗವಾಗಿ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಸಮಿತಿಯವರು ಅದನ್ನು ವಿಚಾರಣೆ ಮಾಡಬೇಕು. ಲಕ್ಷಾಂತರ ರೂಪಾಯಿಗಳ ವ್ಯವಹಾರ ಅಲ್ಲದೆ. ಆದ್ದರಿಂದ ಅವರು ಬೇಗ ರಾಜೀನಾಮೆ ಕೊಡಬೇಕು. ಸಹಕಾರಿಕ್ಷೇತ್ರದಲ್ಲಿ ಸಹಕಾರಿ ಸಂಘಗಳು ಕೊಳೆತು ನಾರುತ್ತಿವೆ. ಇದನ್ನು ಸರಿಪಡಿಸುವುದಕ್ಕೆ ಬಲವಾದಂಥ ವ್ಯಕ್ತಿ ಬೇಕು. ಇವುಗಳು ರಾಜಕಾರಿಣಿಗಳ ಕೈಗೆ ಸಿಕ್ಕಿದರೆ ಜನರನ್ನು ಕೊಲ್ಲುತ್ತಾರೆ. ಲಕ್ಷಾಂತರ, ಕೋಟ್ಯಂತರ ರೂಪಾಯಿಗಳ ದುರ್ವಿನಿಯೋಗವಾಗಿದೆ. ಯಾವುದೇ ಸೊಸೈಟಿಯನ್ನು ತೆಗೆದುಕೊಂಡರೂ ಸಹ, ಅದು ಕೊಳೆತು ನಾರುತ್ತಿದೆ.ಕಾರಣ ಏನೆಂದರೆ,ಆಡಿಟರ್ ಅವರು ಪ್ರತಿವರ್ಷದ ವ್ಯವಹಾರವನ್ನು ಸರಿಯಾಗಿದೆ ಎಂದು ಹೇಳುತ್ತಾರೆ. ಸೊಸೈಟಿಯವರು ಇವರಿಗೆ ಊಟ ಹಾಕಿಸುತ್ತಾರೆ, ಕುಡಿಸುತ್ತಾರೆ, ಆದ್ದರಿಂದ ಇವರು ಸರ್ಟಿಫಿಕೇಟ್ ಬರೆದುಕೊಟ್ಟು ಹೋಗುತ್ತಾರೆ. ಪವಿತ್ರವಾದ ಸಹಕಾರಿಕ್ಷೇತ್ರ ದುಷ್ಟ ಶಕ್ತಿಗಳಿಂದ ಬೇರ್ಪಡಿಸಬೇಕು ಎಂದರೆ ಒಂದು ಆಡಿಟಿಂಗ್ ಸೆಲ್ ಅನ್ನು ಮಾಡಬೇಕು ಇಲ್ಲದೇ ಹೋದರೆ ಇವನ್ನು ಬಲಪಡಿಸುವ ಮಾತು ತಮಾಷೆಗೆ ಹೇಳಿದ ಹಾಗೆ ಆಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಸಹಕಾರಿ ಜನರಿದ್ದಾರೆ ಎಂದು ಮಾನ್ಯ ಕೆ. ಎಚ್. ಪಾಟೀಲರು ನ್ಯಾಷನಲ್ ಲೆವೆಲ್ ಮಾತನ್ನು ಹೇಳಿದರು. ನಮ್ಮ ರಾಜ್ಯದಲ್ಲಿಯೂ ಒಂದೊಂದು ಸೊಸೈಟಿಯನ್ನು ಒಬ್ಬೊಬ್ಬರ ಕೈಗೆ ಕೊಟ್ಟುಬಿಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಕೃಷ್ಣಡೈರಿ ಮಾಡಿದ ಹಾಗೆ ಆಗುತ್ತದೆ. ಇನ್ನು ಗ್ರಾಮೀಣ ಸಂಪರ್ಕ, ರಸ್ತೆ ಸಾರಿಗೆ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. 1972-73ನೇ ಇಸವಿಯಲ್ಲಿ ಏನು ರಸ್ತೆಗಳು ಆಗಿವೆ, ಅಷ್ಟೆ ಇವತ್ತಿನವರೆಗೂ ಏನೂ ಆಗಿಲ್ಲ. ಚೆನ್ನಬಸಪ್ಪನವರು ಏನೋ ತಮ್ಮ ಕಾಲದಲ್ಲಿ ತಮ್ಮ ಕ್ಷೇತ್ರದ ರಸ್ತೆಗಳನ್ನು ಮಾಡಿಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ಏನು ಕೆಲಸ ನಡೆಯುತ್ತಿದೆ ಎನ್ನುವುದನ್ನು ನೋಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ದೊಡ್ಡ ಸೇತುವೆಯನ್ನು ಕಟ್ಟುವುದಕ್ಕೆ ಆಗಿಲ್ಲ. ಇದಕ್ಕಾಗಿ ಒಂದು ಕಾರ್ಪೊರೇಷನ್ ಮಾಡುತ್ತೇವೆಂದು ಹೇಳುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ತಕ್ಷಣ 8-10 ಕೋಟಿ ರೂಪಾಯಿಗಳ ಕೆಲಸ ಮಾಡತಕ್ಕಂಥ ಸಾಹಸವನ್ನು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಪ್ರಾರಂಭದಲ್ಲಿ 'ಮೀಸಾ' (M.I.S.A.) ಪ್ರತ್ಯೇಕವಾದ ಹೊಸ ಕಾಯಿದೆಯನ್ನು ಜಾರಿಗೆ ತಂದು ಕಳ್ಳಸಾಗಾಣಿದಾರರನ್ನು ಬಂಧನದಲ್ಲಿಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಹಿಂದೆ ಶ್ರೀಮಾನ್ ಎಸ್. ಎಂ. ಕೃಷ್ಣ ಅವರ ಬಗ್ಗೆ ಸಂಸ್ಥಾ ಕಾಂಗ್ರೆಸ್‌ನವರು ಚಾರ್ಜ್ ಷೀಟ್ ಕೊಟ್ಟಿದ್ದರು. ಅವರನ್ನು ಏಕೆ ಮೀಸಾ ಒಳಗೆ ಸೇರಿಸಲಿಲ್ಲ ? ಅಪಾದನೆಗೆ ಒಳಗಾಗಿರುವವರನ್ನು. ಮೀಸಾ ಒಳಗೆ ತರಬೇಕಾಗಿತ್ತು,. ಇದರಲ್ಲಿ ಅನೇಕ ಮಂತ್ರಿಗಳನ್ನೂ ತರಬೇಕಾಗಿತ್ತು.

ಶ್ರೀ ಬಿ. ಬೈರಪ್ಪಾಜಿ.—ಶ್ರೀಮಾನ್ ಕೃಷ್ಣಾರವರ ಮೇಲೆ ಅಪಾದನೆ ಬಂದಾಗ ಅವರು ಏನು ಮಾಡಿದರು ಎಂದರೆ ತಮ್ಮ ಮಂತ್ರಿ ಪದವಿಗೆ ರಾಜಿನಾಮೆಯನ್ನು ಮುಖ್ಯ ಮಂತ್ರಿಗಳಿಗೆ ಕೊಟ್ಟರು. ಅವರ ಮೇಲಿನ ಅಪಾದನೆ ನಿರಾಧಾರವಾದುದು ಎಂದು ಮುಖ್ಯಮಂತ್ರಿಗಳಿಗೆ ಗೊತ್ತಾದ ಮೇಲೆ ಅವರ ರಾಜೀನಾಮೆಯನ್ನು ಒಪ್ಪಿಕೊಳ್ಳಲಿಲ್ಲವಾದ್ದರಿಂದ ಅದನ್ನು ಶ್ರೀಮಾನ್ ಕೃಷ್ಣಾರವರು ವಾಪಸ್ಸು ಪಡೆದರು ಎಂದು ತಮ್ಮೆಲ್ಲರಿಗೂ ತಿಳಿದ ವಿಷಯವೇ ಆಗಿದೆ.

(Intrruption)

ಅಧ್ಯಕ್ಷರು.—ಎಲ್ಲರೂ ಮಧ್ಯೆ ಮಧ್ಯೆ ಪ್ರವೇಶಮಾಡಿ ಸಮಯವನ್ನು ವ್ಯರ್ಥಮಾಡಿದರೆ ಹೇಗೆ ಮಾಡುವುದು ? ಈಗ ನನ್ನ ಹತ್ತಿರ 21 ಜನರ ಹೆಸರುಗಳು ಇವೊತ್ತಿನ ದಿವಸ ಮಾತನಾಡಬೇಕಾದ ವರದು ಇದೆ. ನಮಗೆ ಉಳಿದಿರುವುದು ಕೇವಲ ಮೂರು ಘಂಟೆಗಳ ಕಾಲ. ಅವರಲ್ಲಿ ಎಲ್ಲರೂ ಮಾತನಾಡಬೇಕು. ಸರಾಸರಿ 8 ನಿಮಿಷಗಳು ಬರುತ್ತವೆ. ಅವರವರ ಕ್ಷೇತ್ರಗಳ ವಿಷಯಗಳ ಬಗ್ಗೆ ಪ್ರತಿಯೊಬ್ಬರೂ ಮಾತನಾಡಬೇಕು, ಈ ರೀತಿ ಮಧ್ಯೆ ಎದ್ದು ಮಾತನಾಡುತ್ತಿದ್ದರೆ ನಿಮ್ಮ ಸರದಿ ಬಂದಾಗ ಅದನ್ನು ಕಳೆಯಬೇಕಾಗುತ್ತದೆ, ದಯಮಾಡಿ ಯಾರೂ ಮಧ್ಯೆ ಮಧ್ಯೆ ಮಾತನಾಡಬಾರದು.

ಶ್ರೀ ಹೆಚ್. ಡಿ. ದೇವೇಗೌಡ.—ದಯವಿಟ್ಟು ಒಂದು ನಿಮಿಷ ಕೊಡಿ. ತಾವು ರೇಗಿ ಕೊಳ್ಳಬೇಡಿ.

ಅಧ್ಯಕ್ಷರು.—ನಾನು ರೇಗಿಕೊಳ್ಳುವ ಚಾನ್ಸ್ ನನಗೆಲ್ಲಿದೆ. ?

ಶ್ರೀ ಹೆಚ್. ಡಿ. ದೇವೇಗೌಡ —ಕಳೆದ ವರ್ಷ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯಕ್ಕೆ ಏಳು ದಿವಸಗಳ ಕಾಲ ಇತ್ತು, ಈ ವರ್ಷ 5 ದಿವಸಗಳು ಇವೆ. ಮುಂದಿನ ವರ್ಷದಿಂದ ಒಂದು ದಿವಸವಾಗುತ್ತದೋ ಏನೋ ?

ಅಧ್ಯಕ್ಷರು.—ಇದು ನಾನು ಮಾಡಿದ್ದಲ್ಲ. ತಾವು ಕೂಡ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದ್ದಿರಿ. ಇದು ತಾವು ಮಾಡಿದ್ದು.

ಶ್ರೀ ಹೆಚ್. ಡಿ. ದೇವೇಗೌಡ.—ಇದಕ್ಕೆ ವಿವರಣೆ ಕೊಡಬೇಕಾಗುತ್ತದೆ. ಏತಕ್ಕೆಂದರೆ ಆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಧ್ಯೆಮಿ ಇರುವುದು ನಾನೊಬ್ಬನೇ. ನಾನು ನಿಮ್ಮ ಮತ್ತು ನಿಮ್ಮ ಸರ್ಕಾರದವರ ಜೊತೆಗೆ ಕುಸ್ತಿಮಾಡಬೇಕು. ನಮ್ಮ ಪರಿಸ್ಥಿತಿ ಇಲ್ಲಿಗೆ ಬಂದು ನಿಂತಿದೆ. ಕಳೆದಸಾರಿ ರಾಜ್ಯಪಾಲರ ಭಾಷಣ ಮತ್ತು ಆಯವ್ಯಯ ಪಟ್ಟಿಯ ಚರ್ಚೆಗೆ 24 ದಿವಸ ಕೊಟ್ಟಿರಿ. ಈ ಸಾರಿ ಅಷ್ಟು ಕೂಡ ಇಲ್ಲ.

ಅಧ್ಯಕ್ಷರು.—ಆಯಿತು ಇನ್ನು ಮುಗಿಸಿ.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಜಾಪ್ರಭುತ್ವದಲ್ಲಿ ಆಪಾದನೆ ಮತ್ತು ಪ್ರತಿ ಆಪಾದನೆಗಳು ಬರುತ್ತವೆ. ಇನ್ನು ಹೇಳುವುದಾದರೆ ಶರಾವತಿಯಲ್ಲಿ ನಡೆದಿರತಕ್ಕಂಥ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಬೇಕೆಂದು ನಾವು ಕೇಳುತ್ತೇವೆ. ಇದೇ ರೀತಿ ಇನ್ನೂ ಅನೇಕ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಬೇಕೆಂದು ನಾವು ಹೇಳಿಕೊಂಡು ಬರುತ್ತಲೇ ಇದ್ದೇವೆ. ಆದರೆ ಸರ್ಕಾರ ದವರು ಯಾವುದರ ಕಡೆಗೂ ಗಮನಕೊಡುತ್ತಿಲ್ಲ. ಈ ರೀತಿ ಮಾಡಿದರೆ ಪ್ರಬಲವಾದ ವಿಚಾರಣೆ ಯನ್ನು ಯಾರು ಜನರು ಇದ್ದಾರೆ ಅವರೇ ಮಾಡಿಕೊಳ್ಳಬೇಕಾದ ಸಮಯ ಬರುತ್ತದೆ. ಆದ್ದರಿಂದ ಸರ್ಕಾರ ಯಾರಮೇಲೇ ಆಪಾದನೆ ಇರಲಿ ಮಂತ್ರಿಗಳಾಗಲಿ, ಶಾಸಕರಾಗಲಿ ಅವರಮೇಲೆ ತೀವ್ರ ವಾಗಿ ವಿಚಾರಣೆಮಾಡಿ ಅದಕ್ಕೆ ಪರಿಹಾರ ಕಂಡುಹಿಡಿದು ಪ್ರಜಾಪ್ರಭುತ್ವದ ಆಧಾರದಮೇಲೆ ರಚಿತವಾಗಿರುವ ಸರ್ಕಾರ ಅದರ ಹೊಣೆಗಾರಿಕೆಯನ್ನು ನಿರ್ವಹಿಸುವುದು ಅವರ 'ಕರ್ತವ್ಯವಾಗಿರು ತ್ತದೆ. ಆ ರೀತಿ ವಿಚಾರಣೆ ಮಾಡದೆ ಹೋದಲ್ಲಿ ಜನರೇ ವಿಚಾರಣೆ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಶ್ರೀಮಾನ್ ಜಯಪ್ರಕಾಶ್ ನಾರಾಯಣ್'ರವರು ಏನು ಒಂದು ಚಳುವಳಿಯನ್ನು ಪ್ರಾರಂಭಿಸಿದ್ದಾರೆ ಅದೇ ರೀತಿ ಎಲ್ಲಾ ಕಡೆಯೂ ಆವರಿಸುತ್ತದೆ. ಆದ್ದರಿಂದ ಇವೊತ್ತು ಸ್ವಜನ ಪಕ್ಷಪಾತ, ಪಾರ್ಟಿಪಕ್ಷಪಾತ ಇರಕೂಡದೆಂದು ಜೊತೆಗೆ ನಾವು ಪ್ರಜಾಪ್ರತಿನಿಧಿಗಳಾಗಿ ಇಲ್ಲಿ ಬಂದಿರು ವಾಗ ಯಾವುದೇ ಆಪಾದನೆ ಬಂದರೆ ಬಹುಶಃ ಸ್ವಯಂ ಪ್ರೇರಣೆಯಿಂದ ಅದಕ್ಕೆ ತಲೆಬಾಗಿಸ ಬೇಕಾಗುತ್ತದೆ. ಇಲ್ಲದೇ ಹೋದ ಪಕ್ಷದಲ್ಲಿ ಪ್ರಜಾಪ್ರಭುತ್ವದ ತತ್ವಕ್ಕೆ ಅರ್ಥವಿಲ್ಲ. ಪ್ರಜಾಪ್ರಭುತ್ವ ದಲ್ಲಿ ಜನರಿಗೆ ವಿಶ್ವಾಸ ಉಳಿಯಬೇಕಾದರೆ ಜನತಾ ಪ್ರತಿನಿಧಿಗಳಾದವರು ಯಾರೇ ಆಗಿರಲಿ, ಸರ್ಕಾರದ ಹೊರಗೆ ಇರಲಿ ಒಳಗೆ ಇರಲಿ, ಅವರಮೇಲೆ ಶ್ರೇಷ್ಠಮಟ್ಟದ ವಿಚಾರಣೆಯನ್ನು ಮಾಡಿಸಿ ಒಂದು ಸತ್‌ಸಂಪ್ರದಾಯವನ್ನು ಅನುಸರಿಸಬೇಕೆಂದು ಕೇಳಿಕೊಳ್ಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ರಾಜ್ಯವನ್ನು ಸ್ವರ್ಗಕ್ಕೆ ಒಂದೇ ಸಾರಿ ತೆಗೆದುಕೊಂಡು ಹೋಗುತ್ತೇವೋ ಎನ್ನುವ ಭಾವನೆ ಇದ್ದರೂ ವಸ್ತುಶಃ ನರಕಕ್ಕೆ ನೇರವಾಗಿ ಹೋಗುತ್ತೇವೋ ಎನ್ನುವ ರೀತಿಯಲ್ಲಿ ಮಾಡಿ ದ್ದಾರೆ, ಅದನ್ನು ಒಳ್ಳೆಯ ಅಭಿಪ್ರಾಯ ಉಪಯೋಗಿಸಿಕೊಂಡು ಒಳ್ಳೆಯ ದೃಷ್ಟಿಕೋಣ ಜನರಲ್ಲಿ ಬರುವುದಕ್ಕೆ ಅವಕಾಶ ಮಾಡಬೇಕೆಂದು ಹೇಳುತ್ತೇನೆ. ಜೊತೆಗೆ ಬೇಕಾದಷ್ಟು ಅಂಕಿ ಸಂಖ್ಯೆ ಗಳನ್ನು ಕೂಡ ತಂದಿದ್ದೆ ಆದರೆ ಕಾಲಾವಕಾಶವಿಲ್ಲದಕಾರಣ ಎಲ್ಲವನ್ನೂ ಹೇಳಲುಸಾಧ್ಯವಾಗಲಿಲ್ಲ.

ಇನ್ನು ಉದ್ಯೋಗಾವಕಾಶಗಳ ವಿಷಯದಲ್ಲಿ ಒಟ್ಟು ಸಂಖ್ಯೆಯನ್ನು ತೆಗೆದುಕೊಂಡರೆ ಶೇಕಡ 40 ಪರ್ಸೆಂಟ್ ಉದ್ಯಮಗಳು ಬೆಂಗಳೂರು ಸುತ್ತಮುತ್ತಲಿನಲ್ಲಿ ಇವೇ ವಿನಃ ಇನ್ನು ಉಳಿದ 60 ಪರ್ಸೆಂಟ್ ಉದ್ಯಮಗಳು ಮತ್ತು ಉದ್ಯೋಗಾವಕಾಶಗಳು ಇಡೀ ಕರ್ನಾಟಕದಲ್ಲಿವೆ ಅವನ್ನು ಹಂಚಿಕೊಂಡಿದೆಯೆಂದು ಹೇಳಿದರೆ ತಪ್ಪಾಗಲಾರದು.

ಶ್ರೀ ಟಿ. ಆರ್. ಶಾಮಣ್ಣ.—ಅಷ್ಟು ಸುಲಭವಾಗಿ ಹೇಳಬೇಡಿ. ಅವರಲ್ಲೂ ಇಲ್ಲಿ ಇರತಕ್ಕಂಥ ಉದ್ಯಮಗಳಲ್ಲಿ ಕರ್ನಾಟಕದವರು ಇರುವುದು ಬಹಳ ಕಡಿಮೆ. ಅವರಲ್ಲಿ ಕೇರಳ, ಮದ್ರಾಸು ಮತ್ತು ಆಂಧ್ರ ಪ್ರದೇಶದ ಇನ್ನು ಇತರೇ ರಾಜ್ಯಗಳ ಜನರೇ ಜಾಸ್ತಿ.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಏನು ವಿಶಾಲ ಕರ್ನಾಟಕ ಎಂದು ಹೇಳುತ್ತೇವೋ ಅದಕ್ಕೆ ಯಾವ ಅರ್ಥವೂ ಬರುವುದಿಲ್ಲ. ಯಾರು ಬಲಿಷ್ಠರಾಗಿದ್ದಾರೆ ಅವರು ಏನು ಬೇಕಾದರೂ ಮಾಡಬಹುದು. ಅದನ್ನು ತಪ್ಪಿಸಬೇಕಾದರೆ ಒಳ್ಳೆಯ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದರೆ ಎಲ್ಲಿ ಹಿಂದುಳಿದ ಪ್ರದೇಶಗಳು ಇವೆ ಅಲ್ಲಿ ಕೈಗಾರಿಕೆ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕು. ಉದಾಹರಣೆಗೆ ಹೇಳಬೇಕಾದರೆ ನಮ್ಮ ಮಲೆನಾಡು ಪ್ರದೇಶ ನೋಡಿದರೆ ಸಮಗ್ರವಾಗಿ, ಸಮ ತೋಲನವಾಗಿ ನೋಡಿದರೆ ಬಹಳ ಹಿಂದುಳಿದ ಪ್ರದೇಶವನ್ನುವುದರಲ್ಲಿ ಸಂಶಯವೇ ಇಲ್ಲ. ಸರ್ಕಾರ ಆ ಪ್ರದೇಶಕ್ಕೆ ಸರಿಯಾದ ಪ್ರಾತಿನಿಧ್ಯವನ್ನು ಕೊಡಬೇಕು. ಕೇವಲ ಹೆಸರಿಗೆ ಮಾತ್ರ ವಿಶಾಲ ಕರ್ನಾಟಕವೆಂದರೆ ಅದಕ್ಕೆ ಸರಿಯಾದ ಅರ್ಥ ಬರುವುದಿಲ್ಲ. ಸತ್ಯ ಉಳಿಯುವುದಿಲ್ಲವೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಸಭಾಧ್ಯಕ್ಷಣಿಯವರೇ, ಮಾನ್ಯ ರಾಜ್ಯಪಾಲರು ಕಳೆದ ವರ್ಷ ಆದ ಪ್ರಗತಿಯ ಬಗ್ಗೆ ಮತ್ತು ಈ ವರ್ಷ ಮಾಡಿರತಕ್ಕಂಥ ಕಾರ್ಯಗಳ ಬಗ್ಗೆ ಬಹಳ ಉತ್ತಮವಾದ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆಂದು ನಾನಾದರೂ ಕೂಡ ಹೇಳಲಿಚ್ಛೆ ಪಡುತ್ತೇನೆ. ಕೇವಲ ಗಿಳಿಪಾಠವನ್ನು ಮಾಡಿರುವುದಿಲ್ಲ. ಕಳೆದ ಅಧಿವೇಶನದಲ್ಲಿ ಏನು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದರ ಬಗ್ಗೆ ಸವಿಸ್ತಾರವಾಗಿ ಮತ್ತು ಕೂಲಂಕಷವಾಗಿ ಈ ಸಭೆಗೆ ತಿಳಿಸಿದ್ದಾರೆ, ಇವತ್ತಿನದಿನ ನಾನು ಅದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಗಿಳಿಯಲ್ಲ......

ಶ್ರೀ ಬಿ. ಬೈರಪ್ಪಾಜಿ.—ಅವರು ಸರ್ಕಾರದ ನೈಜ ಸ್ಥಿತಿಯನ್ನು ಕಳೆದಸಾರಿ ನೀರಾವರಿ ಭಾವಿಗಳು ಎಷ್ಟನ್ನು ಮಾಡಬೇಕಾಗಿತ್ತು ಮುಂದೆ ಎಷ್ಟು ಮಾಡಬೇಕಾಗಿದೆ ಎಂಬುದು ಮತ್ತು ವಾಟರ್‌ಸಪ್ಲೈ ಸ್ಕೀಮ್ ಬಗ್ಗೆ ಕೂಡ ಹೇಳಿದ್ದಾರೆ. ಕಳೆದವರ್ಷ ಏನು ಮಾಡಿದ್ದಾರೆ ಮುಂದೆ ಏನು ಮಾಡಬೇಕು ಎನ್ನುವುದನ್ನು ಕೂಡ ವರದಿಯಲ್ಲಿ ಹೇಳಿದ್ದಾರೆ. ಇನ್ನು ಜನತಾ ಹೌಸಿಂಗ್ ಸ್ಕೀಮ್‌ನಲ್ಲಿ ಜನಗಳಿಗೆ ಮನೆಗಳನ್ನು ಕಟ್ಟಿಸಿಕೊಡುವ ಮತ್ತು ಹಂಚುವ ವಿಷಯವನ್ನು ಸವಿಸ್ತಾರವಾಗಿ ಇಲ್ಲಿ ತಿಳಿಸಿದ್ದಾರೆ. ಇದು ಹೇಗೆ ಕೇವಲ ಗಿಳಿಯ ಪಾಠವಾಗುತ್ತದೆ ಎಂದು ಮಾನ್ಯ ಸ್ನೇಹಿತರಿಗೆ ಕೇಳಬೇಕಾಗುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಕೇವಲ ಕಿರೀಟ ಧರಿಸಿ ಕೊಂಡಿದ್ದಾರೆ ಎಂದು ಹೇಳುವುದು ಸರಿಯಾಗಿ ಕಾಣಿಸುವುದಿಲ್ಲ. ಅದನ್ನು ನೋಡಿ ಹೆಮ್ಮೆ ಪಡಬೇಕು. ನಮ್ಮ ಸರ್ಕಾರ ಜವಾಬ್ದಾರಿ ಅರಿತು ಗೇಣಿದಾರರಿಗೆ ಒದಗಿಸಿರತಕ್ಕಂಥಾದ್ದನ್ನು ಎಲ್ಲರೂ ಕೂಡ ಮೆಚ್ಚುವಂತೆ ಕೆಲಸಮಾಡಿದ್ದಾರೆಂದು ನಾನಾದರೂ ಹೇಳುತ್ತೇನೆ. ಶ್ರೀಮಾನ್ ಲಿಂಗಪ್ಪನವರು ಮತ್ತು ಕಾಗೋಡು ತಿಮ್ಮಪ್ಪನವರು ಕೂಡ ಆ ಲ್ಯಾಂಡ್ ಟ್ರಿಬ್ಯುನಲ್ ಇರುವು ದರಿಂದ ಗೇಣಿದಾರರಿಗೆ ಅನ್ಯಾಯವಾಗುವುದಕ್ಕೆ ಹೇಗೆ ಸಾಧ್ಯ. ಈ ದೇಶದಲ್ಲಿ ಲಕ್ಷಾಂತರ ಬಡಕುಟುಂಬಗಳಿಗೆ ಅನುಕೂಲವಾಗುವಂತ ಈ ಶಾಸನ ಏನು ಮಾಡಿದ್ದಾರೆ ಅದು ಒಂದು ಹೆಮ್ಮೆ ತರತಕ್ಕಂಥಾದ್ದನ್ನು ಎತ್ತಿ ತೋರಿಸಿದ್ದಾರೆ.

[MR. DEPUTY SPEAKER In the Chair]

10-30 A. M.

ಇದರಲ್ಲಿ ಈ ಕಾನೂನನ್ನು ಜಾರಿ ಮಾಡತಕ್ಕಂಥ ಕಾಲದಲ್ಲಿ ಇಂತಕ್ಕಂಥ ಲೋಪದೋಷ ಗಳನ್ನು ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ. ಈ ಬಗ್ಗೆ ಸರ್ಕಾರದವರೂ ಕೂಡ ಆದಷ್ಟು ಶೀಘ್ರವಾಗಿ ಇದನ್ನು ಕಾರ್ಯರೂಪಕ್ಕೆ ತರತಕ್ಕಂಥಾದ್ದು ನಮ್ಮ ಜವಾಬ್ದಾರಿ ಇದೆ ಎನ್ನುವುದನ್ನು ಅರಿತಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಸರ್ಕಾರದವರು ಈ ಬಗ್ಗೆ ಟ್ರಿಬ್ಯೂನಲ್ ಮಾಡುವ ಉದ್ದೇಶವಾದರೂ ಇಷ್ಟೆ. ಜನಗಳಿಗೆ ಆದಷ್ಟು ಬೇಗ ನ್ಯಾಯ ದೊರಕಲಿ ಎಂದು. ಪ್ರತಿಯೊಬ್ಬ ಗೇಣೀದಾರನೂ ಕೂಡ ಕೋರ್ಟ್ ಹತ್ತಿ ಸಾವಿರಾರು ರೂಪಾಯಿ ಕಳೆದುಕೊಂಡಮೇಲೆ ಆತನಿಗೆ ನ್ಯಾಯ ದೊರಕಿಸಿಕೊಡತಕ್ಕಂಥಾದ್ದು ತಡವಾಗುತ್ತದೆ ಎನ್ನುವ ಉದ್ದೇಶದಿಂದ ಸರ್ಕಾರ ಬಹಳ ಎಚ್ಚರಿಕೆ ವಹಿಸಿ ಈ ಒಂದು ಕಾರ್ಯವನ್ನು ಜಾರಿಗೆ ತಂದಿದ್ದಾರೆ. ಇದನ್ನು ತಾವು ಒಪ್ಪುತ್ತೀರಿ ಎನ್ನುವುದರಲ್ಲಿ ನನಗೆ ನಂಬಿಕೆ ಇದೆ. ಈ ದಿಶೆಯಲ್ಲಿ ಅನೇಕ ಕಡೆಯಲ್ಲಿರುವ ಟ್ರಿಬ್ಯೂನಲ್‌ಗಳು ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಈ ಕೆಲಸವನ್ನು ಇನ್ನೂ ತೀವ್ರ ಮಾಡಬೇಕು ಎನ್ನುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಈ ಕೆಲಸಕ್ಕೆ ಸರ್ಕಾರದವರೂ ಕೂಡ ಹಿಂದೆ ಬೀಳುವುದಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಆದುದರಿಂದ ಈ ಒಂದು ಪ್ರಗತಿಪರವಾದಂಥ ಕಾಯಿದೆಯಿಂದ ಲಕ್ಷಾಂತರ ಜನ ಭೂಒಡೆಯರಾಗುತ್ತಾರೆ ಎನ್ನುವ ಮಾತನ್ನು ಹೇಳುತ್ತೇನೆ. ಈ ಒಂದು ಮಾತನ್ನು ಹೇಳಿದರೆ ಶ್ರೀಮಾನ್ ದೇವೇಗೌಡರು ಒಪ್ಪುತ್ತಾರೆ ಎಂದು ಅಂದುಕೊಂಡಿದ್ದೇನೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಕಾಳೀನದಿ ಯೋಜನೆ ಬಗ್ಗೆ ಸಾಕಷ್ಟು ಮಾತನಾಡಿಲ್ಲ ಎಂದು ಹೇಳಿದರು. ಆ ಬಗ್ಗೆ ನಾನು ಹೇಳುವುದಾದರೆ ಕಾಳೀನದಿ ಯೋಜನೆ ಬಗ್ಗೆ ನಮ್ಮ ಸರ್ಕಾರ ಹೆಚ್ಚು ಕೆಲಸಮಾಡುತ್ತಿದೆ ಅಲ್ಲದೆ ಹೆಚ್ಚು ಹಣ ಒದಗಿಸಬೇಕು ಎಂದ ಕೇಂದ್ರ ಸರ್ಕಾರದ ಮೇಲೂ ಕೂಡ ನಮ್ಮ ಸರ್ಕಾರ ಹೆಚ್ಚು ಪ್ರಭಾವ ಬೀರಿ ಹೆಚ್ಚು ಹಣ ಪಡೆದು ಈ ಒಂದು ವರವಾಗಿ ಪರಿಣಮಿಸತಕ್ಕಂಥ ಕಾಳೀನದಿ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಕಾರ್ಯರೂಪಕ್ಕೆ ತರಬೇಕು ಎಂದು ಉದ್ದೇಶ ಇಟ್ಟುಕೊಂಡು ಸರ್ಕಾರ ಕೆಲಸ ಮಾಡುತ್ತಿದೆ ಎನ್ನುವುದನ್ನು ತಾವೆಲ್ಲರೂ ತಿಳಿಯಬೇಕು. ಈ ಬಗ್ಗೆ ಈಗಾಗಲೇ ಅನೇಕ ಕೆಲಸಕಾರ್ಯಗಳು ಅಲ್ಲಿ ನಡೆಯುತ್ತಾ ಇವೆ, ಕೋಟ್ಯಾಂತರ ರೂಪಾಯಿ ಹಣವನ್ನು ಅಲ್ಲಿ ಖರ್ಚು ಮಾಡುತ್ತಿದ್ದಾರೆ, ಕೇಂದ್ರವೂ ಕೂಡ ಇದರ ನೆರವಿಗೆ ಬರುತ್ತದೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಈ ಬಗ್ಗೆ ಕೇಂದ್ರವನ್ನು ಒತ್ತಾಯ ಮಾಡುತ್ತಿದ್ದಾರೆ; ಮತ್ತು ನಮ್ಮಲ್ಲಿ ದೊರೆಯುತಕ್ಕಂಥ ಸಂಪನ್ಮೂಲಗಳನ್ನು ರೂಢಿಸಿಕೊಂಡು ಈ ಬಗ್ಗೆ ಹೆಚ್ಚು ಹಣವನ್ನು ಖರ್ಚುಮಾಡುತ್ತಿದ್ದಾರೆ, ಈ ದಿಶೆಯಲ್ಲಿ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಾ ಇದೆ, ಈ ಬಗ್ಗೆ ಯಾರಿಗೂ ವಿರೋಧಾಭಾಸ ಇಲ್ಲ ಎಂದು ತಿಳಿದು ಈ ಕಾರ್ಯವನ್ನು ಶೀಘ್ರಗತಿಯಲ್ಲಿ ಮಾಡುತ್ತಿದ್ದಾರೆ. ಮತ್ತು ಇದರಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಉತ್ಪನ್ನಮಾಡಿ ರೈತರಿಗೆ ಮತ್ತು ಇತರೇ ಕೈಗಾರಿಕಾ ವರ್ಗದವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿ ನಮ್ಮ ದೇಶವನ್ನು ಸಂಪದ್ಭರಿತವನ್ನಾಗಿ ಮಾಡುವ ದಾರಿಯಲ್ಲಿ ನಾವೆಲ್ಲರೂ ಕೂಡ ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಹೇಳುವುದಾದರೆ ಕಳೆದ ವರ್ಷಕ್ಕಿಂತ 20 ಪರ್ಸೆಂಟಷ್ಟು ಹೆಚ್ಚು ಗೊಬ್ಬರವನ್ನು ನಮ್ಮ ದೇಶದ ರೈತರಿಗೆ ಖರ್ಚು ಮಾಡಿದ್ದಾರೆ. ಅಂದರೆ ನಮ್ಮ ದೇಶದ ರೈತರ ಒಂದು ಸ್ಥಿತಿಗತಿ ಉತ್ತಮವಾಗಿದೆ ಎಂದು ಹೇಳಬಹುದು. ಅವರು ಹೆಚ್ಚು ಹೆಚ್ಚು ಬೆಳೆಯಬೇಕು ಎನ್ನುವ ಒಂದು ಆಶೆಯನ್ನಿಟ್ಟುಕೊಂಡು ಮತ್ತು ಸರ್ಕಾರದವರು ಎಲ್ಲರಿಗೂ ಗೊಬ್ಬರ ಸಿಗಬೇಕು ಎನ್ನುವ ಒಂದು ಆಶೆಯನ್ನಿಟ್ಟುಕೊಂಡು ಇದಕ್ಕೆ ಕಾರ್ಡ್ ಸಿಸ್ಟಂನ್ನು ಇಂಟ್ರಡ್ಯೂಸ್ ಮಾಡಿದರು. ಈ ರೀತಿಯಾಗಿ ಸರ್ಕಾರ ಒಂದು ವ್ಯವಸ್ಥಿತವಾದ ರೂಪದಲ್ಲಿ ಗೊಬ್ಬರ ಹಂಚುವ ವ್ಯವಸ್ಥೆ ಮಾಡಿದೆ ಎಂದು ನಾನಾದರೂ ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ —ಹಾಗಾದರೆ ನಿಮ್ಮ ಕಾಲದಲ್ಲಿ ಎಲ್ಲಾ ರೈತರೂ ಕೂಡ ಸಮೃದ್ಧಿಗೆ ಬಂದಿರಬಹುದು ಅಲ್ಲವೇ ?

ಶ್ರೀ ಬಿ. ಬೈರಪ್ಪಾಜಿ.—ವರ್ತಮಾನ ಪರಿಸ್ಥಿತಿಯಿಂದ ತೊಂದರೆಯಾಗುತ್ತದೇ ವಿನಾ ಸರ್ಕಾರದವರು ಕೊಡತಕ್ಕಂಥ ಸೌಲಭ್ಯಗಳು ಕಡಿಮೆಯಾಗಿಲ್ಲ ಎಂದು ಅಷ್ಟು ಮಾತ್ರ ಹೇಳುತ್ತೇನೆ. ಕಳೆದ ವರ್ಷಕ್ಕಿಂತ ಈ ವರ್ಷ 20 ಪರ್ಸೆಂಟ್ ಅಷ್ಟು ಗೊಬ್ಬರ ಜಾಸ್ತಿ ಒದಗಿಸಿದ್ದಾರೆ ಎಂದರೆ ಅದೂ ಏನೂ ಕಡಿಮೆ ಅಲ್ಲ ಅನ್ನುವುದನ್ನು ತಾವು ಭಾವಿಸಬೇಕು. ಈ ವರ್ಷ ಎಷ್ಟು ಪ್ರಮಾಣದಲ್ಲಿ ಗೊಬ್ಬರ ಒದಗಿಸಿದ್ದಾರೆ ಎನ್ನುವುದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಈ ದಿಶೆಯಲ್ಲಿ ನಾವೂ ನೀವೂ ಎಲ್ಲರೂ ಒಂದಾಗಿ ಕಷ್ಟಪಟ್ಟು ಕೆಲಸಮಾಡುವುದಲ್ಲದೆ ರೈತರಿಗೆ ಮುಂದಾಗಿ ಕೆಲಸಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಕೆ ಹೆಚ್. ಹನುಮೇಗೌಡ.—ತಾವು ಈ ವರ್ಷ ಜವಾರ್ ಪ್ಯಾಡಿಗೆ ಏನು ಲೆವಿ ಫಿಕ್ಸ್ ಮಾಡಿದ್ದೀರಿ ಅದರ ಬಗ್ಗೆ ನೀವೇ ಸಮರ್ಥನೆ ಮಾಡಿಕೊಳ್ಳಿ.

ಶ್ರೀ ಬಿ. ಬೈರಪ್ಪಾಜಿ.—ತಮಗೂ ಗೊತ್ತಿದೆ. ಇದು ದೇಶಾದ್ಯಂತ ಇರುವ ಸಮಸ್ಯೆ. ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಿ ಸ್ವಲ್ಪಮಟ್ಟಿಗೆ ಜಾಸ್ತಿ ಮಾಡಿದ್ದಾರೆ ಎಂದು ಹೇಳಿದರೆ ತಾವು ಒಪ್ಪುತ್ತೀರಿ ಎಂದು ನನ್ನ ಭಾವನೆ. ರೈತರು ಇನ್ನೂ ಉತ್ತಮ ಸ್ಥಿತಿಗೆ ಬರಬೇಕಾದರೆ ಇನ್ನೂ ಜಾಸ್ತಿ ಮಾಡಬೇಕು, ಮಾಡೋಣ. ಆದರೆ ಕಳೆದ ವರ್ಷಕ್ಕಿಂತ ಜಾಸ್ತಿಯಾಗಿದೆ ಎಂದು ಹೇಳಿದರೆ ಅದನ್ನು ತಾವು ಒಪ್ಪುತ್ತೀರಾ ?

ಇನ್ನು ಸಂಪರ್ಕಮಾರ್ಗ ವಿಷಯದ ಬಗ್ಗೆ ಹೇಳುವುದಾದರೆ ಕಳೆದ ವರ್ಷ ಶ್ರೀಮಾನ್ ಹೆಚ್. ಎಂ. ಚನ್ನಬಸಪ್ಪನವರು 80 ಕಿಲೋಮೀಟರ್ ರಸ್ತೆಯನ್ನು ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಮಾಡಿಕೊಂಡಿರಬಹುದು.

ಶ್ರೀ ಬಿ. ಬೈರಪ್ಪಾಜಿ.—ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಒಂದು ಕಡೆಯೇ ಅಲ್ಲ, ಎಲ್ಲಾ ಕಡೆಯೂ ಮಾಡಿದ್ದಾರೆ. ನಾಳೆ ದಿವಸ ನಿಮ್ಮ ಸರ್ಕಾರ ಬಂದರೂ ಕೂಡ ಒಂದೇಸಾರಿ ಎಲ್ಲವನ್ನೂ ಮಾಡಿಸುವುದಕ್ಕಾಗುವುದಿಲ್ಲ. 25 ವರ್ಷದಿಂದಲೂ ಆಗದೇ ಇರುವಂಥಾ ಕೆಲಸಗಳನ್ನು ಬರೇ 3 ವರ್ಷದಲ್ಲಿ ಮುಗಿಸಬೇಕು ಎಂದರೆ ಅದು ಯಾವ ವ್ಯಕ್ತಿಯಿಂದಲೂ ಸಾಧ್ಯವಾಗುವುದಿಲ್ಲ ಅನ್ನುವುದನ್ನು ತಿಳಿದುಕೊಳ್ಳಿ. ಈ ಸರ್ಕಾರ ಬಂದ ಮೇಲೆ ಅನೇಕ ಪ್ರಗತಿಪರವಾದ ಕೆಲಸಕಾರ್ಯಗಳು ಆಗಿವೆ. ಉದಾಹರಣೆಗೆ ಹೇಳುವುದಾದರೆ ಹಿಂದೆ ಶ್ರೀಮಾನ್ ವೀರೇಂದ್ರ ಪಾಟೀಲರ ಸರ್ಕಾರ ಇರಲಿಲ್ಲವೇ ? ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ ? ಎಷ್ಟು ಸೈಟುಗಳನ್ನು ಕೊಡಿಸಿದ್ದಾರೆ ? ನಮ್ಮ ಈ ಸರ್ಕಾರದ ಬಂದಮೇಲೆ ಕಳೆದ ವರ್ಷ 15 ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟಿಲ್ಲವೇ, ಹಿಂದೆ ಇರುವ ಯಾವ ಸರ್ಕಾರವೇ ಆಗಲಿ ಇದಕ್ಕೆ ಏತಕ್ಕೆ ಪ್ರಯತ್ನ ಮಾಡಲಿಲ್ಲ, ಅದಕ್ಕೆ ತಾವು ಏನು ಹೇಳುತ್ತೀರಿ ? ಇನ್ನೊಂದು ವಿಷಯವನ್ನು ಮಾನ್ಯ ಅಧ್ಯಕ್ಷರ ಮೂಲಕ ಹೇಳಬಯಸುತ್ತೇನೆ. ಅದೇನೆಂದರೆ ಜನತಾ ವಸತಿ ಯೋಜನೆ ಮೇರೆಗೆ ನಮ್ಮ ಸರ್ಕಾರ ಇನ್ನೂ 2 ಲಕ್ಷ ನಿವೇಶನಗಳನ್ನು ಹಂಚಲು ಕ್ರಮ ಕೈಗೊಳ್ಳಲಾಗಿದೆ ಮತ್ತು ಇನ್ನೂ 20 ಸಾವಿರ ಮನೆಗಳನ್ನು ಕಟ್ಟಿಸಬೇಕು ಎನ್ನುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈ ರೀತಿಯಾಗಿ ನಮ್ಮ ರಾಜ್ಯದಲ್ಲಿ ಪ್ರಗತಿಪರವಾದ ಕೆಲಸಕಾರ್ಯಗಳು ನಡೆಯುತ್ತಾ ಇವೆ ಎನ್ನುವುದನ್ನು ನಮ್ಮ ರಾಜ್ಯಪಾಲರು ಹೇಳಿದ್ದಾರೆ. ಈ ಇಂತಹ ಒಂದು ಪ್ರಗತಿಪರವಾದ ಕಾರ್ಯಗಳು ಹಿಂದೆಂದೂ ನಡೆದಿರಲಿಲ್ಲ. ಈಪ್ರೊತ್ತು ಈ ರೀತಿ ನಡೆಯಬೇಕಾದರೆ ಇದಕ್ಕೆ ನಾವೆಲ್ಲರೂ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಸದಸ್ಯರು ಹಳ್ಳಿಗಾಡಿಗೆ ಹೋದರೆ ಜನ ಏನು ಮಾತನಾಡುತ್ತಾರೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ನಾನು ಹಳ್ಳಿಗಾಡಿಗೆ ಹೋಗಿದ್ದೇನೆ. ಮಾನ್ಯ ಸದಸ್ಯರ ಹಳ್ಳಿಗಾಡಿಗೆ ಹೋಗಿಲ್ಲ ಎಂದು ಕಾಣುತ್ತದೆ. ನಾವು ಎಲ್ಲಾ ಕಡೆಯೂ ಹೋಗಿರುವುದರಿಂದ ಎಲ್ಲ ಜನರೂ ನಮ್ಮ ಬಗ್ಗೆ ಏನು ಹೇಳುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಆದುದರಿಂದ ಮಾನ್ಯ ಸದಸ್ಯರು ಅಪಾದನೆ ಮಾಡತಕ್ಕಂಥದ್ದು ಅಷ್ಟು ಸರಿಯೆನಿಸುವುದಿಲ್ಲ. ಮತ್ತೆ ಸಮಾಜ ಕಲ್ಯಾಣ ಹಾಗೂ ಗ್ರಾಮಾಭಿವೃದ್ಧಿ ಬಗ್ಗೆ ರಾಜ್ಯಪಾಲರು ಅವರ ಭಾಷಣದಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಹೇಳುತ್ತಾ ಹರಿಜನರ ಏಳಿಗೆಗಾಗಿ ಸರಕಾರ ಒಂದು ಕಾರ್ಪೊರೇಷನ್‌ನನ್ನು ಮಾಡಿ ಇದರ ಮೂಲಕ ಉತ್ತಮವಾದ ಕಾರ್ಯಗಳು ನಡೆಯುತ್ತವೆ ಎಂದೂ ರಾಜ್ಯಪಾಲರು ಹೇಳಿದ್ದಾರೆ. ಯಾವ ಹಿಂದಿನ ಸರಕಾರವೂ ಇದುವರೆಗೆ ಮಾಡದೆ ಇರುವಂತಹ ಕಾರ್ಯಗಳನ್ನು ಇಂದಿನ ನಮ್ಮ ಸರಕಾರ ಮಾಡುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮೀನುಗಾರಿಕೆ ಬಗ್ಗೆ ನಾವು ಅನೇಕ ವರ್ಷಗಳಿಂದಲೂ ಇಲ್ಲಿ ಹೇಳುತ್ತಲೇ ಬರುತ್ತಿದ್ದೆವು. ಕರಾವಳಿಯಲ್ಲಿರುವ ಮೀನುಗಾರಿಕೆ ಅಭಿವೃದ್ಧಿ ಮಾಡುವುದರ ಜೊತೆಗೆ ಒಳನಾಡಿನ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡಬೇಕೆಂದು ಪದೇ ಪದೇ ಇಲ್ಲಿ ಸರ್ಕಾರಕ್ಕೆ ಹೇಳುತ್ತಲೇ ಬರುತ್ತಿದ್ದೆವು. ಇದರ ಬಗ್ಗೆ ಸಾಕಷ್ಟು ವ್ಯವಸ್ಥಿತವಾದ ಕಾರ್ಯಗಳು ನಡೆದಿರಲಿಲ್ಲ. ಈಗ ನಮ್ಮ ರಾಜ್ಯಪಾಲರು ಅವರ ಭಾಷಣದಲ್ಲಿ ಹೇಳಿರುವಂತೆ ಇದೇ ಅಧಿವೇಶನದಲ್ಲಿ ಒಂದು ಮಸೂದೆ ಒಳನಾಡಿನ ಮೀನುಗಾರಿಕೆ ಅಭಿವೃದ್ಧಿಗಾಗಿ ತರುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಳನಾಡಿನಲ್ಲಿರುವ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡತಕ್ಕದ್ದು ಬಹಳ ಸಂತೋಷಕರವಾದ ವಿಚಾರ. ಸ್ವಾತಂತ್ರ್ಯ ಬಂದು ಸುಮಾರು 25 ವರ್ಷಗಳಾದರೂ ಕೂಡ ಬರೀ ಕರಾವಳಿಯಲ್ಲಿ ಮೀನುಗಾರಿಕೆ ಬಗ್ಗೆ ಕೆಲಸಗಳು

ಆಗುತ್ತಿತ್ತು ಒಳನಾಡಿನ ಮೀನುಗಾರಿಕೆ ಬಗ್ಗೆ ಸಾಕಷ್ಟು ಪ್ರಗತಿಯಾಗಲಿಲ್ಲ. ಇದರ ಬಗ್ಗೆ ಈ ಸರಕಾರ ಕ್ರಮ ತೆಗೆದುಕೊಂಡಿರುವುದು ಬಹಳ ಸಂತೋಷದ ವಿಚಾರ ಇದಕ್ಕಾಗಿ ನಾವು ಸರ್ಕಾರಕ್ಕೆ ನಮ್ಮ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ ಮತ್ತು ಇದು ನಮ್ಮ ಕರ್ತವ್ಯವೂ ಆಗಿದೆ.

ಸಂಪರ್ಕದ ಬಗ್ಗೆ ಒಂದು ಮಾತು ಹೇಳಬೇಕಾಗಿದೆ ಶ್ರೀಮಾನ್ ಚನ್ನಬಸಪ್ಪನವರು ಇದರ ಬಗ್ಗೆ ಸಾಕಷ್ಟು ಎಚ್ಚರ ವಹಿಸಿದ್ದಾರೆ. ಸರಕಾರದವರು ಎಲ್ಲ ಕಡೆಗಳಲ್ಲೂ 30 ಕಿಲೋ ಮೀಟರು ರಸ್ತೆಗಳನ್ನು ಮಾಡಿಸುತ್ತೇವೆಂದು ಹೇಳಿದ್ದರು. ಇದರಂತೆ ಅಲ್ಲಲ್ಲಿ ರಸ್ತೆ ಕೆಲಸಗಳು ಆಗುತ್ತಿವೆ. ನಮ್ಮ ಕಡೆಯಲ್ಲಿ ಕೂಡ ಕೆಲವು ಕೆಲಸಗಳಾಗುತ್ತಿವೆ. ಮತ್ತು ಅಲ್ಲಲ್ಲಿ ಸೇತುವೆಗಳನ್ನು ಕಟ್ಟಲು ಅನುಕೂಲ ಮಾಡುವುದಕ್ಕಾಗಿ ಒಂದು ಕಾರ್ಪೊರೇಷನ್‌ನನ್ನು ಮಾಡಿ ಇದರ ಮೂಲಕ ಆಗಬೇಕಾದ ಕೆಲಸಗಳನ್ನು ಮಾಡಬೇಕೆಂದು ಒಂದು ಧೈರ್ಯವಾದ ಹೆಜ್ಜೆ ಇಟ್ಟು ಮುಂದುವರಿದಿದ್ದಾರೆ. ನಮ್ಮ ಸರಕಾರ ಬಂದು ಮೂರು ವರ್ಷಗಳಾದರೂ ಹಿಂದೆ ಯಾವ ಸರಕಾರವೂ ಮಾಡದೆ ಇರುವಂತಹ ಕೆಲಸಗಳನ್ನು ನಮ್ಮ ಸರಕಾರ ಬಂದ ಮೇಲೆ ಅನೇಕ ಕೆಲಸಗಳು ಆಗಿವೆ ಆದರೆ ಇದನ್ನು ನಮ್ಮ ವಿರೋಧ ಪಕ್ಷದವರು ಒಳ್ಳೆಯ ಭಾವನೆ ಇಟ್ಟು ನೋಡುತ್ತಿಲ್ಲ. ಆದಷ್ಟು ಸರಕಾರ ಮಾಡಿರುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಬೇಕೆಂದು ಸರಕಾರದಲ್ಲಿ ಹೇಳುತ್ತೇನೆ. ಹೀಗೆ ಅನೇಕ ವಿಚಾರಗಳನ್ನು ನಮ್ಮ ರಾಜ್ಯಪಾಲರು ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ ಮತ್ತು ರಚನಾತ್ಮಕವಾದ ಸಲಹೆಗಳನ್ನು ಸರಕಾರಕ್ಕೆ ಕೊಟ್ಟು ಸಹಾಯ ಮಾಡಿ ಉತ್ತಮವಾದ ಕೆಲಸಗಳಾಗಲು ಎಲ್ಲರು ಸಹಕರಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮತ್ತು ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯಮಾಡುತ್ತೇನೆ.

†ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರು ಮಾಡಿರುವ ಭಾಷಣವನ್ನು ಸ್ವಾಗತಿಸುತ್ತಾ ಕೆಲವು ರಚನಾತ್ಮಕವಾದ ಸಲಹೆಗಳನ್ನು ಕೊಡಲು ಈ ಸಂದರ್ಭದಲ್ಲಿ ಪ್ರಯತ್ನ ಮಾಡುತ್ತೇನೆ. ತಮಗೆಲ್ಲಾ ಗೊತ್ತಿರುವಂತೆ ನಮ್ಮ ದೇಶದ ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಿತಿ ಹೇಗಿದೆ ? ಮತ್ತು ಯಾವ ಯಾವ ಕಾರಣಗಳಿಂದ ನಾವು ಕಷ್ಟಕ್ಕೆ ಸಿಕ್ಕಿ ತೊಂದರೆ ಪಡುತ್ತಿದ್ದೇವೆ ಎನ್ನುವುದು. ಆದರೆ ನಮ್ಮ ವಿರೋಧ ಪಕ್ಷದವರು ನಮ್ಮನ್ನು ಬರೀ ಟೀಕೆ ಮಾಡಬೇಕು ಎನ್ನುವ ಉದ್ದೇಶದಿಂದ ಹೇಳುತ್ತಾರೆಯೇ ವಿನಾ ವಾಸ್ತವವಾದ ಸ್ಥಿತಿಯನ್ನು ಹೇಳುತ್ತಿಲ್ಲ. ವಿರೋಧ ಪಕ್ಷದವರೂ ಕೂಡ ಸರಕಾರದವರು ಒಳ್ಳೆಯ ಕೆಲಸಗಳನ್ನು ಮಾಡುವಾಗ ಏಕೆ ಸಹಕರಿಸಬಾರದು ? ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಅವರ ಗಮನಕ್ಕೆ ತರಬೇಕಾಗಿದೆ. ಉದಾಹರಣೆಯಾಗಿ ಬೆಲೆ ಏರಿಕೆ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಇದು ತಮಗೆ ಗೊತ್ತಿರುವಂತೆ ಇದಕ್ಕೆ, ನಾನಾ ಕಾರಣಗಳಿವೆ ಎಂದು ಇಲ್ಲಿ ಒತ್ತಿ ಒತ್ತಿ ಹೇಳಬೇಕಾಗಿದೆ. ಇದು ನಮ್ಮ ಕೈಯಲ್ಲಿಲ್ಲ. ಇದರಲ್ಲಿ ರಾಷ್ಟ್ರೀಯ ನೀತಿಯೂ ಇದೆ ಮತ್ತು ಅಂತರರಾಷ್ಟ್ರೀಯ ನೀತಿಯೂ ಇದೆ. ಇದಕ್ಕೆ ಹಣದುಬ್ಬರವೂ ಸಹಾ ಕಾರಣವಾಗಿದೆ. ಅಲ್ಲದೆ ಇದರಲ್ಲಿ ಸಮಾಜವಾದ ಹಾಗೂ ಸಮಾಜ ವಾದವನ್ನು ಒಪ್ಪದೇ ಇರತಕ್ಕ ಬಂಡವಾಳಷಾಹಿಗಳು ನ್ಯಾಯವಾದ ರೀತಿಯಲ್ಲಿ ಸರಕಾರಕ್ಕೆ ಸಹಕರಿಸದೇ ಇರುವುದರಿಂದಾಗಿ ಇಂತಹ ಒಂದು ಕೆಟ್ಟ ಪರಿಸ್ಥಿತಿ ಬರಲು ಕಾರಣವಾಗಿದೆ. ಇದರಲ್ಲಿ ವಾಸ್ತವವಾದ ಸಂಗತಿ ತಿಳಿದು, ಸ್ವಾಗತಿಸಲು, ಅವರ ಹೃದಯ ಪರಿವರ್ತನೆಯಾಗಬೇಕು. ಇನ್ನೂ ನಮ್ಮ ಜನಕ್ಕೆ ಆ ರೀತಿ ಹೃದಯ ಪರಿವರ್ತನೆಯಾಗಲಿಲ್ಲ. ಸಾಮಾನ್ಯವಾಗಿ ನಮ್ಮ ಪ್ರಜೆಗಳಿಗೆ, ಮುಖ್ಯವಾಗಿ, ಐದು ವಿಚಾರಗಳು ಬಹು ಅಗತ್ಯವಾದವು. ಅಂದರೆ ಊಟ, ವಸತಿ, ಬಟ್ಟೆ, ವಿದ್ಯಾಭ್ಯಾಸ, ಹಾಗೂ ಆರೋಗ್ಯ —ಇವು ಬಹು ಮುಖ್ಯವಾದವುಗಳು ಎನ್ನುವುದು ತಮಗೆಲ್ಲರಿಗೂ ತಿಳಿದೇ ಇರುವ ಅಂಶವಾಗಿದೆ. ಹಾಗೇ ನಮ್ಮ ವಿರೋಧ ಪಕ್ಷದವರು ಭೂಸುಧಾರಣೆ ಬಗ್ಗೆ ಪದೇ ಪದೇ ಇಲ್ಲಿ ಒತ್ತಿ ಹೇಳುತ್ತಿದ್ದರು, ಇದನ್ನು ಇನ್ನೂ ಜಾರಿಗೆತರಲಾಗಲಿಲ್ಲ ಎಂದು. ಕಳೆದ 27 ವರ್ಷಗಳಿಂದಲೂ ಇದೇ ರೀತಿ ಹೇಳುತ್ತಲೇ ಇದ್ದರು. ಇದು ಬರೀ ಮಾತಿನಲ್ಲೇ ಇತ್ತೇ ವಿನಾ, ಇನ್ನೂ ಕಾರ್ಯರೂಪಕ್ಕೆ ಬಂದಿರಲಿಲ್ಲ. ಈಚೆಗೆ ನಮ್ಮ ಸರಕಾರದವರು ''ಉಳುವವನೇ ಹೊಲದ ಒಡೆಯ''ನಾಗಬೇಕೆಂದು ಹೇಳುವಂತೆ ಭೂ ಸುಧಾರಣೆಯನ್ನು ಜಾರಿಗೆ ತಂದೇ ತಂದಿದ್ದಾರೆ ಮತ್ತು ಸುಮಾರು 28 ಲಕ್ಷ ಜನರು ಭೂಹೀನರಾಗಿರುವಾಗ, ನಮ್ಮ ರಾಜ್ಯದಲ್ಲಿ, ನಮಗೆ ಸಿಗುವ ಸುಮಾರು ನಾಲ್ಕು ಲಕ್ಷ ಎಕರೆಗಳಷ್ಟು ಭೂಮಿಯನ್ನು ಮಾತ್ರ ಹಂಚಲು ಹೇಗೆ ಸಾಧ್ಯ ? ಸರ್ಕಾರ ಆಗಲೇ ಭೂ ಹೀನರಿಗೆ ಜಮೀನು ಹಂಚುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಮತ್ತು ಕೆಲವು ಕಡೆ ಭೂಮಿಯನ್ನು ರೈತರಿಗೆ ಹಂಚಿಯೂ ಕೊಡಲಾಗಿದೆ. ಹಿಂದೆ ಯಾವ ಸರಕಾರವೂ ಮಾಡದೆ ಇರುವಂತಹ ಸಾಧನೆಯನ್ನು ನಮ್ಮ ಘನ ಸರಕಾರ ಮಾಡುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಪರಿಸ್ಥಿತಿ ಹೀಗಿರುವಾಗ ಇದರ ಬಗ್ಗೆ ಅನಾವಶ್ಯಕವಾಗಿ ಟೀಕೆ ಮಾಡಬಾರದು.

ಇದು ಸರಿಯಲ್ಲ. ಇದುವರೆಗೆ ಏಕೆ ಎಲ್ಲಾ ಭೂಮಿ ಹಂಚಿಕೆಯಾಗಲಿಲ್ಲ ಎಂದರೆ ? ಕಾನೂನು ಆಚರಣೆಗೆ ಬರುವುದರೊಳಗೆ ಇದ್ದ ಭೂಮಿಯನ್ನು ಭೂ ಮಾಲೀಕರು ಅವರ ನೆಂಟರುಗಳಲ್ಲೇ ಹಾಗೂ ಅವರ ಮನೆಯಲ್ಲಿರುವ ಅಣ್ಣ ತಮ್ಮಂದಿರಲ್ಲೂ, ಕೊನೆಗೆ, ಅವರ ಮನೆಯಲ್ಲಿರುವ ನಾಯಿಯ ಹೆಸರಿನಲ್ಲೂ, ಭೂಮಿ ಹಂಚಿಕೆಯಾಗಿ ಹೋಗಿವೆ. ಹೀಗಾಗಿ ಹೆಚ್ಚುವರಿ ಜಮೀನು ಸರಕಾರಕ್ಕೆ ಹೆಚ್ಚು ಬಂದಿಲ್ಲ ಎಂದು ಹೇಳಬಹುದು. ಇನ್ನು ಆಹಾರದ ಸಮಸ್ಯೆ ತೆಗೆದುಕೊಂಡರೆ, ಇದು ಸರಿಯಾಗಿ ಯೋಜನೆಯಂತೆ ನಡೆದಿಲ್ಲ. ಇದಕ್ಕೆ ಕಾರಣ ನಮ್ಮ ಸರಕಾರದವರು ರೈತರಿಗೆ ಸರಿಯಾಗಿ ಫರ್ಟಿಲೈಸರುಗಳನ್ನು ಕೊಡುತ್ತಿಲ್ಲ ಇದಕ್ಕಾಗಿ ಮಂಗಳೂರಿನಲ್ಲಿ ಒಂದು ಫರ್ಟಿಲೈಸರು ಫ್ಯಾಕ್ಟರಿ, ಬಳ್ಳಾರಿಯಲ್ಲಿ ಒಂದು ಫರ್ಟಿಲೈಸರು ಫ್ಯಾಕ್ಟರಿ, ಧಾರವಾಡದಲ್ಲಿ ಇನ್ನೊಂದು ಫರ್ಟಿಲೈಸರು ಫ್ಯಾಕ್ಟರಿ ಹೀಗೆ ತೆಗೆದು ಎಲ್ಲರಿಗೂ ಫರ್ಟಿಲೈಸರು ಒದಗಿಸಬೇಕೆಂಬ ಕೂಗು ಎಲ್ಲ ರೈತರುಗಳಲ್ಲೂ ಕೇಳಿಬರುತ್ತಿದೆ ಇದರಿಂದೇನಾಗುತ್ತದೆ ಎಂದರೆ ರೈತರು ಸೋಮಾರಿಯಾಗಲು ನಾವೇ ಅವಕಾಶ ಮಾಡಿಕೊಟ್ಟಂತಾಗುತ್ತದೆ ಇಂತಹ ನೀತಿ ಹಾನಿಕರವಾದುದು. ಕಾಂಪೋಸ್ಟು ಗೊಬ್ಬರವನ್ನು ರೈತರು ಮಾಡುವುದನ್ನು ಈಚೀಚೆಗೆ ಕಡಿಮೆ ಮಾಡಿದರು. ಇದರಿಂದಾಗಿ ಆಹಾರದ ಬೆಳೆ ಬರುವುದು ಕಡಿಮೆಯಾಗುತ್ತಿದೆ. ಪ್ರತಿಯೊಂದಕ್ಕೂ ಫರ್ಟಿಲೈಸರೇ ಬೇಕು ಎಂದು ಒತ್ತಾಯ ಮಾಡುವುದು ಸರಿಯಲ್ಲ. ಆದರೂ ನಮ್ಮ ರಾಜ್ಯ ಸರಕಾರದವರು ಆಹಾರದ ಬೆಳೆಯನ್ನು ಒಂದು ರೀತಿ ಹಕ್ಕೋಟೆಯಲ್ಲಿಟ್ಟಿದ್ದಾರೆ. ಇದಕ್ಕೆ ಕಾರಣ ನಮ್ಮ ರಾಜ್ಯದಲ್ಲಿ ಅಂತರ್‌ಜಿಲ್ಲಾ ನಿರ್ಬಂಧ ಇಟ್ಟಿದ್ದಾರೆ. ಇದಿಲ್ಲದೇ ಇದ್ದರೆ ನಮ್ಮ ಪಕ್ಕದ ರಾಜ್ಯಗಳಾದ ತಮಿಳುನಾಡು ಹಾಗೂ ಇತರ ನೆರೆ ರಾಜ್ಯಗಳಿಗೆ ಸುಮಾರು 40-50 ಲಾರಿಗಳಲ್ಲಿ ಮೊದಲು ಅಕ್ಕಿ ಕಳ್ಳಸಾಗಾಣಿಕೆಯಾಗುತ್ತಿತ್ತು. ಇದನ್ನು ಈಗ ತಡೆಗಟ್ಟಲಾಗುತ್ತಿದೆ. (Coarse Grain) ಕೋರ್ಸ್‌ಗ್ರೇನು ನಮ್ಮ ರಾಜ್ಯದಿಂದ ಹೊರಗಡೆ ಹೋಗುತ್ತಿದೆ ಇದೇ ಪಕ್ಕದ ಆಂಧ್ರದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿ ಆಹಾರದ ಬೆಲೆ ನೋಡಿದರೆ ಕೆ.ಜಿ ಗೆ 6 ಹಾಗೂ 8 ರೂಪಾಯಿಗಳಷ್ಟು ಅಕ್ಕಿ ಬೆಲೆ ಇದೆ. ಇದನ್ನು ನಾವು ಗಮನಿಸಬೇಕು. ಹೊರಹೋಗುವ Coarse Grain ನನ್ನ ತಡೆಯಬೇಕು. ಇನ್ನು ನಮ್ಮ ಯೋಜನೆಗಳ ಬಗ್ಗೆ ಹೇಳಬೇಕಾದರೆ ಸುಮಾರು 1950ರಿಂದಲೂ ಇಂಡಿಯಾ ಸರಕಾರ ಸಾವಿರಾರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವ ಯೋಜನೆಗಳು ಸಾಕಷ್ಟು ಫಲಕಾರಿಯಾಗುತ್ತಿಲ್ಲ. ಇದಕ್ಕೆ ಕಾರಣ ನಮ್ಮ ಸರಕಾರ ಮಾಡುವ ಯೋಜನೆಗಳು ಯಾವ ರೀತಿ ಇವೆ ಎಂದರೆ ಅದು Armchair Economist plan (ಆರ್ಮ್‌ಚೇರ್ ಎಕಾನಮಿಸ್ಟ್) ಪ್ಲಾನ್‌ನಂತೆ ಆಗಿದೆ. ಯಾವಾಗಲೂ ಯೋಜನೆಯನ್ನು ಕೆಳಮಟ್ಟದಲ್ಲಿ ಮೊದಲು ತಂದು ಅದನ್ನು ಮೇಲು ಮಟ್ಟಕ್ಕೆ ತರಬೇಕು. ಮೊದಲು ಗ್ರಾಮ ಮಟ್ಟದಲ್ಲಿ ಯೋಜನೆಗಳು ಆಗಿ ಅದು ತಾಲ್ಲೂಕಿನ ಮಟ್ಟದಲ್ಲಿ ಬಂದು ಆ ನಂತರ ಜಿಲ್ಲಾ ಮಟ್ಟದಲ್ಲಿ ತಂದು ಅವನ್ನು ಜಾರಿಗೆ ತಂದರೆ ಆಗ ಜನರಿಗೆ ಅದು ಫಲಕಾರಿಯಾಗಿ ಕೆಲಸ ಮಾಡುತ್ತದೆ. ಇದರ ಬಗ್ಗೆ ನಮ್ಮ ಸರಕಾರ ಇನ್ನೂ ಸರಿಯಾಗಿ ಯೋಚನೆ ಮಾಡಲಿಲ್ಲ. ಇದರಿಂದಾಗಿ ನಮ್ಮ ಪ್ಲಾನುಗಳಿಂದ ಸಾಕಷ್ಟು ಫಲ ಜನರಿಗೆ ಸಿಗುತ್ತಿಲ್ಲ. ಎಂದು ಹೇಳಿದರೂ ಅತಿಶಯೋಕ್ತಿ ಆಗಲಾರದು ಪ್ಲಾನಿಂಗ್ ನಮ್ಮ ರಾಷ್ಟ್ರಕ್ಕೆ ಹೊಸದಲ್ಲ. Sir M. V. ರವರು 1930ರಲ್ಲಿ ನಮಗೆ ಸಾರಿದ್ದಾರೆ.

ಇನ್ನು ವ್ಯವಸಾಯದ ಬಗ್ಗೆ ಹೇಳಬೇಕಾದರೆ ಇಂದು ನಾಲಾಕೆಳಗೆ ಇರುವ ಭೂಮಿಗಳೆಲ್ಲ ಸಾಮಾನ್ಯವಾಗಿ ಶ್ರೀಮಂತರ ವಶದಲ್ಲಿದೆ, ಗದ್ದೆ ಹಾಗೂ ತೋಟಗಳು ಕೂಡ ಶ್ರೀಮಂತರ ವಶದಲ್ಲೇ ಇವೆ. ನಾಲೆ ಕೆಳಗೆ ಇರುವ ಬಯಲುಗಳು ಕೂಡ ಬಹುತೇಕ ಶ್ರೀಮಂತರ ಕೈಯವಶದಲ್ಲಿ ಇರುವುದು. ಬಡವರಿಗೆ ಬಹುತೊಂದರೆ ಮತ್ತು ನಮ್ಮ ರೈತರು, ಪ್ರತಿಯೊಂದು ಕಡೆಯಲ್ಲಿಯೂ ಫರ್ಟಿಲೈಸರು ಬೇಕೆಂದು ಹೇಳುತ್ತಾರೆ. ಆದರೆ ಹಳ್ಳಿಗಾಡಿನಲ್ಲಿ ಹಿಂದೆ ಮಾಡುತ್ತಿದ್ದಂತೆ ಕಾಂಪೋಸ್ಟು ಗೊಬ್ಬರ ಮತ್ತು "Green Mannur" ಮಾಡುವುದನ್ನೇ ಬಿಟ್ಟು ಬಿಟ್ಟಿದ್ದಾರೆ. ಇದರಿಂದಾಗಿ ರೈತರಿಗೆ ಪ್ರತಿಯೊಂದು ಕಡೆಯಲ್ಲೂ ಸುಧಾರಿತವಾದ ಬೀಜಗಳೇ ಬೇಕು, ಫರ್ಟಿಲೈಸರೇ ಬೇಕು ಎಂದು ಒತ್ತಾಯಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಬರೀ ಯೋಜನೆಗಳನ್ನು ಮಾಡಿದರೇ ಅನುಕೂಲವಾಗುವುದಿಲ್ಲ. ಇದರಲ್ಲಿ ವಿರೋಧ ಪಕ್ಷದವರೂ ಕೂಡ ಸರಕಾರದವರೊಡನೆ ಸಹಕರಿಸಿ ಕೆಲಸ ಮಾಡಿದರೆ ನಮ್ಮ ದೇಶದ ಜನತೆಗೂ ಸಮಾಧಾನವಾಗುತ್ತದೆ. ಸಹಾಯವಾಗುತ್ತೆ ಮತ್ತು ನಮ್ಮ ಪ್ರಾಜೆಕ್ಟುಗಳೂ ಯಶಸ್ವಿಯಾಗುತ್ತವೆ. ಆದರೆ ಆ ರೀತಿ ಸಹಕಾರವನ್ನು ಇಂದು ನಮ್ಮ ವಿರೋಧ ಪಕ್ಷದವರು ಸರ್ಕಾರಕ್ಕೆ ಕೊಡುತ್ತಿಲ್ಲ. ಇದರ ಕಡೆಗೆ ಅವರು ಹೆಚ್ಚು ಗಮನ ಕೊಡಬೇಕು ಮತ್ತು ಸಹಕರಿಸಬೇಕೆಂದು ಅವರಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಬರೀ ಟೀಕೆಯಿಂದ ಏನೂ ಉಪಯೋಗವಿಲ್ಲ. ಆದರೆ ರಚನಾತ್ಮಕ ಹಾಗೂ ಕ್ರಿಯಾಶೀಲ ಟೀಕೆಗಳನ್ನು ನಾನು ಹೃದಯ ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಪಶುಸಂಗೋಪನೆಯ ಬಗ್ಗೆ ಹೇಳುವುದಾದರೆ ನಮ್ಮ ರೈತರಿಗೆ ಒಂದು ಜೊತೆ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿ ಇಲ್ಲ. ನಮಗೆ ಮೆಕನೈಜ್ಡ್ ಫಾರಂ ಏತಕ್ಕೆ ಬೇಕು ಸ್ವಾಮಿ ? ನಮ್ಮಲ್ಲಿ ಬೇಕಾದಷ್ಟು Manpower (ಮ್ಯಾನ್‌ಪವರ್) ಇಲ್ಲವೇ ? ಅದಕ್ಕೋಸ್ಕರ ನಮ್ಮಲ್ಲಿರುವ ಮ್ಯಾನ್ ಪವರ್ ಮತ್ತು ಅನಿಮಲ್ ಪವರ್ ಅನ್ನು ಹೆಚ್ಚಾಗಿ ಉಪಯೋಗಿಸಿಕೊಂಡು, ವ್ಯವಸಾಯ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಇರುವುದು ವಿಷಾದಕರ. ವಿಶ್ವಬ್ಯಾಂಕಿನ ನೆರವಿನಿಂದ ರಾಜ್ಯದಲ್ಲಿ ಡೇರಿ ಮತ್ತು ಪಶುಸಂಪತ್ತಿನ ಅಭಿವೃದ್ಧಿ ನಿಮಿತ್ತವಾದ ಭಾರಿ ಕಾರ್ಯಕ್ರಮವನ್ನು ನೆರವೇರಿಸಲು, ಕರ್ನಾಟಕ ಡೇರಿ ಅಭಿವೃದ್ಧಿ ಕಾರ್ಪೋರೇಷನ್ ರಚಿತವಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಈ ಯೋಜನೆಗೆ ಸುಮಾರು 51 ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದಾಗಿ ಹೇಳಿದ್ದಾರೆ. ಇದರಿಂದ ಸಾಮಾನ್ಯ ರೈತರಿಗೆ ಖಂಡಿತವಾಗಿಯೂ ಅನುಕೂಲವಾಗುತ್ತದೆ; ಮತ್ತು ಅದರಲ್ಲೂ ಬಡರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ಅವರಿಗೆ ನೇರವಾಗಿ ಹಣಸಹಾಯ ದೊರೆಯುವುದಕ್ಕೆ ಸಹಾಯವಾಗುತ್ತದೆ. ಪಶುಸಂಗೋಪನೆಯ ಬಗ್ಗೆ ಅಮೃತಮಹಲ್ ಮತ್ತು ಹಳ್ಳಿಕಾರ್ ತಳಿಗಳನ್ನು ಅಭಿವೃದ್ಧಿ ಮಾಡುವ ಬಗ್ಗೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಎಂಬುದು ಗೊತ್ತಾಗಲಿಲ್ಲ ? ಇದು ಅತಿ ಪ್ರಾಮುಖ್ಯವಾದ ವಿಚಾರ. ಆದ್ದರಿಂದ ಈ ಬಗ್ಗೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಎಂದು ನಾನು ಮಾನ್ಯ ಪಶುಸಂಗೋಪನಾ ಮಂತ್ರಿಗಳನ್ನು ಒತ್ತಿ ಕೇಳಬೇಕಾಗಿದೆ. ರೈತರಿಗೆ ದನಗಳು ಬೆನ್ನೆಲುಬು.

ಮೀನುಗಾರಿಕೆಯ ಬಗ್ಗೆ ಹೇಳುವುದಾದರೆ ಒಳನಾಡಿನ ಮೀನುಗಾರಿಗೆ ಅಭಿವೃದ್ಧಿ ಕಾರ್ಪೋರೇಷನ್ ಸಂಸ್ಥೆಯನ್ನು ಸ್ಥಾಪಿಸುವ ವಿಚಾರವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಕರಾವಳಿಯಲ್ಲಿರತಕ್ಕವರು ಸಮುದ್ರದಲ್ಲಿ ಪ್ರಯಾಣಮಾಡಿ ಮೀನುಗಳನ್ನು ಹಿಡಿದು ಸಂಪಾದನೆ ಮಾಡುವುದಕ್ಕೆ ಬೇಕಾದಂತಹ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಹಾಗೆಯೇ ಮೀನುಗಾರಿಕೆ ಅಭಿವೃದ್ಧಿ ಮಾಡುವುದಕ್ಕೆ ಒಳನಾಡಿನ ಮೀನುಗಾರಿಕೆ ಅಭಿವೃದ್ಧಿ ಕಾರ್ಪೋರೇಷನ್ ಸಂಸ್ಥೆಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಈಗ ನಮ್ಮಲ್ಲಿ ಎಷ್ಟೋ ನದಿಗಳು, ಕೆರೆಗಳು, ಬಾವಿಗಳು, ಕುಂಟೆಗಳು ಇವೆ. ಇವುಗಳೆಲ್ಲಿಯೂ ಸಹ ಮೀನಿನ ಮರಿಗಳನ್ನು ಉತ್ಪಾದನೆ ಮಾಡಿ ಈ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡುವಹಾಗೆ ಮಾಡಬೇಕು. ಸಾಧ್ಯವಾದಮಟ್ಟಿಗೆ ಅದಷ್ಟು ಜಾಗ್ರತೆ ಇನ್‌ಲ್ಯಾಂಡ್ ಫಿಷರೀಸ್ ಕಾರ್ಪೋರೇಷನ್ ಅಸ್ತಿತ್ವದಲ್ಲಿ ಬರುವಹಾಗೆ ಮಾಡಬೇಕೆಂದು ಮತ್ತೊಮ್ಮೆ ಸರ್ಕಾರಕ್ಕೆ ನಿವೇದಿಸುತ್ತೇನೆ.

ಅರಣ್ಯದ ವಿಚಾರವನ್ನು ಹೇಳುವುದಾದರೆ ಇದು ಒಂದು ಅರಣ್ಯರೋದನವಾಗಿವೆ ಎಂದು ಹೇಳಿದರೂ ತಪ್ಪಾಗಲಾರದು. ಒಂದು ಮರವನ್ನು ಬೆಳೆಸಬೇಕಾದರೆ ಸುಮಾರು 50-60 ವರ್ಷಗಳಾದರೂ ಬೇಕಾಗುತ್ತೆ. ಆದರೆ ಮರ ಕಡಿಯುವುದೇನೋ ಬೇಗನೆ ಕಡಿಯಬಹುದು. ಆದ್ದರಿಂದ ಕಾಡನ್ನು ಬೆಳೆಸುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡ ಅದರಿಂದ ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈಗ ನಮ್ಮ ರಾಜ್ಯದಲ್ಲಿ 14 ಪರ್ಸೆಂಟ್ ಫಾರೆಸ್ಟ್ ಇದೆ. ಆದರೆ ದೇಶದ ಅವರೇಜ್ ಪ್ರಕಾರ 23 ಪರ್ಸೆಂಟ್ ಅರಣ್ಯ ಇದೆ. Rosewood "ರೋಜ್‌ವುಡ್" ಅನ್ನು ಹೆಚ್ಚು ಹೆಚ್ಚು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು ಅದನ್ನು ಹೊರದೇಶಗಳಿಗೆ ಕಳುಹಿಸಿ ಅದರಿಂದ ನಮ್ಮ ದೇಶಕ್ಕೆ ಹೆಚ್ಚಿನ Foreing Exchange ಆದಾಯ ಬರುವಂತೆ ಮಾಡಬೇಕು. ಈಗ ನಮ್ಮಲ್ಲಿ ಗಂಧದ ಮರ ಈಗ ಬಹಳ ಕಡಿಮೆಯಾಗಿದೆ. ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು, ನಮ್ಮದು ಗಂಧದ ನಾಡು, ಚಿನ್ನದ ನಾಡು ಎಂದು ಬರೆದಿದ್ದಾರು. ಈಗ ಇಂತಹ ಗಂಧದ ನಾಡಿನಲ್ಲಿ ಗಂಧವೇ ಇಲ್ಲದಂತಾಗಿದೆ. ಫಾರೆಸ್ಟ್ ಇಲಾಖೆ ಮತ್ತು ಇಂಡಸ್ಟ್ರಿ ಇಲಾಖೆ ಒಂದು ಕೋಆರ್ಡಿನೇಷನ್ ಇಟ್ಟುಕೊಂಡು ಕೆಲಸಮಾಡಬೇಕು. ಕಾಡನ್ನು ಬೆಳೆಸುವವರೇ ಒಂದು ಇಲಾಖೆ. ಕಾಡನ್ನು ಉಪಯೋಗಿಸುವವರೇ ಒಂದು ಇಲಾಖೆ. ಆದ್ದರಿಂದ ಎರಡು ಇಲಾಖೆಗಳೂ ಕೋಆರ್ಡಿನೇಷನ್ ಇಟ್ಟುಕೊಂಡು ಕೆಲಸಮಾಡಬೇಕು. ಬಂದ ಹಣದಿಂದ ಕಾಡನ್ನು ಬೆಳಸಬೇಕು. Frinds of the Tree Socitey ಉತ್ತೇಜನ ಗೊಳಿಸಬೇಕು.

ನೀರಾವರಿಯ ಬಗ್ಗೆ ಹೇಳಬೇಕಾದರೆ ನಮ್ಮ ದೇಶದಲ್ಲಿ ಬೇಕಾದಷ್ಟು ನದಿಗಳು ಹರಿಯುತ್ತವೆ. ಆದರೆ ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಇದ್ದೇ ಇದೆ. ಕಾವೇರಿ, ಕೃಷ್ಣಾ, ಹೇಮಾವತಿ, ಮಲಪ್ರಭಾ ಘಟಪ್ರಭಾ ಇತ್ಯಾದಿ ಯೋಜನೆಗಳೆಲ್ಲಾ ನಮಲ್ಲಿ ಇವೆ. ಆದರೆ ಇವುಗಳನ್ನು ಕಾರ್ಯಗತ ಮಾಡುವುದಕ್ಕೆ ಹಣ ಮಾತ್ರ ಇಲ್ಲ. ಈ ಯೋಜನೆಗಳನ್ನು ಪೂರ್ಣ ಮಾಡಬೇಕಾದರೆ ಸುಮಾರು 600 ಕೋಟಿ ರೂಗಳು ಆದರೂ ಬೇಕಾಗುತ್ತದೆ. ಕಲವು ಕಡೆ ಡ್ಯಾಮ್ ಕಟ್ಟಿದ್ದಾರೆ, ಕಾಲುವೆಗಳ

ಇಲ್ಲ, ಮತ್ತೊಂದು ಕಡೆ ಕಾಲುವೆ ಮಾಡುವುದಕ್ಕೆ ಲ್ಯಾಂಡ್ ಅಕ್ವೈರ್ ಆಗಿಲ್ಲ. ಡ್ಯಾಮಿಗೆ ಸಿಮೆಂಟ್ ಇಲ್ಲ; ಹೀಗಾಗಿ ಅನೇಕ ಯೋಜನೆಗಳ ಕೆಲಸ ಅರ್ಧಂಬರ್ಧ ಆಗಿ ಉಳಿದಿವೆ ಈ ಯೋಜನೆಗಳನ್ನು ಪೂರ್ತಿ ಮಾಡಬೇಕಾದರೆ ಸುಮಾರು 600 ಕೋಟಿ ರೂಪಾಯಿಗಳು ಆದರೂ ಬೇಕಾಗುತ್ತದೆ. ಆದ್ದರಿಂದ ಒಂದು ನಿಯೋಜಿತ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡು ಒಂದೊಂದು ಅಣೆಕಟ್ಟನ್ನು ಮುಗಿಸಿದರೆ ಒಳ್ಳೆಯದು. ನಮ್ಮ ರಾಜ್ಯದಲ್ಲಿ ಇರಿಗೇಷನ್ ಪೊಟೆನ್ಷಿಯಾಲಿಟಿ 8 ಪರ್ಸೆಂಟ್ ಇದ್ದರೆ ನಮ್ಮ ಪಕ್ಕದ ರಾಜ್ಯವಾದ ಆಂಧ್ರ ಪ್ರದೇಶದಲ್ಲಿ 30 ಪರ್ಸೆಂಟ್ ನೀರಾವರಿ ಇದೆ. ತಮಿಳು ನಾಡಿನಲ್ಲಿ ನಮ್ಮ ರಾಜ್ಯಕ್ಕಿಂತಲೂ ಹೆಚ್ಚು ನೀರಾವರಿ ಪ್ರದೇಶ ಮತ್ತು ನೀರಾವರಿ ಸೌಲಭ್ಯಗಳಿದ್ದರೂ ಕೂಡ ಅವರು ಆಹಾರದ ವಿಷಯದಲ್ಲಿ ಕಷ್ಟಪಡತಕ್ಕ ಕಾಲದಲ್ಲಿ, 8 ಪರ್ಸೆಂಟ್ ನೀರಾವರಿ ಇರುವ ನಮ್ಮ ರಾಜ್ಯದಲ್ಲಿ ಆಹಾರಧಾನ್ಯಕ್ಕಾಗಿ ಕಷ್ಟಪಡುವುದು ಆಶ್ಚರ್ಯವೇನೂ ಅಲ್ಲ.

ಕಾಳಿನದಿಯ ಯೋಜನೆ ಬಗ್ಗೆ ಹೆಚ್ಚಿನ ವಿಷಯ ಹೇಳಬೇಕಾಗಿದೆ. ಈ ಯೋಜನೆಯನ್ನು ಕಾರ್ಯಗತ ಮಾಡಿದರೆ ಇಡೀ ದೇಶದಲ್ಲೇ ಒಂದು ಒಳ್ಳೆಯದು ಆಗತಕ್ಕಂಥಾ ಯೋಜನೆ ಇದು ಕೇಂದ್ರ ಸರ್ಕಾರದಲ್ಲಿ, ರಾಜ್ಯ ಸರ್ಕಾರದವರು ಹಾಗೂ ವಿರೋಧಪಕ್ಷದವರು ಎಲ್ಲರೂ ತಮ್ಮ ಪ್ರಭಾವವನ್ನು ಕೇಂದ್ರದ ಮೇಲೆ ಬೀರಿ ಹಣ ಸಹಾಯವನ್ನು ಪಡೆದುಕೊಂಡು ಈ ಯೋಜನೆಯನ್ನು ಕಾರ್ಯಗತ ಮಾಡಬೇಕು. ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯೆಂದು ಪರಿಗಣಿಸಿದರೂ ಸರಿಯೇ. ಇಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯಾದರೆ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಅಭಿವೃದ್ಧಿಯಾಗುವುದಕ್ಕೆ ಸಹಾಯಕವಾಗುತ್ತದೆ. ಇದರಿಂದ ಉದ್ಯೋಗಾವಕಾಶ ಹೆಚ್ಚಾಗುತ್ತದೆ. ನಿರುದ್ಯೋಗ ಕಡಿಮೆಯಾಗುತ್ತದೆ. ದೇಶದ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ. ಕೈಗಾರಿಕೆಗಳಿಗೆ ಜಮೀನು ಕೊಡತಕ್ಕ ಕಾಲದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಫಲವತ್ತಾದ ಜಮೀನು ಮೈಸೂರು ತುಮಕೂರು, ಹೊಸಕೋಟೆ ಮುಂತಾದ ಕಡೆ ರಸ್ತೆ ಪಕ್ಕದಲ್ಲಿರುವ ಜಮೀನು ಕೊಡುತ್ತಿದ್ದಾರೆ. ಆದ್ದರಿಂದ ಫಲವತ್ತಾದ ಜಮೀನನ್ನು ಕೈಗಾರಿಕೆಗಾಗಲೀ ಕಮ್ಯುನಿಕೇಷನ್ ರಸ್ತೆಗಳಿಗಾಗಲೀ ಕೊಡುವುದನ್ನು ತಪ್ಪಿಸಬೇಕು. ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವ ಬಗ್ಗೆ ಸರ್ ಎಂ. ವಿಶ್ವೇಶ್ವರಯ್ಯನವರು ಏನು ಹೇಳಿದ್ದಾರೆ ಅದನ್ನು ಅನುಷ್ಠಾನಕ್ಕೆ ತಂದು, ಕೈಗಾರಿಕೆಯನ್ನು ಅಭಿವೃದ್ಧಿಪಡಿಸಬೇಕು. ಕೈಗಾರಿಕೆ ಹಿಂದೆ ಏನಾಗಿತ್ತು ಅಷ್ಟು ಮಾತ್ರ ಉಳಿದಿದೆ. ವಿಜಯನಗರ ಸ್ಟೀಲ್ ಪ್ಲಾಂಟ್ ಹಾಕಬೇಕಾದರೆ ಕೋಟ್ಯಾಂತರ ರೂಪಾಯಿಗಳು ಬೇಕು. ಅದನ್ನು 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದಾರೆ. ಅದೇನು 1980 ನೇ ಇಸವಿಗೆ ಬರುತ್ತದೆಯೋ ಅಥವಾ 1982 ಕ್ಕೆ ಬರುತ್ತದೆಯೋ ಗೊತ್ತಿಲ್ಲ. ತೋರಣಗಲ್‌ನಲ್ಲಿ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್ ಬರುತ್ತದೆ ಇದರಿಂದ ಸಂಸ್ಥಾನದ ಚಿತ್ರವೇ ಬದಲಾಯಿಸುತ್ತದೆಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ಅಲ್ಲಿ ಸ್ಕೆಲಿಟನ್ ಸ್ಟ್ಯಾಫ್ ಮಾತ್ರ ಕೆಲಸ ಮಾಡುತ್ತಿವೆ. ಆದ್ದರಿಂದ ಆದಷ್ಟು ಜಾಗ್ರತೆ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಕೆಲಸವನ್ನು ಕಾರ್ಯಗತಮಾಡಬೇಕು ಎಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನಮ್ಮ ರಾಜ್ಯದಿಂದ ಮ್ಯಾಂಗನೀಸ್ ಹೊರಗಡೆ ಕಳುಹಿಸಿ, ಹೊರಗಡೆಯಿಂದ ಸ್ಟೀಲನ್ನು ತರಿಸುತ್ತಿದ್ದಾರೆ. ಕುದುರೆಮುಖದ ಯೋಜನೆಯ ಬಗ್ಗೆ ಇರಾನ್ ದೇಶದೊಡನೆ ನಮ್ಮ ಸರ್ಕಾರದವರು ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಒಟ್ಟಿನಲ್ಲಿ ರಾಜ್ಯ ಸರ್ಕಾರದವರು ಮತ್ತು ವಿರೋಧಪಕ್ಷದವರು ಕೇಂದ್ರ ಸರ್ಕಾರದ ಮೇಲೆ ಪ್ರಭಾವವನ್ನು ಬೀರಿ ವಿಜಯನಗರ ಉಕ್ಕಿನ ಕಾರ್ಖಾನೆ ಬೇಗ ಬರುವಂತೆ ಮಾಡಬೇಕು ಎಂದು ಹೇಳುತ್ತೇನೆ. ರಾಷ್ಟ್ರ ಅಥವಾ ಅಂತರ ರಾಷ್ಟ್ರೀಯ Agency ಯಿಂದ ಹಣ ತಂದರೂ ಸರಿಯೆ ? ಒಟ್ಟಿನಲ್ಲಿ ನಮ್ಮ ಕೆಲಸ ಮುಗಿದರೆ ಸಾಕು.

ಸಿಲ್ಕ್ ಇಂಡಸ್ಟ್ರಿ ಬಗ್ಗೆ, ಟೆಕ್ಸ್‌ಟೈಲ್ ಇಂಡಸ್ಟ್ರಿ ಬಗ್ಗೆ, ನಮ್ಮ ಸರ್ಕಾರದವರು 65 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೂ ಸಹ ನಮ್ಮ ಸರ್ಕಾರದವರು ಜಪಾನ್ ದೇಶದಮೇಲೆ ಕಾಂಪಿಟಿಷನ್ ಮಾಡುವುದಕ್ಕೆ ಆಗಿಲ್ಲ. ಗೃಹಕೈಗಾರಿಕೆ, ಕಾಟೇಜ್ ಇಂಡಸ್ಟ್ರಿ ಮತ್ತು ಅಗ್ರೋಬೇಸ್ಡ್ ಇಂಡಸ್ಟ್ರಿ ಇವುಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಅವು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತು ಸಿಲ್ಕ್ ಇಂಡಸ್ಟ್ರಿ ಬೆಳೆಯುವುದಕ್ಕೆ ಸಹಾಯ ಮಾಡಬೇಕು ಎಂದು ನಾನು ಹೇಳುತ್ತೇನೆ. Silk Industry is the Queen of Textile Industry ಎಂದು ಕರೆಯುತ್ತಾರೆ.

ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ನಮ್ಮ ಸರ್ಕಾರದವರು ವಿದ್ಯಾಭ್ಯಾಸಕ್ಕೋಸ್ಕರವಾಗಿ ಸುಮಾರು 80 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಆದರೂ ಸಹ ನಿರೀಕ್ಷಿಸಿದಷ್ಟು ಫಲಿತಾಂಶ ಬಂದಿಲ್ಲ. ಜೊತೆಗೆ ಸ್ಟ್ಯಾಂಡರ್ಡ್ ಕೂಡ ಕಡಿಮೆಯಾಗಿದೆ. ಆದ್ದರಿಂದ ಈ ವಿದ್ಯಾಭ್ಯಾಸದ ಸಿಸ್ಟಂ ಪೂರ್ಣವಾಗಿ ಬದಲಾವಣೆ ಆಗಬೇಕು. ಮಾಸ್ ಎಜುಕೇಷನ್ ಬೇಡ.

ಮ್ಯಾನುಫ್ಯಾಕ್ಚರ್ ಆಫ್ ಗ್ರಾಜ್ಯುಯೇಟ್ಸ್ ಬೇಡ. ಬುದ್ಧಿವಂತರಾದ ವಿದ್ಯಾರ್ಥಿಗಳನ್ನು ಆರಿಸಿ ಕಾಲೇಜು ವಿದ್ಯಾಭ್ಯಾಸಕ್ಕೆ ಕಳುಹಿಸಬೇಕು. Pick of the Bunch ಆಗಬೇಕು.

ಇನ್ನು ಜನಾರೋಗ್ಯದ ಬಗ್ಗೆ ಹೇಳಬೇಕಾದರೆ, ಇದರಲ್ಲಿ ಭಾರತೀಯ ವೈದ್ಯಪದ್ಧತಿ, ಯೂನಾನಿ, ಆಯುರ್ವೇದ ವೈದ್ಯಕೀಯ ಪದ್ಧತಿ, ಅಲೋಪತಿಕ್ ವೈದ್ಯಪದ್ಧತಿ ಎಂದು ನಾಲ್ಕಾರು ತರಹ ವೈದ್ಯಕೀಯ ಪದ್ಧತಿಗಳು ನಮ್ಮಲ್ಲಿ ಇವೆ. ಇದರಲ್ಲಿ ವೈದ್ಯಕೀಯ ಪದ್ಧತಿ ಪ್ರಾಮುಖ್ಯವಲ್ಲ. ನಾವು ಜನಾರೋಗ್ಯಕ್ಕಾಗಿ ಸುಮಾರು 35 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಇದರಿಂದ ಮುಖ್ಯವಾಗಿ ಜನಾರೋಗ್ಯ ರಕ್ಷಣೆಯಾಗಬೇಕು. ನಮ್ಮ ದೇಶದಲ್ಲಿ 3 ಕೋಟಿ ಜನಸಂಖ್ಯೆಗೆ ಕೇವಲ 44 ಭಾರತೀಯ ಪದ್ಧತಿಯ ಆಸ್ಪತ್ರೆಗಳು ಇವೆ. ಇದಕ್ಕೆ ಇನ್ನೂ ಹೆಚ್ಚು ಖರ್ಚು ಮಾಡಿದರೂ ಚಿಂತೆಯಿಲ್ಲ. ಮುಖ್ಯವಾಗಿ ಬಡಜನಗಳಿಗೆ ವೈದ್ಯಕೀಯ ಸೌಲಭ್ಯ ದೊರೆಯಬೇಕು. ಇದರಲ್ಲಿ ಇಂಡಿಯನ್ ಸಿಸ್ಟಂ ಆಫ್ ಮೆಡಿಸಿನ್ ಎನಿದೆ ಇದನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕು. ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ 20–30 ಬೆಡ್‌ಗಳನ್ನು ಇಟ್ಟು ಭಾರತೀಯ ವೈದ್ಯಕೀಯ ಪದ್ಧತಿಯ ಪ್ರಯೋಗ ಮತ್ತು ಪ್ರದರ್ಶನವನ್ನು ತೋರಿಸುವುದಕ್ಕೆ ಸಹಾಯ ಮಾಡಬೇಕು. ಕೇವಲ 6 ಲಕ್ಷ ರೂಪಾಯಿಗಳು ನಮ್ಮ ಭಾರತೀಯ ಪದ್ಧತಿಗೆ ಖರ್ಚು ಮಾಡುತ್ತಿರುವುದು ಬಹಳ ವಿಷಾದಕರ ಈ ಪದ್ಧತಿಗೆ ಸುಮಾರು 5 ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕು. ಇನ್ನು ಭಾರತೀಯ ಪದ್ಧತಿಯ ಆಸ್ಪತ್ರೆಗಳನ್ನು ತೆಗೆಯಬೇಕು. ಎಲ್ಲಿ ಸರ್ಕಾರದ ಪ್ರೋತ್ಸಾಹ ವಿರುತ್ತೋ ಅಲ್ಲಿ ಅಂತಹ ಪದ್ಧತಿ ಬೆಳೆಯಲು ಅನುಕೂಲವಾಗುತ್ತೆ. ಗ್ರಾಮಾಂತರಗಳಲ್ಲಿ ನಮ್ಮ ವೈದ್ಯರುಗಳು ಹೋಗಿ ನೆಲಸಬೇಕು, ಬಡಜನರಿಗೆ ಸೇವೆ ಸಲ್ಲಿಸಲು ತಯಾರಾಗಬೇಕು, ಆಗಲೇ ಜನರ ಆರೋಗ್ಯ ಸುಧಾರಿಸುತ್ತದೆ.

11–00 A. M.

ಕಮ್ಯೂನಿಕೇಷನ್ಸ್ ಬಗ್ಗೆ ಹೇಳುವುದಾದರೆ, ತಮಗೆ ಗೊತ್ತಿರುವ ಹಾಗೆ " ಶ್ರೀ ಆರ್ಮುಗಂ ಕಮಿಟಿಯವರು " ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿರುತ್ತಾರೆ. ಅದರ ಪ್ರಕಾರ ಹೋದ ವರ್ಷದಲ್ಲಿ 2 ಕೋಟಿ ರೂಪಾಯಿಗಳನ್ನು ಕ್ಷಾಮ ನಿವಾರಣೆಯ ಕಾರ್ಯಗಳಿಗಾಗಿ ಖರ್ಚು ಮಾಡಿದಾಗ ಹಿಂದೆಂದೂ ಕಾಣದಷ್ಟು ರಸ್ತೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಿದ್ದರೂ ಪ್ರಶಂಸೆ ಮಾಡಿದ್ದಾರೆ; ಇನ್ನೂ ಕೆಲವು ಲೋಪದೋಷಗಳಿವೆ. ಕೆಲವು ಕಡೆಗಳಲ್ಲಿ ಕಲ್ವರ್ಟ್ಸ್ ಹಾಗೂ ಬ್ರಿಡ್ಜಸ್ ಮಾಡುವುದಕ್ಕೆ ಬಹಳ ತೊಂದರೆ ಇದೆ. ಅದಕ್ಕೆ ಒಂದು ಕಾರ್ಪೊರೇಷನ್ ರಚನೆಮಾಡುತ್ತೇವೆ ಎಂಬುದಾಗಿ ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳಿದ್ದರು. ಅದನ್ನು ಇದುವರೆಗೆ ಮಾಡಲಿಲ್ಲ. ಈಗಲಾದರೂ ಜಾಗ್ರತೆಯಾಗಿ ಈ ಆ ಕಾರ್ಪೊರೇಷನ್ನನ್ನು ರಚನೆಮಾಡಿ, ಎಲ್ಲೆಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸೇತುವೆಗಳ ಅವಶ್ಯಕತೆ ಇದೆಯೋ ಅಲ್ಲಿ ಅವುಗಳನ್ನು ಕಟ್ಟಿಕೊಟ್ಟು ಬಡ ರೈತರಿಗೆ ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡುವ ಜನರಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲಗಳನ್ನು ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಇನ್ನು ವಸತಿ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಇವರು ಈಗ ಮಾಡುತ್ತೇವೆಂಬುದು 'ಜನತಾ ವಸತಿ ಸ್ಕೀಮು' ತಯಾರಿಸಿದ್ದಾರೆ. ಇದು ನ್ಯಾಷನಲ್ ಪ್ರಾಬ್ಲಂ. ಈ ಒಂದೇ ವರ್ಷದಲ್ಲಿ ಮುಗಿಯುವುದು ಕಷ್ಟ. ಏಕೆಂದರೆ ಇತ್ತೀಚೆಗೆ ಜನಸಂಖ್ಯೆ ಹೆಚ್ಚುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಸ್ಕೀಮು ಇನ್ನೂ ಮುಗಿದಿಲ್ಲ. ನಾವು ಬಡವರಿಗೆ, ನಿರ್ಗತಿಕರಿಗೆ, ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳುವಾಗ ಹೆಚ್ಚಿನ ರೀತಿಯಲ್ಲಿ ಇಂತಹ ಸ್ಕೀಮ್‌ಗಳಿಗೆ ಕೇಂದ್ರದ ನೆರವನ್ನು ನಮ್ಮ ಸರ್ಕಾರದವರು ಪಡೆಯಬೇಕು. ಇಂಡಸ್ಟ್ರಿಯಲ್ ಲೇಬರರ್ಸ್‌ಗೆ ಯಾವ ರೀತಿಯ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಿದ್ದೀರೋ ಅದೇ ರೀತಿಯಲ್ಲಿ ಅಗ್ರಿಕಲ್ಚರಲ್ ಲೇಬರರ್ಸ್‌ಗೂ ಸ್ಕೀಮುಗಳನ್ನು ಮಾಡಿ ಮನೆಗಳ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಒಂದು ಮಾತು. ನಮ್ಮ ಕನ್ನಡ ಭಾಷೆ ಮಾತೃಭಾಷೆ. ಕನ್ನಡವನ್ನು ರಾಜ್ಯ ಭಾಷೆಯನ್ನಾಗಿ ಮಾಡಬೇಕೆಂದಿದ್ದೀರಿ. ಮಾನ್ಯ ಶ್ರೀ ಅನಂತಸುಬ್ಬರಾಯರ ಕನ್ನಡ ಟೈಪ್‌ರೈಟರ್‌ಗಳನ್ನು ತಯಾರುಮಾಡಲು "ಸರ್ಕಾರದ ವತಿಯಿಂದ" ಏಕೆ ಪ್ರಯತ್ನಮಾಡಲಿಲ್ಲ ? ಪ್ರತಿಯೊಂದು ಇಲಾಖೆಗೂ ಕನ್ನಡ ಟೈಪ್‌ರೈಟರ್‌ಗಳು ಬೇಕೆಂದು ಕೇಳುವಾಗ, ಕನ್ನಡ ಸ್ಟೆನೊಗ್ರಾಫರ್ಸ್ ಬೇಕೆಂದು ಕೇಳವಾಗ, ಕನ್ನಡ ಬರಹಗಾರರಿಗೆ ಉತ್ತೇಜನವನ್ನು ಕೊಡಬೇಕು. ನನಗೆ ತಿಳಿದಿರುವ ಹಾಗೆ ಲ್ಯಾಂಗ್ವೇಜ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂಬುದಾಗಿ ಮೈಸೂರಿನಲ್ಲಿದೆ. ತೆಲುಗು

ಮತ್ತು ಕನ್ನಡಕ್ಕೂ ಕೇವಲ ಆರು ಪದಗಳ ವ್ಯತ್ಯಾಸವಿದೆ. ಕನ್ನಡ ಮತ್ತು ತೆಲುಗನ್ನು ಭಾವೈಕ್ಯ ದೃಷ್ಟಿಯಿಂದ ಎರಡನ್ನೂ ಒಂದಾಗಿ ಮಾಡಿದರೆ ಇಡೀ ದಕ್ಷಿಣ ಭಾರತದಲ್ಲಿಯೇ ಒಂದು ಐಕ್ಯತೆ ಭಾವೈಕ್ಯತೆ ಉಂಟಾಗುತ್ತದೆ. ಕನ್ನಡ ಭಾಷೆ ಬೆಳೆಯಬೇಕಾದರೆ ಕನ್ನಡ ಟೈಪ್‌ರೈಟರುಗಳ ಅವಶ್ಯಕತೆ ಅಗತ್ಯವೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ನನಗೆ ಮಾನ್ಯ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.—ಜೈ ಕರ್ನಾಟಕ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ರಾಜ್ಯಪಾಲರು ವಿಧಾನಮಂಡಲದ ಮುಂದೆ ಮಾಡಿರತಕ್ಕ ಭಾಷಣವನ್ನು ಅನುಮೋದಿಸಲು ಹಾಗೂ ಅವರ ಭಾಷಣವನ್ನು ವಂದಿಸುವುದಕ್ಕೆ ಇಟ್ಟಿರತಕ್ಕ ನಿರ್ಣಯವನ್ನು ನಾನು ತೀವ್ರವಾಗಿ ವಿರೋಧಿಸಿ ಒಂದೆರಡು ಸೂಚನೆಗಳನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಸೂಚಿಸಲಿಚ್ಛಿಸುತ್ತೇನೆ. ಈ ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್ಸಿನ ಸಂಖ್ಯಾಬಲ ಅತಿಯಾಗಿದ್ದರೂ ಸಹ ಪಕ್ಷದಲ್ಲಿ ಬಲವಿಲ್ಲವೆಂದು ಈಗಾಗಲೇ ಈ ರಾಜ್ಯಕ್ಕೆ ಸ್ಪಷ್ಟವಾಗಿದೆ. ಇದಕ್ಕೆ ಕಾರಣ ಈ ಮೂರು ವರ್ಷಗಳಲ್ಲಿ ಮೂರು ಸಾರಿ ಮಂತ್ರಿಮಂಡಲ ಬದಲಾವಣೆಯಾಗಿದೆ. ಸ್ಥಿರವಾದ ಹಾಗೂ ಭದ್ರವಾದ ಸರ್ಕಾರ ಇಲ್ಲವೆನ್ನುವುದಕ್ಕೆ ಇದಕ್ಕಿಂತ ಉತ್ಕೃಷ್ಟವಾದ ಉದಾಹರಣೆ ಬೇರೆ ಬೇಕಾಗಿಲ್ಲವೆಂದು ನಾನು ಅರಿತಿದ್ದೇನೆ. ಯಾವ ದೇಶದಲ್ಲಿ ಸುಭದ್ರವಾದ ಸರ್ಕಾರ ಇರುವುದಿಲ್ಲವೋ ಆ ದೇಶದಲ್ಲಿ ಆಡಳಿತ ಸರಿಯಾಗಿ ನಡೆಯುವುದಿಲ್ಲ. ಈ ದೇಶದಲ್ಲಿ ಆಡಳಿತವನ್ನು ನಡೆಸತಕ್ಕ ಅಧಿಕಾರಿಗಳ ಮೇಲೆ ಒಂದು ಹಿಡಿತ ಇಟ್ಟುಕೊಳ್ಳುವ ರಾಜಕಾರಣಿಗಳಲ್ಲಿ ಒಂದು ನೈತಿಕ ಹಕ್ಕು ಇಲ್ಲವೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ವ್ಯಕ್ತಿ ಎಷ್ಟೇ ದೊಡ್ಡವನಾಗಲಿ, ಪಕ್ಷ ಎಷ್ಟೇ ಉತ್ಕೃಷ್ಟವಾಗಿರಲಿ, ಆತನ ಆತ್ಮಶಕ್ತಿ ಬಲಗೊಳ್ಳದ ಪಕ್ಷದಲ್ಲಿ ಮತ್ತು ಆಡಳಿತ ದೌರ್ಬಲ್ಯವನ್ನು ಆತ ಹಿಡಿತದಲ್ಲಿ ಇಟ್ಟುಕೊಳ್ಳತಕ್ಕ ಶಕ್ತಿಯನ್ನು ಪಡೆಯದಿದ್ದ ಪಕ್ಷದಲ್ಲಿ ನಿಜವಾಗಿ ಆಡಳಿತ ಸುಗಮವಾಗಿ ನಡೆಯಲಾರದು. ಅಂತಹ ಒಂದು ಶಕ್ತಿ ಈಗ ಈ ಆಡಳಿತ ಪಕ್ಷಕ್ಕೆ ಇಲ್ಲವೆಂದು ನಾನು ಹೇಳುತ್ತೇನೆ. ಕರ್ನಾಟಕದ ಆಡಳಿತ ಈಗ ಬಹಳ ಕ್ಷೀಣದೆಶೆಗೆ ಇಳಿದಿದೆ. ಈಗ ಈ ದೇಶದಲ್ಲಿ ಆಗುತ್ತಾ ಇರತಕ್ಕ ಲೋಪದೋಷಗಳನ್ನು ತಡೆಗಟ್ಟಲು ಅಸಂಖ್ಯಾತರಾಗಿ ಬಹುಸಂಖ್ಯಾತ ಮಂತ್ರಿಗಳು ಇರತಕ್ಕಂಥ ಈ ಮಂತ್ರಿಮಂಡಲಕ್ಕೆ ಈಗಿನ ಅನೀತಿಯನ್ನು ಭ್ರಷ್ಟಾಚಾರವನ್ನು ಹಾಗೂ ಸ್ವಜನಪಕ್ಷಪಾತವನ್ನು ತಡೆಗಟ್ಟತಕ್ಕ ಶಕ್ತಿಸಾಮರ್ಥ್ಯಗಳು ನಿಜವಾಗಿ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ಕಟ್ಟುನಿಟ್ಟಾಗಿ ಹೇಳಬೇಕಾಗಿದೆ. ಈ ಮಾತು ಈಗ ದೇಶದಲ್ಲಿ ಜನಜನಿತವಾಗಿದೆ. ಮಂತ್ರಿಗಳು ಹಗಲುಹೊತ್ತಿನಲ್ಲಿ ಮಂತ್ರಿಗಳಾಗಿರುತ್ತಾರೆ. ರಾತ್ರಿಯಲ್ಲಿ ಭೂಲೋಕದಲ್ಲಿಯೇ ಕೆಲವರು ಇಲ್ಲವೆಂಬುದಾಗಿ ಜನಜನಿತವಾದ ಮಾತಾಗಿದೆ. ಆದ್ದರಿಂದ ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಎಲ್ಲ ಮಂತ್ರಿಗಳನ್ನೂ ಈ ಸಭೆಗೆ ಕರೆಯತಕ್ಕ ಒಂದು ಸದವಕಾಶವನ್ನು ಮಾನ್ಯ ಸದಸ್ಯರು ಆಡಳಿತ ಪಕ್ಷದ ವತಿಯಿಂದ ಕಲ್ಪಿಸಿಕೊಡಬೇಕೆಂದು ನಾನು ಆಹ್ವಾನ ಮಾಡುತ್ತೇನೆ. ಯಾವ ಮನುಷ್ಯ, ಯಾವ ಪಕ್ಷ, ಪರಸತಿಗೆ, ಪರರೊಕ್ಕಕ್ಕೆ, ಪರಧನಕ್ಕೆ ಮತ್ತು ವಿದೇಶಿ ಮದ್ಯಕ್ಕೆ ಬಲಿಯಾಗುವುದಿಲ್ಲವೋ ಅಂತಹ ವ್ಯಕ್ತಿಗಳಿಂದ, ಅಂತಹ ಪಕ್ಷಗಳಿಂದ ಈ ದೇಶದಲ್ಲಿ ಸುಭದ್ರ ಸರ್ಕಾರ ನಡೆಸುವುದಕ್ಕೆ ಸಾಧ್ಯವೆಂದು ನಾನು ಅರಿತಿದ್ದೇನೆ. ಈ ಮೂರು ಮೂಲಮಂತ್ರಗಳನ್ನು ಈ ಸಭೆಯಲ್ಲಿ ಘೋಷಿಸಿದಂಥ ಮಹಾವ್ಯಕ್ತಿಗಳು, ಬಹಳ ವಯೋವೃದ್ಧರು. ದಕ್ಷ ಆಡಳಿತಗಾರರು ಈಗಲೂ ಇದ್ದಾರೆ. ಆದರೆ ಅಂತಹ ದಕ್ಷತೆ ಈಗ ಹೊರಟುಹೋಗಿದೆ. ಜನ ಅದನ್ನು ಕಿತ್ತುಕೊಂಡಿದ್ದಾರೆ. ಆ ಮಹಾವ್ಯಕ್ತಿಗಳನ್ನು ನಾನು ಈ ಸಂದರ್ಭದಲ್ಲಿ ಇಲ್ಲಿ ಇವತ್ತು ನೆನೆಸಿಕೊಳ್ಳಬೇಕಾಗಿದೆ. ಕೆಲವು ಮಾನ್ಯ ಮಂತ್ರಿಗಳು ಮಂತ್ರಿಗಳಾಗಿ ಕರ್ನಾಟಕದಲ್ಲಿ ಓಡಾಡುವುದಕ್ಕೆ ಬದಲಾಗಿ ಬರೀ ಸದಸ್ಯರಾಗಿ ಓಡಾಡಿದರೆ ಪ್ರಾಯಶಃ ಅವರಿಗೆ ಹೆಚ್ಚಿನ ಗೌರವ ಸಿಗುತ್ತದೆ. ಅದಕ್ಕೆ ಮಾನ್ಯ ಶ್ರೀಮಾನ್ ಚನ್ನಬಸಪ್ಪನವರು ಮಾದರಿಯಾಗಿರುತ್ತಾರೆಂದು ಕರ್ನಾಟಕ ಹಿತದೃಷ್ಟಿಯಿಂದ ಅಪೇಕ್ಷೆಪಡುತ್ತೇನೆ. ಇದು ಪಕ್ಷಾತೀತವಾದ ಒಂದು ಸಲಹೆಯೆಂಬುದಾಗಿ ಹಿರಿಯರು ಸ್ವೀಕರಿಸಬೇಕು. ಇಂತಹ ಒಂದು ಕಲುಷಿತ ವಾತಾವರಣದಲ್ಲಿ ಘನತೆ, ಗೌರವದಿಂದ ಇವರನ್ನು ನೋಡಬೇಕೆಂದರೆ ಅದು ಹೇಗೆ ಸಾಧ್ಯವಾಗುತ್ತದೆ ?

ಶ್ರೀ ಎಚ್. ಡಿ. ದೇವೇಗೌಡ.—ಆಗಾಗ್ಗೆ ಅನೇಕ ವಿಚಾರಗಳನ್ನು ಮಂತ್ರಿಗಳ ಬಗ್ಗೆ ಕುರಿತು ಭೂಬಾಣದಲ್ಲಿ ಬರೆಯುತ್ತಾರೆ. ಅವರಲ್ಲಿ ಏನೇನು ಪ್ರತಿದಿನವೂ ನಡೆಯುತ್ತಿದೆಯೆಂಬುದು ಅದನ್ನು ಓದಿದರೆ ಚೆನ್ನಾಗಿ ಗೊತ್ತಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಹಿಂದಿನ ವರ್ಷ ಸಮಗ್ರರಾಜ್ಯಕ್ಕೆ ಸಂಕಟಕಾಲವಾಗಿತ್ತು ಎಂಬುದಾಗಿ ಮುಂದಿನವರ್ಷ ಈ ರಾಷ್ಟ್ರದಲ್ಲಿ ಸುಭಿಕ್ಷಕಾಲ ಪ್ರಾಪ್ತವಾಗಲಿ, ದುರ್ಭಿಕ್ಷದಿಂದ ಸುಭಿಕ್ಷಕ್ಕೆ ಹೋಗಬೇಕಾದಂಥ ಈ ರಾಜ್ಯದ ಬಗ್ಗೆ ಮಾನ್ಯ ರಾಜ್ಯಪಾಲರು ಅವರ ಭಾಷಣದಲ್ಲಿ ಯಾವ ಆಶೆ ಆಕಾಂಕ್ಷೆಗಳ ಅಭಿಪ್ರಾಯವನ್ನೂ ಸೂಚಿಸಿಲ್ಲವೆಂಬುದು ಸ್ಪಷ್ಟವಾಗಿದೆ. ಪ್ರತಿಯೊಂದು ರಾಜ್ಯದಲ್ಲಿಯೂ ಉತ್ಪಾದನೆ ಜಾಸ್ತಿಯಾಗಬೇಕು. ಎಲ್ಲಾ ಕ್ಷೇತ್ರಗಳಲ್ಲಿಯೂ ಉತ್ಪಾದನೆ ಹೆಚ್ಚಾಗಬೇಕಾದುದು ಅವಶ್ಯಕ. ಏಕೆಂದರೆ ನಮ್ಮ ರಾಜ್ಯ ವ್ಯವಸಾಯ ರಾಜ್ಯ. ವ್ಯವಸಾಯ ಕ್ಷೇತ್ರದಲ್ಲಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪಾದನೆ ಜಾಸ್ತಿಯಾಗಬೇಕಾದರೆ ಶಕ್ತಿ ವೃದ್ಧಿಯಾಗಬೇಕು, ವಿದ್ಯುಚ್ಛಕ್ತಿ ಯಥೇಚ್ಛವಾಗಿ ಉತ್ಪಾದನೆಯಾಗಬೇಕು, ಕಾಳೀ ನದಿ ಯೋಜನಾ ಕಾರ್ಯಗಳು ಪ್ರಗತಿಯಾಗಬೇಕು. ಆ ಪ್ರಗತಿ ಕೇವಲ ಇಡೀ ಕರ್ನಾಟಕಕ್ಕೇ ಅಲ್ಲ. ಇಡೀ ಪ್ರಪಂಚಕ್ಕೆ ಆ ಒಂದು ಪ್ರಗತಿಯ ಪ್ರಯೋಜನ ಉಂಟಾಗಬೇಕು. ಇದರ ಬಗ್ಗೆ ಸರ್ಕಾರದವರು ಪುನರಾಲೋಚನೆ ಮಾಡಬೇಕು. ಇಂತಹ ಬೃಹತ್ ಕಾರ್ಯ ಯೋಜನೆಗೆ ಹಣದ ಸವಲತ್ತನ್ನು ಒದಗಿಸಿಕೊಡುತ್ತೇವೆ ಎಂಬುದಾಗಿ ಮಾನ್ಯ ಮುಖ್ಯಮಂತ್ರಿಗಳು ಅವರ ಭಾಷಣದಲ್ಲಿ ಹೇಳಿದ್ದಾರೆಯೇ ವಿನಹ ಇಂತಹ ಯೋಜನೆ ಯಾವಾಗ ಮುಗಿಯುತ್ತದೆ, ಎಷ್ಟು ಕಾಲಾವಧಿ ಬೇಕೆಂಬ ಬಗ್ಗೆ ನಿರ್ದಿಷ್ಟವಾಗಿ ಏನೂ ಹೇಳಲಿಲ್ಲ. ಈ ಒಂದು ಯೋಜನೆ ಮುಗಿಯುವುದಕ್ಕೆ ಕಾಲಾವಧಿಯನ್ನು ಸರ್ಕಾರ ಇನ್ನೂ ನಿಷ್ಕರ್ಷೆ ಮಾಡಲಿಲ್ಲ. ಈ ರಾಜ್ಯದಲ್ಲಿ ಹರಿಯತಕ್ಕ ನದಿಗಳ ನೀರನ್ನು ಸಂಗ್ರಹಣೆಮಾಡಿ ಇರತಕ್ಕ ಕೃಷಿಭೂಮಿಗೆ ಉತ್ಪಾದನೆಯನ್ನು ಹೆಚ್ಚಿಸುವ ಅವಕಾಶದ ಬಗ್ಗೆ ರಾಜ್ಯಪಾಲರು ಅವರ ಭಾಷಣದಲ್ಲಿ ಯಾವ ವಿಷಯವನ್ನೂ ತಿಳಿಸಿಲ್ಲ. ಯಾವ ರಾಜ್ಯವೇ ಆಗಲೀ ಅದು ಸುಭಿಕ್ಷವಾಗಿ ಇರಬೇಕಾದರೆ ಎಲ್ಲ ಕ್ಷೇತ್ರಗಳಲ್ಲಿಯೂ ಉತ್ಪಾದನೆ ಜಾಸ್ತಿ ಆಗಬೇಕೆಂಬುದು ಪ್ರಾಮುಖ್ಯ. ಅದರಲ್ಲಿಯೂ ಬಹು ಮುಖ್ಯವಾಗಿ ವಿದ್ಯುಚ್ಛಕ್ತಿ ಮತ್ತು ನೀರಾವರಿ ಉತ್ಪಾದನೆಗಳಿಂದ ಈ ರಾಜ್ಯ ಹೆಚ್ಚಿಗೆ ಸುಭಿಕ್ಷವಾಗಿರಬೇಕಾಗಿದೆ. ಹಣದ ದುರ್ಬಲತೆ ಇರುವ ಕಾಲದಲ್ಲಿ ಬೃಹತ್ ಕಾರ್ಯ ಯೋಜನೆಗಳನ್ನು ಆದಷ್ಟು ಜಾಗ್ರತೆಯಾಗಿ ಮುಗಿಸುವುದು ಒಂದು ಭಾಗ. ಬಹುಮುಖ್ಯವಾಗಿ ಈ ಪ್ರಮುಖ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆ, ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳ ಯೋಜನೆಗಳು ಬಹಳ ತ್ವರಿತವಾಗಿ ಆಗಬೇಕು. ಆ ಒಂದು ನೀತಿಯನ್ನು ಸರ್ಕಾರದವರು ಅನುಸರಿಸುವುದು ಈಗಿನ ಒಂದು ಸನ್ನಿವೇಶದಲ್ಲಿ ಅತ್ಯಗತ್ಯ. ಪ್ರತಿವರ್ಷವೂ ಹೆಚ್ಚುಹೆಚ್ಚಾಗಿ ನೀರಾವರಿ ಕಾಮಗಾರಿಗಳು ಸಕಾಲದಲ್ಲಿ ಆಗದೆ ಜನಗಳಿಗೆ ಬಹಳ ಧಕ್ಕೆಯಾಗಿದೆ. ಹಿಂದಿನವರ್ಷ ನಾನು ಒಂದು ಸಲಹೆಯನ್ನು ಕೊಟ್ಟಿದ್ದೆನು. ಸಣ್ಣ ನೀರಾವರಿ ಖಾತೆಗೆ ಒಂದು ಅಲಾಯಿದ ಇಂಜನಿಯರುಗಳ ಸಿಬ್ಬಂದಿವರ್ಗ ಇರುವುದು ಅವಶ್ಯಕವೆಂದು ಹೇಳಿದ್ದೆ. ಈ ದಿವಸವೂ ಸಹ ನಾನು ಅದೇ ಮಾತನ್ನು ಹೇಳುತ್ತಿದ್ದೇನೆ. ಬಹು ಮುಖ್ಯವಾಗಿ ಸಣ್ಣ ನೀರಾವರಿ ಖಾತೆಗೆ ಒಂದು ಪ್ರತ್ಯೇಕ ಶಾಖೆ ಅಲಾಯಿದ ಇರಬೇಕೆಂದು ನಾನು ಸೂಚನೆಮಾಡುತ್ತೇನೆ. ನಾನು ಹಿಂದೆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಯಾವ ವ್ಯಕ್ತಿಗೆ, ಯಾವ ಪಕ್ಷಕ್ಕೆ ಈ ರಾಷ್ಟ್ರದಲ್ಲಿ ಘನತೆ ಗೌರವಗಳು ಇರುವುದಿಲ್ಲವೋ ಆ ಪಕ್ಷದ ಮುಂದಾಳು ಆದವನು ಆ ಒಂದು ಪಕ್ಷಕ್ಕೇ ಒಳಗಾಗಬೇಕಾದುದು ಉಚಿತ. ನಾನು ಅಧ್ಯಕ್ಷರ ಮುಖಾಂತರ ಸನ್ಮಾನ್ಯ ದೇವರಾಜ್ ಅರಸ್ ಅವರಿಗೆ, ಮಾನ್ಯ ಮುಖ್ಯಮಂತ್ರಿಯವರಿಗೆ ಬಹಳ ಭಕ್ತಿಯುತವಾಗಿ ಪ್ರಾರ್ಥನೆ ಮಾಡುತ್ತೇನೆ. ನಿಮ್ಮ ಪಕ್ಷದಲ್ಲಿ ಪಕ್ಷದ ಸಂಖ್ಯಾಬಲ ಹೆಚ್ಚಿಗೆ ಇದ್ದರೂ ನಿಮ್ಮ ಮಂತ್ರಿಗಳ ಶಕ್ತಿ ಎಷ್ಟು ಇರಬೇಕೋ ಅಷ್ಟು ಇಲ್ಲ. ಅದು ಏನೇನೂ ಸಾಲದು. ಅದಕ್ಕೆ ಕಾರಣ ನಿಮ್ಮ ಮಂತ್ರಿಮಂಡಲ ಮೂರುಸಾರಿ ಬದಲಾವಣೆಯಾಗಿದೆ. ಪ್ರಾಯಶಃ ಈ ಮಂತ್ರಿಮಂಡಲವೂ ಅತಿ ಶೀಘ್ರದಲ್ಲಿಯೇ ಪುನಃ ಬದಲಾವಣೆಯಾಗುತ್ತದೆಂದು ನಾನು ಇವತ್ತು ಘೋಷಣೆ ಮಾಡಿದರೆ ತಪ್ಪಾಗಲಿಕ್ಕಿಲ್ಲ. ಪಕ್ಷದ ಹಿತರಕ್ಷಣೆ ಮಾಡಲು ಪಕ್ಷದಲ್ಲಿ ಉಚ್ಚಸ್ಥಾನದಲ್ಲಿರತಕ್ಕವರ ಮತ್ತು ಆಡಳಿತದಲ್ಲಿ ಎಲ್ಲ ಕೆಲಸಕಾರ್ಯಗಳೂ ಸತ್ಯಸಂಧತೆಯಿಂದ ನಡೆಯುವಂತೆ ಮಾಡಲು ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿ ಸ್ಥಾನದಲ್ಲಿರತಕ್ಕವರು ತಮ್ಮ ಪಕ್ಷ ಹಾಗೂ ತಮ್ಮ ಆಡಳಿತದಲ್ಲಿ ಏನಾದರೂ ಆಕ್ಷೇಪಣೆ ಅವ್ಯವಹಾರಗಳು ನಡೆದಿರುತ್ತವೆಂದು ಇತರರು ಹೇಳುವುದಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ನಡೆದುಕೊಳ್ಳಬೇಕಾದ್ದು ಅವರ ಆದ್ಯಕರ್ತವ್ಯ. ಆದರೆ ನೆನ್ನೆಯದಿವಸ ಮತ್ತು ಈ ದಿನ ವಿರೋಧಪಕ್ಷದ ನಾಯಕರು ಆಡಳಿತವನ್ನು ಇಂದು ನಡೆಸುತ್ತಿರುವ ಪಕ್ಷದ ಬಗ್ಗೆ ಮತ್ತು ಮಂತ್ರಿಮಂಡಲದ ಬಗ್ಗೆ ಗುರುತರವಾದ ಅನೇಕ ಅಪಾದನೆಗಳನ್ನು ಮಾಡಿದ್ದಾರೆ. ಆದಾಗ್ಯೂ ಮಂತ್ರಿಮಂಡಲ ಅವುಗಳನ್ನು ಬಹಳ ಲಘುವಾಗಿ ನೋಡುತ್ತಿದೆ. ಶ್ರೀಮಾನ್ ಕೆ. ಎಚ್. ಪಾಟೀಲರ ಬಗ್ಗೆ ಮಾಡಿದ ಅಪಾದನೆಗಳೇನಾದವು ? ಮೊನ್ನೆತಾನೆ ಮೈಸೂರಿನಲ್ಲಿ ನಡೆದ ಒಂದು ಸಭೆಯಲ್ಲಿ ಬಹಿರಂಗವಾಗಿ ಶ್ರೀ ದೇವರಾಜ್ ಅರಸರ ಮಂತ್ರಿಮಂಡಲದ ಬಗ್ಗೆ ಅಪಾದನೆಗಳನ್ನು ಮಾಡುತ್ತ " ಇದು ಲಂಚಕೋರರ ಆಡಳಿತದ ಮಂತ್ರಿಮಂಡಲವೆಂಬುದಾಗಿ" ನೇರವಾಗಿ

ಆಪಾದನೆಗಳನ್ನು ಮಾಡಿದ್ದಾರೆ. ಅಷ್ಟೇ ಅಲ್ಲ ಇಂಥ ಲಂಚಕೋರ ಮಂತ್ರಿಮಂಡಲ ಬಹಳ ದಿನ ಉಳಿಯಲಾರದು, ಅದು ಅತಿವೇಗ ಅಧಿಕಾರದಿಂದ ಕೆಳಗಿಳಿಯಬೇಕಾಗುತ್ತದೆಂದು ಹೇಳಿದ್ದಾರೆ ಅಲ್ಲಿ ಇಂಥ ಆಪಾದನೆಗಳನ್ನು ಕುರಿತು ಭಾಷಣಗಳು ಅನೇಕ ನಡೆದವು. ಮಾನ್ಯ ದೇವೇಗೌಡರ ಹೊರಿಸಿದಂಥ ಆಪಾದನೆಗಳನ್ನು ವಿಮರ್ಶೆ ಮಾಡುವುದಕ್ಕೆ ಪ್ರಯತ್ನಮಾಡುವುದು ಒತ್ತಟ್ಟಿಗಿರಲಿ ಅಂಥ ಆಪಾದನೆಗಳನ್ನು ಕೇಳಿದ ಕೂಡಲೇ ಅಧಿಕಾರ ಸೂತ್ರಗಳನ್ನು ಹಿಡಿದಿರತಕ್ಕ ಜನರು ಮತ್ತು ಪಕ್ಷ ತಾವಾಗೇ ಮುಂದೆ ಬಂದು ತಮ್ಮ ಸ್ವಚ್ಛತೆಯ ಬಗ್ಗೆ ತಮ್ಮ ಪ್ರಾಮಾಣಿಕತೆಯ ಬಗ್ಗೆ ಉಚ್ಚ ಸ್ಥಾನದಲ್ಲಿರತಕ್ಕವರು ಸ್ವಯಂಪ್ರೇರಿತರಾಗಿ ಆಪಾದನೆಗಳೇನು ನಿಜವೇ ಅಲ್ಲವೇ ಎಂಬುದರ ಬಗ್ಗೆ ಬೇಂದು ಉಚ್ಚಸಮಿತಿಯನ್ನು ನೇಮಕಮಾಡಿ ಅವನ್ನು ವಿಮರ್ಶೆಮಾಡುವುದಕ್ಕೆ ಪ್ರಯತ್ನ ಮಾಡ ಬೇಕಾಗಿತ್ತು. ಆದರೆ ಹಾಗೆಮಾಡದೆ ತಮ್ಮಲ್ಲಿ ಪಕ್ಷದ ಬಲ ತಮಗಿದೆ ಎಂದು ದೊಡ್ಡದಾಗಿ ಕೂಗಿ ನನ್ನನ್ನು ಸುಮ್ಮನಿರಿಸುವುದಕ್ಕೆ ಇನ್ನಿಗೆಂದೂ ಸಾಧ್ಯವಿಲ್ಲ. ರಾಜ್ಯದಲ್ಲಿರತಕ್ಕ ಕೋಟ್ಯಾನು ಕೋಟಿ ಅನ್ನಕ್ಕೆ ಬಟ್ಟೆಗಿಲ್ಲದ ಇರತಕ್ಕ ಜನತೆ ಇಂದು ಆಡಳಿತ ನೀತಿ ನ್ಯಾಯಗಳನ್ನು ಪರಿಪಾಲಿಸಿ ಕೊಂಡು ಆಡಳಿತವನ್ನು ನಡೆಸುತ್ತಿದೆಯೋ ಇಲ್ಲವೇ ಎಂಬುದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದೆ. ಆದರೆ ನಮ್ಮಲ್ಲಿರತಕ್ಕ ಮೂರು ಕೋಟಿ ಜನತೆಯಲ್ಲಿ ನಿಮಗೆಲ್ಲಾ ತಿಳಿದಂತೆ ಎಲ್ಲರೂ ರಾಜಕಾರಣಿ ಗಳಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತಾಪಿಜನರೂ ಕಾರ್ಮಿಕರೂ ಅನ್ನ ಬಟ್ಟೆಗಳಿಲ್ಲದೆ ಬಳಲುತ್ತಿದ್ದಾರೆ. ಇಂಥ ಅಧಿಕಾರ ನಡೆಯುತ್ತದೆ ಇಲ್ಲಿ. ಈ ದಿವಸ ಇಲ್ಲಿ ಆಡಳಿತ ನಡೆಸುತ್ತಿರುವ ರಾಜಕಾರಣಿಗಳು ಆಡತಕ್ಕ ಪ್ರತಿಯೊಂದು ಮಾತನ್ನೂ ಮತ್ತು ಅವರಿಡತಕ್ಕ ಪ್ರತಿ ಒಂದು ಹೆಜ್ಜೆ ಯನ್ನೂ ಜನತೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದಾರೆ. ಆದುದರಿಂದ ಜನತೆ ಸದ್ಯದಲ್ಲಿ ನಮ್ಮನ್ನೂ ನಿಮ್ಮನ್ನೂ ಸುಮ್ಮನೆ ಬಿಡುವುದಿಲ್ಲ. ಅವರು ರೊಚ್ಚಿಗೆದ್ದರೆ ಪ್ರಮಾದಕ್ಕೆ ಬರುತ್ತದೆ. ಜನತೆ ನಮ್ಮ ಪಕ್ಷಕ್ಕೆ ಸಂಖ್ಯಾಬಲ ಕಡಮೆ ಇದ್ದರೂ ನೀವು ನಡೆಸುತ್ತಿರುವ ಅವ್ಯವಹಾರ ಆಡಳಿತದ ಬಗ್ಗೆ ಸ್ಪಷ್ಟವಾಗಿ ಸರ್ಕಾರಕ್ಕೆ ತಿಳಿಸಬೇಕೆಂದೂ ಅಕ್ರಮ ಆಡಳಿತವನ್ನು ಧಿಕ್ಕರಿಸಿ ಅದನ್ನು ತಡೆಗಟ್ಟ ಬೇಕೆಂದೂ ಹೇಳುತ್ತಿದ್ದಾರೆ ಆದುದರಿಂದ ನಾವು ಸರ್ಕಾರಕ್ಕೆ ಕೊಡತಕ್ಕ ಉತ್ತಮ ಸಲಹೆ ಗಳನ್ನೂ ರಚನಾತ್ಮಕ ಸಲಹೆಗಳನ್ನೂ ಸರ್ಕಾರದವರು ಕಿವಿಗೊಟ್ಟು ಕೇಳಿ ಅದಕ್ಕೆ ಅನುಗುಣವಾಗಿ ನಡೆಯಬೇಕಾದ್ದು ಅವರ ಹಿತಕ್ಕೆ ಅತ್ಯವಶ್ಯವಾದದ್ದು. ಯಾವ ಮನುಷ್ಯನಿಗಾಗಲಿ ಮುಖ್ಯವಾಗಿ ಮೂರು ಗುಣಗಳು ಚೆನ್ನಾಗಿರಬೇಕು. ನಾನು ಇಲ್ಲಿ ಇಂತಿಂಥವರಲ್ಲಿ ಇಂತಿಂಥ ದೋಷವಿದೆ ಎಂದು ಬೆರಳುಮಾಡಿ ತೋರಿಸಬೇಕಾದ್ದು ಅನಗತ್ಯ. ಆಡಳಿತ ಸೂತ್ರವನ್ನು ಹಿಡಿದಿರತಕ್ಕ ಜನರೇ ನಿದ್ದೀರಿ ನೀವೇ ನಿಮ್ಮ ಆತ್ಮವನ್ನು ಮುಟ್ಟಿ ನೋಡಿಕೊಳ್ಳಿ ಆ ನಿಮ್ಮ ಆತ್ಮವನ್ನು ನೀವೇ ಶೋಧನೆ ಮಾಡಿಕೊಳ್ಳಿ—ಆಗ ನಿಮಗೇ ನಿಮ್ಮಲ್ಲಿರತಕ್ಕ ದೋಷಗಳು ಅರಿವಾಗುತ್ತವೆ. ಈ ದಿವಸ ಏನಾಗಿದೆ ಎಂದರೆ ಸತ್ಯವಂತ ರಾಜಕಾರಣಿ ಸತ್ಯವಂತ ಅಧಿಕಾರಿಗಳೆಲ್ಲಾ ಮೂಲೆಗೆ ಕುಳಿತಿದ್ದಾರೆ. ಅಸತ್ಯ ವಂತರೇ ಎಲ್ಲೆಲ್ಲೂ ರಾಜಕೀಯ ದಲ್ಲೂ—ಆಡಳಿತದಲ್ಲೂ —ಅಧಿಕಾರಿ ವೃಂದದಲ್ಲೂ ತಾಂಡವಾಡು ತ್ತಿದ್ದಾರೆ. ಆದುದರಿಂದಲೇ ರಾಜ್ಯದಲ್ಲಿ ಆಡಳಿತದಲ್ಲಿ ದುರ್ನೀತಿ ದುರಾಡಳಿತ ತಾಂಡವಾಡುತ್ತಿದೆ. ಅಧಿಕಾರ ಸೂತ್ರಗಳನ್ನು ಹಿಡಿದಿರತಕ್ಕ ಜನರಲ್ಲೂ ಮತ್ತು ಆಡಳಿತವನ್ನು ನಡೆಸುತ್ತಿರುವ ಅಧಿಕಾರಿ ವರ್ಗದಲ್ಲೂ ಎರಡೆರಡು ವರ್ಗಗಳಿವೆ. ರಾಜಕಾರಣಿಗಳಲ್ಲಿ ಸತ್ಯವಂತರ ಗುಂಪು ಒಂದು, ಅಸತ್ಯ ವಂತರ ಗುಂಪು ಇನ್ನೊಂದು. ಅಧಿಕಾರಿಗಳಲ್ಲಿ ಒಂದು ಭ್ರಷ್ಟಾಚಾರದ್ದು, ಇನ್ನೊಂದು ಶ್ರೇಷ್ಠ ತರಗತಿಯದು. ನಾನಿಲ್ಲಿ ಆಡಳಿತಪಕ್ಷವನ್ನು ವೃಥಾ ಟೀಕೆಮಾಡಿದರೆ ಅದರಿಂದೇನೂ ನಾವು ಲಾಭ ಹೊಂದುವುದಿಲ್ಲ. ಆಡಳಿತ ಸೂತ್ರವನ್ನು ಹಿಡಿದಿರತಕ್ಕವರೆಲ್ಲಾ ನನಗೆ ಮತ್ತು ರಾಜ್ಯದಲ್ಲಿರತಕ್ಕ ಪ್ರಜೆಗಳಿಗೆ ಹಿರಿಯಣ್ಣಗಳು ಇದ್ದಹಾಗೆ.

* * *

ಶ್ರೀ ಎಸ್. ಚಂದ್ರಶೇಖರ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುತ್ತಿರುವ ಮಾತುಗಳು...

MR. DEPUTY SPEAKER.—I am coming to that. The last sentence of the hon. Member is highly objectionable and hence it stands expunged from the records.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಸಮಾಜದಲ್ಲಿ ಅಧಿಕಾರದಲ್ಲಿರತಕ್ಕ ಜನರು ವಯಸ್ಸಿನಲ್ಲಿ ಚಿಕ್ಕವರಾಗಿದ್ದರೂ ಅವರನ್ನು ಸಮಾಜ ಅಣ್ಣಂದಿರಂತೇ ಭಾವಿಸುತ್ತದೆ. ಆದರೆ ಆಡಳಿತ ವನ್ನು ಹಿಡಿದಿರತಕ್ಕ ಜನತೆ ಸಾಮಾನ್ಯ ಜನತೆಯ ಆಶೆ ಆಕಾಂಕ್ಷೆಗಳನ್ನು ಅಲ್ಲಗಳೆದು ತಮ್ಮ ಕೆಲವು

Matter expeunged as ordered by the chair.

ಸ್ವೇಚ್ಛಾ ಇಚ್ಛೆಗಳಿಗೆ ಅನುಗುಣವಾಗಿ ಕೆಲಸ ನಡೆಸುತ್ತ ತಮ್ಮ ಕರ್ತವ್ಯದಲ್ಲಿ ಬಾಹಿರರಾಗಿದ್ದಾರೆ. ಇವರು ಮಾಡಬಾರದ್ದನ್ನು ಮಾಡುವುದಕ್ಕೆ ಹೊರಟಿದ್ದಾರೆ. ಹಾಗೆ ಅವರು ಮಾಡಬಾರದ್ದನ್ನು ನೋಡಿ ನಾವು ಇಲ್ಲಿ ಕುಳಿತು ನರ್ತನ ಮಾಡುವುದಕ್ಕೆ ನಾವೇನು ಪರಕೀಯರಲ್ಲ. ದೇಶದಲ್ಲಿ ಜನತೆ ಅನ್ನಬಟ್ಟೆಗೆ ಗತಿ ಇಲ್ಲದೆ ನರಳುತ್ತಿದ್ದಾಗ ಅವರಿಗೆ ಅತ್ಯಗತ್ಯವಾಗಿ ಒದಗಿಸಬೇಕಾಗಿದ್ದ ಸೌಲಭ್ಯಗಳನ್ನು ಒದಗಿಸದೆ ಆಡಳಿತವನ್ನು ನಡೆಸುತ್ತಿರುವ ಅಣ್ಣಂದಿರಿಗೆ ನಾನು ಬೇರೆ ಪದಗಳನ್ನು ಉಪಯೋಗ ಮಾಡಿದರೆ ಅವರಿಗೆ ಕರುಣೆಬಾರದಿರಬಹುದು. ಆದರೆ....

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಸಚಿವರು).—ತಾವು ಈಗ ಹೇಳುತ್ತಿರುವ ಮಾತುಗಳು ಎಲ್ಲರಿಗೂ ಎಲ್ಲ ಕಾಲಕ್ಕೂ ಅನ್ವಯವಾಗತಕ್ಕ ಮಾತುಗಳು. ಸರ್ಕಾರವನ್ನು ನಡೆಸತಕ್ಕ ಜನರು ಸ್ವಚ್ಛರಾಗಿರಬೇಕು. ಅವರು ಪ್ರಜೋಪಯುಕ್ತ ಕಾರ್ಯಗಳನ್ನು ನಡೆಸುತ್ತಿರಬೇಕು—ಎಂಬ ಮಾತುಗಳನ್ನು ಎಲ್ಲರೂ ಒಪ್ಪಲೇಬೇಕು. ಇಂದು ಆಡಳಿತವನ್ನು ನಡೆಸುತ್ತಿರುವ ಪಕ್ಷ ಏನಾದರೂ ಅಂಥ ಅನೀತಿಕಾರ್ಯಗಳನ್ನು ಮಾಡಿದ್ದರೆ ಅವುಗಳನ್ನು ಸಭೆಯಲ್ಲಿ ಬಹಿರಂಗವಾಗಿ ಹೇಳಿ ಅವುಗಳನ್ನು ತಿದ್ದುವುದಕ್ಕೆ ಪ್ರಯತ್ನಮಾಡಿ. ಇಲ್ಲವೇ ತಾವು ಪ್ರತ್ಯೇಕವಾಗಿ ಮಂತ್ರಿಗಳನ್ನೇ ಕಂಡು ಅವರಲ್ಲಿ ಮಾತನಾಡಿ ತಪ್ಪನ್ನು ತಿದ್ದಲು ಪ್ರಯತ್ನಮಾಡಿ, ಬಸವಣ್ಣನವರೂ ಕೂಡ ಅನೇಕ ಉತ್ತಮವಾದ ನುಡಿಗಳನ್ನಾಡಿದ್ದಾರೆ. ಅವು ಎಲ್ಲ ಕಾಲಕ್ಕೂ ಎಲ್ಲ ಜನರಿಗೂ ಅನ್ವಯವಾಗತಕ್ಕವುಗಳು. ತಾವು ಹೇಳುತ್ತಿರುವಂತೆ ಕೆಟ್ಟವರಿಗೆ ಶಿಕ್ಷೆಯಾಗಬೇಕು .....

ಶ್ರೀ ಎಚ್. ಡಿ. ದೇವೇಗೌಡ.—ಎಲ್ಲಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪರಲೋಕದಲ್ಲಿ. ಆದರೆ ನಾನೂ ಕೂಡ ಮಾನ್ಯ ಸದಸ್ಯರು ಹೇಳುತ್ತಿರುವುದಕ್ಕೆ ದನಿಗೂಡಿಸುತ್ತೇನೆ...

MR. DEPUTY SPEAKER.—I was actually about to request the hon. member to make specific charges and I am here to give him all facilities. Last year also I had told the hon. member that he should have specific charges. I would very much welcome specific charges from the hon. Member.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಪಿತೃಸಮಾನರಾದ ಶ್ರೀಮಾನ್ ಚನ್ನಬಸಪ್ಪನವರು ದೇವತಾ ಸಮಾನರಾದ ತಾವು ಇರುವಾಗ ತಮ್ಮ ಮೂಲಕ ಮತ್ತು ವೈಯುಕ್ತಿಕವಾಗಿ ಅವರು ಕೇಳಿದ್ದನ್ನು ನಾನು ತೀವ್ರವಾಗಿ ಗಮನಿಸಿದ್ದೇನೆ ಎಂದು ಹೇಳಿದರು. ಲಕ್ಷೋಪಲಕ್ಷ ಪಟ್ಟಿಯನ್ನು ಅದರ ಬಗ್ಗೆ ಕೊಡಬಹುದು. ಅಪ್ರಾಮಾಣಿಕ ಅಧಿಕಾರಿಗಳು ಗಮನಕ್ಕೆ ಬಂದ ತಣ ಮಾನ್ಯ ಸಚಿವರು ಅವರನ್ನು ಸಸ್ಪೆಂಡ್ ಮಾಡಿದರು. ಆದರೆ ಅವರ ವಿಚಾರಣೆ ಮಾತ್ರ ಇನ್ನೂ ಮಾಡಲಿಲ್ಲ. ಅದು ನಾನು ಸತ್ತಮೇಲೆ ಅಥವ ನನ್ನ ಮಕ್ಕಳು ಸತ್ತಮೇಲೆ ಆಗುವುದೋ ಏನೋ. ದಕ್ಷತೆಗೆ ಮತ್ತು ಪ್ರಾಮಾಣಿಕತೆಗೆ ಹೆಸರಾದ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ಏಕೆ ಈ ವಿಚಾರದಲ್ಲಿ ನಿಧಾನಮಾಡುತ್ತಿದ್ದಾರೆ ? ಇದರಿಂದ ಸಸ್ಪೆಂಡಾದ ಅಧಿಕಾರಿಗಳ ಮನೆಯವರು ನರಳುತ್ತಿದ್ದಾರೆ. ಇದರಿಂದ ಈ ಕೆಲಸದಲ್ಲಿ ಅವರಿಗೆಷ್ಟು ಅಡ್ಮಿಆತಂಕವಿದೆಯೆಂಬುದು ಸ್ಪಷ್ಟವಾಗುವುದು. ಈ ವಿಚಾರವನ್ನು ಮಾನ್ಯ ಮಂತ್ರಿಗಳು ಅವಲೋಕಿಸಿ ಸರಿಯಾದ ಉತ್ತರ ಹೇಳಬೇಕು, ಇದೊಂದು. ಎರಡನೆಯದು ಮಾನ್ಯ ಚನ್ನಬಸಪ್ಪನವರು ಅಧಿಕಾರ ವಹಿಸಿಕೊಂಡು ಪ್ರಥಮದಲ್ಲಿ ಕೆಲಸ ಇಲ್ಲಿಯವರೆಗೆ ಇತ್ಯರ್ಥವಾಗಿಲ್ಲ, ನ್ಯಾಯ ವಿಳಂಬ ಮಹಾ ಅಪರಾಧ ಎಂದು ಹೇಳುವರು. ಅದಕ್ಕೆ ಇದೊಂದು ಸಾಕ್ಷಿ. ಇಂಥ ಉದಾಹರಣೆಗಳು ಅನೇಕ ಇವೆ. ಇದೊಂದನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಿ ಇನ್ನೂ ಇಂಥ ಸಂದರ್ಭಗಳ ಪಟ್ಟಿಯನ್ನು ನನ್ನ ಅಣ್ಣಂದಿರ ಸಮಾನರಾದ ಶ್ರೀ ದೇವೇಗೌಡರು ಸಭೆಗೆ ತಿಳಿಸುವುದಾಗಿ ಹೇಳಿರುವುದರಿಂದ ಆ ಬಗ್ಗೆ ನಾನು ಪ್ರಯತ್ನಪಡದೆ ಮುಂದಕ್ಕೆ ಹೋಗುತ್ತೇನೆ.

ಈ ರಾಜ್ಯದಲ್ಲಿ ಹೆಣ್ಣುಮಕ್ಕಳ ಯೋಗಕ್ಷೇಮಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಬೇರೊಬ್ಬ ಮಂತ್ರಿಗಳನ್ನೇ ನೇಮಿಸಿದ್ದಾರೆ, ಇದಕ್ಕೆ ಸಂಬಂಧಪಟ್ಟ ಖಾತೆಯನ್ನು 7 ಮಕ್ಕಳ ತಾಯಿಯವರಿಗೆ ವಹಿಸಿದ್ದಾರೆ. 7 ಮಕ್ಕಳಿರುವುದು ಇದಕ್ಕೊಂದು ಅರ್ಹತೆ. ಹಿಂದೆ ಈ ರಾಜ್ಯದಲ್ಲಿ ಇದುವರೆಗೆ ಹೆಣ್ಣುಮಕ್ಕಳ ಯೋಗಕ್ಷೇಮಕ್ಕೆ ಯಾರೂ ಗಮನ ಕೊಟ್ಟಿರಲಿಲ್ಲವೇ ? ಇಂದು ಆ ಮಂತ್ರಿಗಳು ಹಣ ಕೊಟ್ಟರೆ ಎಲ್ಲವನ್ನೂ ಮಾಡುವುದಾಗಿ ಒಂದು ಸಭೆಯಲ್ಲಿ ಹೇಳಿದ್ದಾರೆ. ಅಲ್ಲದೆ ಕರ್ನಾಟಕದ ಗಂಡಸರು ತಮ್ಮ ಹೆಂಡತಿ ಮಕ್ಕಳನ್ನು ಚೆನ್ನಾಗಿ ಸಾಕಬೇಕು ಹಾಗೆ ಮಾಡಿದರೆ ತಮ್ಮ ಮೇಲಿರುವ

ಭಾರ ಕಡಿಮೆಯಾಗುವುದು ಎಂದು ಗಂಡಸರಿಗೆ ಆ ಮಂತ್ರಿಗಳು ಕರೆಕೊಟ್ಟಿದ್ದಾರೆ. ಈ ಅಮ್ಮಾವರು ಬರುವುದಕ್ಕೆ ಮೊದಲು ಯಾರ ಕೈಗೆ ನಮ್ಮ ಹೆಂಡತಿ ಮಕ್ಕಳ ರಕ್ಷಣೆ ವಹಿಸಿದ್ದೆವು ? ನಾವು ನಮ್ಮವರನ್ನು ಇದುವರೆಗೆ ಸಾಕುತ್ತಿರಲಿಲ್ಲವೇ ? ಇದುವರೆಗೆ ಸರಕಾರದ ಮೈಲ್ಯಾಚಾರಣೆಗೆ ಯಾವ ಮಕ್ಕಳೂ ಒಳಪಟ್ಟಿರಲಿಲ್ಲ. ಇನ್ನು ಯುವಕರ ಖಾತೆಯನ್ನು ನಮ್ಮ ಮಿತ್ರರಾದ ಶ್ರೀ ಗುಂಡೂರಾಯರಿಗೆ ವಹಿಸಿದ್ದಾರೆ. ಯುವಕ ಯುವತಿಯರಿಗಾಗಿ ಒಂದು ಖಾತೆ ಮಾಡಿದ್ದಾರೆ, ಹೀಗೆ ನಾನಾ ಖಾತೆಗಳನ್ನು ಸೃಷ್ಟಿಸಿದ್ದಾರೆ. ಅವರು ಕರ್ನಾಟಕದ ಯುವಕ ಯುವತಿಯರಲ್ಲಿ ಸದ್ಗುಣಗಳನ್ನು ಇಂಜೆಕ್ಟ್ ಮಾಡಿ ತುಂಬುವರು. ಅವರಲ್ಲಿ ರಾಷ್ಟ್ರಪ್ರೇಮವುಂಟಾಗುವಂತೆ ಮಾಡುವರು. ಇಂದು ಕರಿಯಪ್ಪನವರು ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಈಗಿನಂಥ ಶಿಕ್ಷಣ, ಬೋಧೆ ಯಾವ ಕಾಲದಲ್ಲೂ ಇರಲಿಲ್ಲ. ಈಗಿನ ಹಂಚಿಕೆಯಿಂದ ಒಳ್ಳೆಯ ಪರಿಣಾಮ ಬಹುಶ: ಆಗಬಹುದೋ ಏನೋ. ಇಂಥ ಮಹಾವ್ಯಕ್ತಿಗೆ ಈ ಖಾತೆಯನ್ನು ವಹಿಸಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ನಗುಪಾಟಲಿಗೆ ಗುರಿಯಾಗದಂತೆ ರಾಜ್ಯಭಾರ ನಡೆದರೆ ಸಾಕಾಗಿದೆ. ಈಗ ಮಾಡಿರುವುದೆಲ್ಲಾ ಸರಿಯೋ ಎಂದು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಆತ್ಮ ಪರಿಶೋಧನೆ ಮಾಡಿಕೊಳ್ಳಬೇಕು, ಪರಮಾತ್ಮನ ಪ್ರಚೋದನೆ ಪ್ರಕಾರ ಇದೆಲ್ಲಾ ಆಗಿರಬಹುದು. ಆಡಳಿತ ಪಕ್ಷದಲ್ಲಿರುವ 165 ಜನರೆಲ್ಲರೂ ಸಹ ನಮ್ಮ ಅಣ್ಣಂದಿರೇ. ನಾನು ಅವರ ತಮ್ಮ, ವಿರೋಧ ಪಕ್ಷದವರು ಅವರ ತಮ್ಮಂದಿರು. ಇನ್ನಾದರೂ ಮಾಡುವ ಅಪರಾಧಗಳನ್ನು ಮುಚ್ಚಿಕೊಳ್ಳುವುದನ್ನು ನಿಲ್ಲಿಸಬೇಕೆಂದೂ ಪ್ರಾರ್ಥನೆ ಮಾಡುತ್ತೇನೆ,

ಈಗ ರಾಜ್ಯದಲ್ಲಿ ಹೊಸ ಕಾರ್ಖಾನೆಗಳು ಸ್ಥಾಪನೆಯಾಗಿವೆ, ಬೆಂಗಳೂರಿನ ಹೊರಗೆ ಇನ್ನು ಮುಂದೆ ಕಾರ್ಖಾನೆಗಳನ್ನು ತೆರೆಯಲು ಅವಕಾಶ ಮಾಡುವುದಾಗಿ ಹೇಳಿದ್ದಾರೆ. ಗ್ರಾಮಾಂತರಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು, ವಿಶ್ವವಿದ್ಯಾನಿಲಯಗಳನ್ನು ತೆರೆಯಬೇಕು, ನವನಾಗರೀಕ ಪಟ್ಟಣದಿಂದ ಯುವಕರನ್ನು ದೂರಮಾಡುವುದು ಉತ್ತಮ ಎಂದು ಸಲಹೆಮಾಡುತ್ತೇನೆ.

ಕೊನೆಯದಾಗಿ ಹೇಳುವುದು ಸುಖೀರಾಜ್ಯ ಸ್ಥಾಪಿಸುತ್ತೇವೆಂದು ಬಾಯಲ್ಲಿ ಹೇಳಿದರೆ ಸಾಲದು ಜನತೆಗೆ ಪ್ರಾಮಾಣಿಕವಾದ ಮತ್ತು ಉತ್ಕೃಷ್ಟವಾದ ಆಡಳಿತ ನೀಡಬೇಕು ಎಂದು ಎಚ್ಚರಿಸುತ್ತೇನೆ. ಸ್ವಯಂಪ್ರೇರಿತರಾಗಿ ಮಂತ್ರಿಮಂಡಲದವರು ಅಗ್ನಿಪರೀಕ್ಷೆಗೆ ಒಳಗಾಗಿ ಜನತೆಗೆ ಸಮಾಧಾನ ತಂದುಕೊಡಬೇಕು ಎಂದು ಎಚ್ಚರಿಸುತ್ತೇನೆ. ಪಿತೃಸಮಾನರಾದ ಚನ್ನಬಸಪ್ಪನವರು ಮಾತ್ತಿತರ ಮಂತ್ರಿಗಳು ರಾಜ್ಯದಲ್ಲಿ ಎಲ್ಲರಿಗೂ ಅನ್ನ ಕೊಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದಾರೆ. ಅನ್ನ ಕೊಡುವುದು ಬೇಡ, ಗಾಳಿ ಬೆಳಕು ಜನರು ಸೇವಿಸಲು ಅವಕಾಶ ಕೊಟ್ಟರೆ ಸಾಕಾಗಿದೆ, ಅಂಥ ಪರಿಸ್ಥಿತಿಯಲ್ಲಿದೆ. ಈ ಸಂಕೋಲೆಯಿಂದ ಜನತೆಯನ್ನು ಬಿಡಿಸಬೇಕು. ಸ್ವಯಂಪ್ರೇರಿತರಾಗಿ ಸೀತೆಯು ಅಗ್ನಿಪರೀಕ್ಷೆಗೆ ಹೋದಂತೆ ಒಂದು ಸಾರಿ ಅಗ್ನಿಪರೀಕ್ಷೆಗೆ ಮಂತ್ರಿಗಳು ಒಳಪಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

†ಶ್ರೀ ಬಿ. ಜಿ. ಬಣಕಾರ (ಹಿರೇಕೆರೂರು).—ಅಧ್ಯಕ್ಷರೇ, ಹತ್ತರಂದು ರಾಜ್ಯಪಾಲರು ಮಾಡಿದ ಭಾಷಣವನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡುತ್ತೇನೆ. ನಮ್ಮ ರಾಜ್ಯದಲ್ಲಿ 3 ಕೋಟಿ ಜನರ ಕಲ್ಯಾಣ ಹಾಗೂ ಅಭಿವೃದ್ಧಿಯಾಗುವುದಕ್ಕೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಸೂಚಿಸಿ ಕೆಲವು ಮಾತುಗಳನ್ನು ಹೇಳಿದ್ದಾರೆ. ನಿಜವಾಗಿಯೂ ನಾವು ಅವರು ಹೇಳಿದಂತೆ ಕಾರ್ಯಗತ ಮಾಡಿದರೆ ಕಾರ್ಯಕ್ರಮಗಳನ್ನು ರೂಪಿಸಿ ಪಾರಿಗೆ ತಂದರೆ ಅವುಗಳ ಸಫಲತೆ ಪ್ರತಿಯೊಬ್ಬರಿಗೂ ದೊರೆತರೆ ನಿಜವಾಗಿಯೂ ಕೂಡ ರಾಜ್ಯದಲ್ಲಿ ಹೇಳುವಂತೆ ಸರಕಾರದ ಕೆಲಸ ದೇವರ ಕೆಲಸವಾಗಿ ಕಾಮಧೇನು ಕಲ್ಪವೃಕ್ಷವಾಗಿ ಪರಿಣಮಿಸಬಹುದು ಎಂಬ ಭಾವನೆ ಇದೆ. ಆದರೆ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಕೈಗೊಂಡಿರುವ ಅನೇಕ ಯೋಜನೆಗಳಿಂದ ಜನತೆಗೆ ಸಾಕಷ್ಟು ಪ್ರಯೋಜನ ದೊರೆತಿಲ್ಲ.

11-30 A.M.

ಸರ್ಕಾರದ ಕೆಲಸಗಳು ಕುಂಠಿತವಾಗಬೇಕಾದರೆ, ಅಧಿಕಾರಿಗಳಲ್ಲಿರುವ ದೌರ್ಬಲ್ಯ ಭ್ರಷ್ಟಾಚಾರ ಕಾರಣವೇ ಹೊರತು ಅದಕ್ಕೆ ಸರ್ಕಾರ ನೇರವಾದ ಹೊಣೆಯಲ್ಲ. ಇಂಥ ಒಂದು ಸಂದರ್ಭದಲ್ಲಿ ಅಧಿಕಾರಿಗಳ ಮೇಲೆ ಹಿಡಿತ ಇಡದೇಹೋದರೆ ನಿಜವಾಗಿಯೂ ನಮಗೆ ಕೆಟ್ಟ ಹೆಸರು ಬರುವುದು ತಪ್ಪುವುದಿಲ್ಲ ಎನ್ನುವ ಮಾತನ್ನು ಒತ್ತಾಯವಾಗಿ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಜಾಗ ಇಲ್ಲದ ವ್ಯಕ್ತಿಗೆ ಜಾಗವನ್ನು ಪುಕ್ಕಟೆಯಾಗಿ ಕೊಡುತ್ತೇವೆ, ಮತ್ತು ಬಡವರಿಗೆ ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಮನೆಯನ್ನು ಕೊಡಬೇಕು ಎನ್ನುವ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಈ ಯೋಜನೆ ಫಲಕಾರಿ

ಯಾಗಲೇಬೇಕು, ಇಲ್ಲವೇಹೋದರೆ ಇದಕ್ಕೆ ಅಧಿಕಾರಿಗಳ ಹೈಗೈ ಕಾರಣ ಪ್ರತಿಯೊಂದು ಗ್ರಾಮದಲ್ಲಿಯೂ ಆಕ್ವಿಜಿಷನ್ ಸಲುವಾಗಿ ಅನೇಕ ಪ್ರಕರಣಗಳನ್ನು ಕಳುಹಿಸಿದರೂ ಅವನ್ನು ಐ.ಎ.ಎಸ್. ಅಧಿಕಾರಿಗಳು ಸರಿಯಾಗಿ ಕಾರ್ಯಗತ ಮಾಡಿಲ್ಲ. ಬಿ.ಡಿ.ಓ.ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹೈಗೈ ಮಾಡುವ ಬಿ.ಡಿ.ಓ.ಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಒಂದು ವೇಳೆ ಇವರನ್ನು ವರ್ಗ ಮಾಡಿದರೆ, 10 ಮಂದಿ ರಾಜಕಾರಣಿಗಳನ್ನು ಹಿಡಿದುಕೊಂಡು ಬಂದು, ವರ್ಗ ಆಗಿರುವುದನ್ನು ಕ್ಯಾನ್ಸಲ್ ಮಾಡಿಕೊಳ್ಳುತ್ತಾರೆ ಮತ್ತು ಅದೇ ಜಾಗದಲ್ಲಿ ಉಳಿಯುತ್ತಾರೆ. ಇವರು ಮಾಡಿದಂಥ ತಪ್ಪುಗಳನ್ನು ಜಿಲ್ಲಾಧಿಕಾರಿಗಳು ಷೀಲ್ಡ್ ಮಾಡುತ್ತಾರೆ, ಅಸಿಸ್ಟೆಂಟ್ ಕಮೀಷನರ್‌ಗಳು ಷೀಲ್ಡ್ ಮಾಡುತ್ತಾರೆ, ಎನ್‌ಕ್ವಯರಿ ಅಧಿಕಾರಿಗಳು ಷೀಲ್ಡ್ ಮಾಡುತ್ತಾರೆ. ಇವರ ಮೇಲೆ ದೂರುಗಳನ್ನು ಪಂಚಾಯತಿ ಚೇರ್ಮನ್‌ರೇ ಹೇಳಲಿ, ತಾಲ್ಲೂಕು ಬೋರ್ಡ್ ಅಧ್ಯಕ್ಷರೇ ಹೇಳಲಿ, ಯಾರೇ ಹೇಳಲಿ ಇವರಿಗೆ ಅಧಿಕಾರಿಗಳು ಷೀಲ್ಡ್ ಮಾಡುತ್ತಾರೆ. ಇಲ್ಲಿ ದೋಷ ಇದೆ, ಯಾವ ಅಧಿಕಾರಿಗಳಿಂದ ಕೆಲಸವಾಗುತ್ತಿಲ್ಲ, ಅವರ ಮೇಲೆ ದಾಕ್ಷಿಣ್ಯವಿಲ್ಲದೆ ಕ್ರಮ ತೆಗೆದುಕೊಂಡರೆ ಮಾತ್ರ ಗ್ರಾಮಗಳಲ್ಲಿ ಬಡವರಿಗೆ ಪುಕ್ಕಟೆ ಸೈಟ್ ಕೊಡಬಲ್ಲೆವು, ಎರಡು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಮನೆಗಳನ್ನು ಕಟ್ಟಿಕೊಡಬಲ್ಲೆವು.

ಗ್ರಾಮಾಂತರ ಪ್ರದೇಶದ ರಸ್ತೆಗಳಿಗಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಗ್ರಾಮಾಂತರ ಪ್ರದೇಶದ ಜನರಿಗೆ ಸಂಪರ್ಕಸಾಧನೆಯನ್ನು ಕೊಡಬೇಕು. ಸರ್ಕಾರದವರು ಬೆಂಗಳೂರಿನಿಂದ ಜಿಲ್ಲಾಧಿಕಾರಿಗಳಿಗೆ ಹಣವನ್ನು ಕೊಡುತ್ತಾರೆ, ಜಿಲ್ಲಾಧಿಕಾರಿಗಳು ಪ್ರತಿಯೊಂದು ತಾಲ್ಲೂಕು ಅಭಿವೃದ್ಧಿ ಮಂಡಲಿಯವರಿಗೆ ಕೊಡುತ್ತಾರೆ. ಇದು ಸರಿಯಾಗಿ ಸದ್ವಿನಿಯೋಗವಾಗುತ್ತದೆಯೋ, ಇಲ್ಲ. 20 ಸಾವಿರ ರೂಪಾಯಿಗಳು ಪ್ರತ್ಯಕ್ಷವಾಗಿ ಖರ್ಚಾಗಿದ್ದು ಆದರೆ, 40 ಸಾವಿರ ರೂಪಾಯಿಗಳನ್ನು ಖರ್ಚು ಆಗಿದೆ ಎಂದು ತೋರಿಸಿ ಹಣ ಪೋಲು ಮಾಡಿದಂಥ ಅನೇಕ ಉದಾಹರಣೆಗಳು ಇವೆ. ಅನೇಕ ಕಡೆ ಕೆಲಸ ಮಾಡದೆ ಇದ್ದರೂ ಹಣವನ್ನು ಎತ್ತಿ ಹಾಕಿದ್ದರೂ, ಅಂಥವರ ಮೇಲೆ ಅಧಿಕಾರಿಗಳು ಕ್ರಮತೆಗೆದುಕೊಳ್ಳಲಿಕೆ ತಯಾರು ಇಲ್ಲ. ಕೆಲವು ಮಂದಿ ಬಿ.ಡಿ.ಓ. ಮತ್ತು ಬ್ಲಾಕ್ ಸೂಪರ್‌ವೈಸರ್‌ಗಳ ಮೇಲೆ ತಪ್ಪುಗಳು ಸಿದ್ಧಾಂತವಾಗಿದ್ದರೂ ಅಂಥವರನ್ನು ಏನೂ ಮಾಡಿಲ್ಲ, ಸಸ್ಪೆನ್‌ಷನ್ ಮಾಡಿಲ್ಲ. ಐ.ಎ.ಎಸ್. ಅಧಿಕಾರಿಗಳು ಇವರನ್ನು ಷೀಲ್ಡ್ ಮಾಡುತ್ತಾರೆ. ಸೂಳೆ ಪಾಪ ಸನ್ಯಾಸಿಗೆ ಎನ್ನುವ ಹಾಗೆ ಭ್ರಷ್ಟಾಚಾರದ ಅಧಿಕಾರಿಗಳಿಗೆ ಹೈಗೈಯಿಂದ ನಾವೂ ಮತ್ತು ನಮ್ಮ ಮುಖ್ಯಮಂತ್ರಿಗಳೂ ವಿರೋಧ ಪಕ್ಷಗಳಿಂದ ಟೀಕೆ ಮಾಡಿಸಿಕೊಳ್ಳಬೇಕು ; ನಾವು ಅವರನ್ನು ಮರ್ಧನ ಮಾಡದ ವಿನಹ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ತಪ್ಪಿದ್ದಲ್ಲ ಎನ್ನುವುದನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ.

ಡಾಕ್ಟರ್ಸ್ ವಿಷಯದಲ್ಲಿ ಹೇಳುವುದಾದರೆ, ಅವರೂ ಸಹ ಸುಳ್ಳು ಲೆಕ್ಕ ಬರೆದು, ಒಂದು ಕಸಿ (ವ್ಯಾಸೆಕ್ಟಮಿ) ಕೇಸಿಗೆ 100 ರೂಪಾಯಿ ಖರ್ಚಾಗಿದೆ ಎಂದು ಬರೆದು ಸಾವಿರಾರು ರೂಪಾಯಿಗಳನ್ನು ತಿಂದಿದ್ದಾರೆ. ಸರ್ಕಾರದವರು ಅವರ ಮೇಲೂ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಈ ರೀತಿ ಅನೇಕ ಅಧಿಕಾರಿಗಳ ಮೇಲೆ ಆರೋಪಣೆ ಇದ್ದರೂ ಸಹಿತ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ; ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. ಅನೇಕಮಂದಿ ಎಕ್ಸಿಕ್ಯುಟೀವ್ ಎಂಜನಿಯರ್ಸ್ ಸೂಪರಿಂಟೆಂಡಿಂಗ್ ಎಂಜನಿಯರ್ಸ್ ತಪ್ಪು ಮಾಡುತ್ತಾರೆ ಅಂಥವರನ್ನು ಹಿಡಿದು ನಿರ್ದಾಕ್ಷಿಣ್ಯವಾಗಿ ಎಲ್ಲಿಯವರೆಗೆ ಕ್ರಮತೆಗೆದುಕೊಳ್ಳುವುದಿಲ್ಲ ಅಲ್ಲಿಯವರೆಗೆ ಪ್ರಜಾಪ್ರಭುತ್ವದಲ್ಲಿ ಯಾರೇ ಇರಲಿ ಅವರಿಗೆ ಕೆಟ್ಟ ಹೆಸರು ತಪ್ಪಿದ್ದಲ್ಲ ಎನ್ನುವ ಮಾತನ್ನು ಒತ್ತಿ ಹೇಳುತ್ತೇನೆ.

ಇವತ್ತಿನ ದಿವಸ ನಮ್ಮ ರಾಜ್ಯಪಾಲರ ಭಾಷಣದ ಮೇಲೆ ಉಪಯುಕ್ತವಾದ ಸಲಹೆಗಳನ್ನು ನಾವೂ ಮತ್ತು ವಿರೋಧ ಪಕ್ಷದವರೂ ಕೊಡುವುದು ನಮ್ಮಗಳ ಕರ್ತವ್ಯ. ಪ್ರಜಾಪ್ರಭುತ್ವದಲ್ಲಿ ಪ್ರಜಾರಾಜ್ಯ ಯಶಸ್ವಿಯಾಗಬೇಕಾದರೆ, ನಾವು ನಿಜವಾಗಿಯೂ ಅಧಿಕಾರಿಗಳನ್ನು ಹತೋಟಿಯಲ್ಲಿಟ್ಟುಕೊಂಡರೆ ಮಾತ್ರ ಸಾಧ್ಯ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹುತ್ತ ಬಡಿದರೆ ಹಾವು ಸಾಯುವುದೇ ? ಅಧಿಕಾರಿಗಳು ತಪ್ಪು ಮಾಡಿದರೆ ಮಂತ್ರಿ ಮಂಡಲವನ್ನು ಟೀಕೆ ಮಾಡುವುದು ಸೂಕ್ತವಲ್ಲ. ನಾವು ನೀವು ಎಲ್ಲರೂ ಸೇರಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟು ದುಷ್ಟ ಅಧಿಕಾರಿಗಳನ್ನು ಶಿಕ್ಷಿಸಬೇಕು. 40 ಪರ್ಸೆಂಟ್ ಒಳ್ಳೆಯ ಅಧಿಕಾರಿಗಳು ಇದ್ದಾರೆ, ಅವರಿಂದಲೇ ಆಡಳಿತ ನಡೆಯುವುದು. ಅವರನ್ನು ಎಲ್ಲಿಗಾದರೂ ವರ್ಗ ಮಾಡಿದರೂ ಹೋಗುತ್ತಾರೆ, ಪ್ರಮೋಷನ್ ಕೊಡದಿದ್ದರೂ ಕೆಲಸ ಮಾಡುತ್ತಾರೆ, ಅವರು ನಿಷ್ಪಕ್ಷಪಾತದಿಂದ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಾರೆ. ಆದರೆ ಈ ಅಧಿಕಾರಿಗಳು ಇದ್ದಲ್ಲೇ ಇರಬೇಕು ಲಂಚ ತಿನ್ನಬೇಕು, ಬೇರೆ ಕಡೆ ಹೋಗಬಾರದು. ಈ ಅಧಿಕಾರಿಗಳ ಇಂಥ ಹವ್ಯಾಸವನ್ನು ತೊಡೆದು ಹಾಕಬೇಕು. ಇಲ್ಲದೇ

ಹೋದರೆ, ನಾವು ಸರ್ಕಾರವನ್ನು ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ. ಪ್ರತಿಯೊಬ್ಬ ಮಂತ್ರಿಯೂ ತಮ್ಮ ತಮ್ಮ ಖಾತೆಯ ಸೆಕ್ರೆಟರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ಈ ರೀತಿ ಆಡಳಿತ ನಡೆಸಿದ್ದೇ ಆದರೆ ನಾವು ಒಳ್ಳೆಯ ಹೆಸರನ್ನು ತೆಗೆದುಕೊಳ್ಳುತ್ತೇವೆ, ಮತ್ತು ಹಣವನ್ನು ಏನು ಖರ್ಚು ಮಾಡುತ್ತೇವೆ ಅದರ ಸದ್ವಿನಿಯೋಗವಾಗುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು 175 ತಾಲ್ಲೂಕುಗಳು ಇವೆ. ಸರ್ಕಾರದವರು ಕೊಡತಕ್ಕ ಹಣ ಪ್ರತಿಯೊಂದು ತಾಲ್ಲೂಕಿಗೂ ಹೋಗಬೇಕು ಮತ್ತು ಆ ಹಣ ಸದ್ವಿನಿಯೋಗವಾಗಬೇಕು ಎನ್ನುವ ಮಾತನ್ನು ಹೇಳುತ್ತೇನೆ. ನಾವು ಪ್ರತಿ ತಾಲ್ಲೂಕು ಬೋರ್ಡುಗಳನ್ನು ಸ್ಟಡಿ ಮಾಡಿ ನೋಡಿದ್ದೇ ಆದರೆ, ಎಲ್ಲಿ ಹಣ ತಿನ್ನಲಿಕ್ಕೆ ಸಾಧ್ಯವಿದೆ ಅಂಥ ಕಡೆ ಸರಿಯಾದ ರೀತಿಯಲ್ಲಿ ಹಣವನ್ನು ಕೊಟ್ಟಿದ್ದಾರೆ. ಎಲ್ಲಿ ಹಣ ತಿನ್ನಲಿಕ್ಕೆ ಸಾಧ್ಯವಿಲ್ಲ ಅಂಥ ಕಡೆ ಹಣವೇ ಇಲ್ಲ. ಪಿ.ಡಬ್ಲ್ಯು.ಡಿ ಮುಖಾಂತರವಾಗಲೀ ಎಜುಕೇಷನ್ ಡಿಪಾರ್ಟ್‌ಮೆಂಟ್ ಮುಖಾಂತರವಾಗಲಿ, ರೆವಿನ್ಯೂ ಡಿಪಾರ್ಟ್‌ಮೆಂಟ್ ಮುಖಾಂತರವಾಗಲೀ ಹಣ ಸರಿಯಾದ ರೀತಿಯಲ್ಲಿ ವಿನಿಯೋಗವಾಗಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ಸೇವಕರ ವಿಚಾರದಲ್ಲಿ ಹೇಳುವುದಾದರೆ, ಗ್ರಾಮ ಸೇವಕರು ಯಾವ ಗ್ರಾಮದಲ್ಲಿಯೂ ಇರುವುದಿಲ್ಲ. ಹೆಚ್ಚಿಗೆ ಹಣ ಕೇಳದಿದ್ದರೆ ಇವರು ಉತ್ತರಗಳನ್ನು ಕೊಡುವುದಿಲ್ಲ. ಇವರನ್ನು ಎನ್ಕ್ವಯರಿ ಮಾಡುವವರು ತಹಸೀಲ್ದಾರರು ಮತ್ತು ಅಸಿಸ್ಟೆಂಟ್ ಕಮಿಷನರ್ ಅವರು. ಅವರೂ ಇವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕಾಗುವುದಿಲ್ಲ. ಎಲ್ಲಿಯೂ ಸಹ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ರಾಜ್ಯ ಸರ್ಕಾರದವರು ನಿರ್ದಾಕ್ಷಿಣ್ಯವಾಗಿ ಅಧಿಕಾರಿಗಳನ್ನು ಹಿಡಿತದಲ್ಲಿಡದಿದ್ದರೆ ಜನತೆಯ ಕಲ್ಯಾಣವಾಗುವುದಿಲ್ಲ. ಜನತೆಯ ಕಲ್ಯಾಣಕ್ಕೋಸ್ಕರ ಎಲ್ಲರೂ ಶ್ರಮಿಸೋಣ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶರಣಪ್ಪ.—ಅಧಿಕಾರಿಗಳ ಮನೋಭಾವ ಈಗ ಏಕೆ ಹೀಗೆ ಆಯಿತು ಅದನ್ನು ಸ್ವಲ್ಪ ಹೇಳಬೇಕು.

ಶ್ರೀ ಎಂ. ಬಿ. ರಾಮಸ್ವಾಮಿ.—ಹಿಂದೆ ಇದ್ದ ಅಧಿಕಾರಿಗಳೇ ಈಗ ಇರುವವರು.

†ಶ್ರೀ ಬಿ. ವಿ. ಕಕ್ಕಿಲ್ಲಾಯ (ಬಂಟವಾಳ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯಪಾಲರು ಮಾಡಿದ ಭಾಷಣದ ಒಂದು ಮಾದರಿಯನ್ನು ಸಹ ನಮಗೆ ಕೊಟ್ಟಿದ್ದಾರೆ. ಅವರ ಭಾಷಣವನ್ನು ನಾವು ಓದಿದ ಹಾಗೆ ತೆಗೆದುಕೊಳ್ಳಬೇಕು ಎಂದು ಅಪ್ಪಣೆ ಕೊಡಿಸಿದ್ದಾರೆ. ಈ ಭಾಷಣದಲ್ಲಿ ಮೊದಲನೆಯದಾಗಿ "ಹಿಂದಿನ ವರ್ಷ ಸಮಗ್ರ ರಾಜ್ಯಕ್ಕೆ ಸಂಕಟಕರವಾಗಿತ್ತು. 1975ನೇ ಇಸವಿಯಲ್ಲಿ ಪರಿಸ್ಥಿತಿ ಬದಲಾಗಿ ಒಳ್ಳೆಯ ಕಾಲ ಬರುತ್ತೆಂದು ಹಾರೈಸುತ್ತೇನೆ ಎಂದು ಹೇಳಿದ್ದಾರೆ. ಆದರೆ ರಾಜ್ಯದ ಈಗಿನ ಪರಿಸ್ಥಿತಿಯನ್ನು ನೋಡಿದರೆ 1974ರಲ್ಲಿ ಇದ್ದದ್ದಕ್ಕಿಂತ ಪರಿಸ್ಥಿತಿ ಇನ್ನು ಬಿಗಡಾಯಿಸಿದೆಯೆಂದು ಕಾಣುತ್ತದೆ. ಶ್ರೀಮತಿ ಇಂದಿರಾ ಗಾಂಧಿಯವರು ಹೇಳಿದ್ದಾರೆ. ದೇಶದಲ್ಲೆಲ್ಲಾ ದವಸಧಾನ್ಯಗಳ ಬೆಲೆಗಳು ಇಳಿಯುತ್ತಾ ಇವೆ ಎಂದು; ಮತ್ತು ನಮ್ಮ ರಾಜ್ಯದ ಆಹಾರ ಸಚಿವೆಯವರು ಕೂಡ ಕೆಲವು ದಿವಸಗಳ ಹಿಂದೆ ಹೇಳಿದ್ದಾರೆ. ಯಾವ ಅಂಕಿ ಸಂಖ್ಯೆಗಳನ್ನು ಆಧರಿಸಿ ಈ ರೀತಿ ಹೇಳಿದರೋ ಗೊತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇರೆ ಕಡೆಗೆ ಕೂಡ ಹೋಗಿ ಬಂದಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಆಹಾರಧಾನ್ಯಗಳ ಬೆಲೆ ಹಿಂದೆ ಇದ್ದದ್ದಕ್ಕಿಂತಲೂ ಈಗ ಜಾಸ್ತಿಯಾಗಿದೆ ಇದನ್ನು ಏತಕ್ಕೆ ಮುಚ್ಚುಮರೆ ಮಾಡುತ್ತಾರೋ ನನಗೆ ಗೊತ್ತಾಗುವುದಿಲ್ಲ. ಹಿಂದೆ ನಮ್ಮ ದೇಶ ವಿಶೇಷವಾಗಿ ಲೋಕವ್ಯಾಪಕ ಸಂಕಷ್ಟಕ್ಕೆ ಸಿಕ್ಕಿತು ಈಗ, ನಮ್ಮ ದೇಶಕ್ಕೆ ಯಾವ ರೀತಿಯಾದ ಲೋಕವ್ಯಾಪಕ ಸಂಕಷ್ಟಗಳು ಇಲ್ಲವೆಂದು ಹೇಳಿಕೊಂಡಿದ್ದಾರೆ. ನಾನು ಹೇಳುವುದಾದರೆ ಹಿಂದಿನ ವರ್ಷಕ್ಕಿಂತ ಪರಿಸ್ಥಿತಿ ಸುಧಾರಿಸಿದೆ ಎಂದು ಹೇಳುವಾಗ ಈ ವರ್ಷ ಯಾವ ಲೋಕವ್ಯಾಪಕ ಘಟನೆಗಳು ಬದಲಾಗಿವೆ ಎಂಬುದು ಗೊತ್ತಾಗಲಿಲ್ಲ. ಕಳೆದ ವರ್ಷದಲ್ಲಿ ಅಂದರೆ ಇವರು ಅಧಿಕಾರಕ್ಕೆ ಬಂದಮೇಲೆ ಬೆಲೆಗಳ ಏರಿಕೆ ತಡೆಯುವುದಕ್ಕೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಅದರ ಜೊತೆಗೆ ಬೆಲೆ ಏರಿಕೆಗೆ ಅನುಕೂಲವಾಗುವಂತಹ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಬೇಕಾಗಿದೆ. ಒಂದು ಹೇಳಬೇಕೆಂದರೆ ಈ ವರ್ಷ ಉತ್ಪಾದನೆ ಸ್ವಲ್ಪ ಮಟ್ಟಿಗೆ ಜಾಸ್ತಿಯಾಗಿದೆ. ಆಹಾರ ಸಂಗ್ರಹ ಮಾಡುವುದಕ್ಕೆ ಲೆವಿ ಪದ್ಧತಿ ತಂದಿದ್ದೀರಿ. ಅನೌಪಚಾರಿಕ ಪಡಿತರ ಪದ್ಧತಿಯನ್ನು ಜಾರಿಗೆ ತಂದಿದ್ದೀರಿ. ಇದು ಎರಡೂ ಕೂಡ ಜನರ ಕಣ್ಣಿಗೆ ಮಣ್ಣೆರಚುವಂತಹುದು. ಆಹಾರಧಾನ್ಯ ಸಂಗ್ರಹಣೆ ಮತ್ತು ಜನರಿಗೆ ಒದಗಿಸುವಂತಹ ವಿತರಣೆ ಈ ಎರಡು ಕಾರ್ಯಕ್ರಮಗಳು ಪರಿಣಾಮಕಾರಿಯಾಗಲಿಲ್ಲ ಮತ್ತು ಯಶಸ್ವಿಯಾಗಲಿಲ್ಲ. ಬೆಲೆ ಏರಿಕೆ ಮಾತ್ರ ನಿರಂತರವಾಗಿ ಆಗುವುದಕ್ಕೆ ಕಾರಣವಾಗಿವೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ

ಕುಸಬಲು ಅಕ್ಕಿ ಕೆ. ಜಿ. ಒಂದಕ್ಕೆ ಮೂರು ರೂಪಾಯಿಂದ ಮೂರು ರೂಪಾಯಿ 20 ಪೈಸೆಯುವರೆಗೆ ಆಗಿದೆ. ಇಷ್ಟು ಬೆಲೆ ಆಗಬೇಕಾದರೆ ಏನು ಕಾರಣ. ಆಹಾರದಾನ್ಯದ ಉತ್ಪನ್ನ ಕಡಿಮೆ ಇರಬಹುದು. ಈ ಜಿಲ್ಲೆಯಲ್ಲಿ ಮಾತ್ರ ಏಕೆ ಈ ರೀತಿ ಬೆಲೆ ಏರುತ್ತಿದೆ ಅದನ್ನು ಹೇಳಬೇಕು. ಮಾನ್ಯ ಸಚಿವೆಯವರು ಒಂದು ಸಾರಿ ಒಂದು ಗೇಟಿಗೆ ಕಾವು ಅಲ್ಲಿ ಒಂದೆರಡು ಕೇಸುಗಳನ್ನು ಪತ್ತೆ ಮಾಡಿದರು ಎಂದು ಕೇಳಿದ್ದೇನೆ. ಅದು ಕೇವಲ ಹೊಟ್ಟೆಗೆ ಇಲ್ಲದೆ ಇರುವವರು ಒಂದೆರಡು ಕಿಲೋಗಳನ್ನು ಬಸ್ಸುಗಳಲ್ಲಿ ತೆಗೆದುಕೊಂಡು ಹೋಗುತ್ತಿರುವುದನ್ನು ಹಿಡಿಯುತ್ತಾರೆ. ನಮ್ಮ ಜಿಲ್ಲೆಯಲ್ಲಿ ಎಷ್ಟು ಮಂದಿ 100-1000 ಕ್ವಿಂಟಾಲ್ ಬತ್ತ, ಅಕ್ಕಿ ಮುಂತಾದ ಪದಾರ್ಥಗಳನ್ನು ಸಾಗಿಸುವವರ ಮಾಹಿತಿ ಸರ್ಕಾರದ ಕಡೆ ಇಲ್ಲವೇ ಹೇಳಿ. ಲಾರಿ ಲಾಗಿ ಆಹಾರಧಾನ್ಯಗಳು ಸಾಗಿಸುವವರು ತಮ್ಮಲ್ಲಿದ್ದಾರೆಂದು ತಾವೇ ಹೇಳಿಕೊಂಡಿದ್ದೀರಿ. ಯಾರು ಯಾರು ಸಮಾಜದ್ರೋಹಿಗಳು ಇದ್ದಾರೆ ಅವರುಗಳ ಪಟ್ಟಿ ಇದೆ. ಅವರ ಬಗ್ಗೆ ಏತಕ್ಕೆ ಉಗ್ರಕ್ರಮ ತೆಗೆದುಕೊಳ್ಳುವುದಿಲ್ಲ? ಕೇವಲ ಬಡಪಾಯಿಗಳನ್ನು ಹಿಡಿದು ತೊಂದರೆ ಕೊಡುತ್ತಿದ್ದೀರಿ. ಕಾಳಸಂತೆಕೋರರನ್ನು ತಡೆಯುವುದಕ್ಕೆ ತೀವ್ರವಾದ ಯಾವ ಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳಬೇಕಾಗಿದೆ. ಆಹಾರಧಾನ್ಯಗಳ ಸಗಟು ವ್ಯಾಪಾರವನ್ನು ವಹಿಸಿಕೊಳ್ಳುವುದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ವಿರೋಧ ಇದ್ದಾರೆಂದು ವ್ಯಕ್ತಪಟ್ಟಿದೆ. ಸಗಟು ವ್ಯಾಪಾರ ವ್ಯವಸ್ಥೆ ನಮ್ಮಲ್ಲಿ ಇಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಏನು ಕರ್ನಾಟಕ ಫುಡ್ ಕಾರ್ಪೊರೇಷನ್ ಸರ್ಕಾರ ರಚನೆ ಮಾಡಿದೆ ಅವರ ಮುಖಾಂತರ ಇವೊತ್ತಿನವರೆಗೆ ಎಷ್ಟು ಆಹಾರಧಾನ್ಯವನ್ನು ಖರೀದಿ ಮಾಡಿದೆ, ಎಷ್ಟು ವಿತರಣೆ ಮಾಡಿದ್ದಾರೆ ಮತ್ತು ಕೊರತೆ ಇರುವ ಪ್ರದೇಶಗಳಿಗೆ ಎಷ್ಟು ಆಹಾರವನ್ನು ವಿತರಣೆ ಮಾಡಿದರು ಎಂದು ಈ ಮಾನ್ಯ ಸಭೆಗೆ ತಾವು ತಿಳಿಸಬೇಕು. ತಮಗೆ ಬೇಕಾದ ಅಧಿಕಾರಿಗಳಿಗೆ ಸ್ಥಾನ ಒದಗಿಸುವುದಕ್ಕೆ ಈ ಒಂದು ಕಾರ್ಪೊರೇಷನ್ ಮಾಡಿದ್ದಾರೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ತಮ್ಮ ಮುಂದೆ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಬೇಕೆಂದರೆ ಆಹಾರದಾನ್ಯಗಳ ಬೆಲೆ ಏನು ಏರುತ್ತಾ ಇದೆ ಅದು ಇದೇ ರೀತಿ ಏರುತ್ತಾ ಹೋದರೆ ಜನಗಳು ತಮಗೆ ಕ್ಷಮೆ ಕೊಡುವುದಕ್ಕೆ ತಯಾರಿಲ್ಲ. ಅವರು ನಮ್ಮ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಾಗುತ್ತಾ ಇದ್ದಾರೆ. ತಾವು ಏನು ಒಂದು ಪೋಲೀಸು, ಮಿಲಿಟರಿ ಬಲವಿದೆಯೆಂದು ಅದರಿಂದ ಅವರನ್ನು ತಹಬಂದಿಗೆ ತರುವುದಕ್ಕೆ ಸಾಧ್ಯವಿದೆಯೆಂದು ತಿಳಿದಿದ್ದರೆ ಅದು ಕೇವಲ ಭ್ರಮೆಯಾಗುತ್ತದೆ. ಈ ಒಂದು ಗಂಭೀರವಾದ ಪ್ರಶ್ನೆಯನ್ನು ಬಹಳ ಗಂಭೀರವಾಗಿ ಪರಿಶೀಲನೆ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾನ್ಯಗಳನ್ನು ಬೇರೆ ಕಡೆಗೆ ಸಾಗಿಸುವುದು ಏನು ನಡೆಯುತ್ತಾ ಇದೆ ಅದನ್ನು ತಪ್ಪಿಸಬೇಕು. ಆ ಕದೀಮರು ಮತ್ತು ಮುಖ್ಯಸ್ಥರು ಯಾರು ಇದ್ದಾರೆ ಅವರನ್ನು ಕೂಡಲೆ ಕಂಡುಹಿಡಿದು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಫುಡ್ ಕಾರ್ಪೊರೇಷನ್ ಏನು ಇದೆ ಅದರ ಮುಖಾಂತರ ರೈತರಿಗೆ ನ್ಯಾಯವಾದ ಬೆಲೆ ಕೊಟ್ಟು ಆ ದವಸದಾನ್ಯವನ್ನು ಅಭಾವ ಇರುವಂಥ ಪ್ರದೇಶಗಳಿಗೆ ಒದಗಿಸಬೇಕು. ಕೆಲವು ಮುನಿಸಿಪಾಲಿಟಿ ಇರುವ ಕಡೆ ಮತ್ತು ಹುಬ್ಬಳ್ಳಿ, ಧಾರವಾಡ, ಬೆಳಗಾಂ ಮುಂತಾದ ಕಡೆಗಳಲ್ಲಿ ಅನೌಪಚಾರಿಕ ಪಡಿತರ ಪದ್ಧತಿಯನ್ನು ಜಾರಿಗೆ ತಂದು ಒಂದು ತಿಂಗಳಿಗೆ 8 ಕೆ. ಜಿ. ಧಾನ್ಯವನ್ನು ಒದಗಿಸಿಕೊಡುತ್ತಿದ್ದಾರೆ. ಕೇವಲ ಮೂರು ನಾಲ್ಕು ಜಿಲ್ಲೆಗಳ ನಗರಗಳಿಗೆ ಒದಗಿಸಿದರೆ ಕನ್ನಡನಾಡಿನ ಮೂರುಕೋಟಿ ಜನರ ಹೊಟ್ಟೆ ತುಂಬಿದಂತೆ ಆಗುವುದಿಲ್ಲ. ಕೇವಲ ನಗರಗಳಲ್ಲಿ ಮತ್ತು ಬೆಂಗಳೂರು ಪಟ್ಟಣಗಳ ಜನರಿಗೆ ಕೊಡದೆ ಹೋದರೆ ನಿಮ್ಮ ಮನೆಗಳ ಹತ್ತಿರ ಬಂದು ಗಲಾಟೆ ಮಾಡುತ್ತಾರೆಂದು ಮತ್ತು ಕಾಯುತ್ತಾರೆ ಎಂದು ಅವರಿಗೆ ಕೊಟ್ಟರೆ ಸಾಲದು. ಇನ್ನು ಒಂದು ವರ್ಷದೊಳಗೆ ಹಳ್ಳಿಗಳಲ್ಲಿ ಗ್ರಾಮ ಗ್ರಾಮಗಳಲ್ಲಿ ವ್ಯವಸಾಯ ಕೂಲಿಗಾರರಿಗೆ, ವ್ಯವಸಾಯ ಸಣ್ಣ ಹಿಡುವಳಿದಾರರಿಗೆ ಮತ್ತು ಕಾರ್ಮಿಕರಿಗೆ ಎಲ್ಲರಿಗೂ ನ್ಯಾಯವಾದಬೆಲೆಗೆ ಆಹಾರಧಾನ್ಯಗಳನ್ನು ಒದಗಿಸಬೇಕು. ವರ್ಷದಲ್ಲಿ ಎರಡು ಮೂರು ತಿಂಗಳಿಗೆ ಖರೀದಿ ಮಾಡುವ ಜನರಿಗೂ ಆ ಸೌಲಭ್ಯವನ್ನು ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು ವಿಸ್ತರಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ಬೇಸಾಯಗಾರರು ಮತ್ತು ಸಣ್ಣ ಹಿಡುವಳಿದಾರರಿಗೂ ಆಹಾರ ಧಾನ್ಯಗಳ ಪೂರೈಕೆ ಆಗಬೇಕು. ಇನ್ನು ಭೂಸುಧಾರಣಾ ಕಾನೂನಿನ ವಿಷಯದಲ್ಲಿ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದಂತೆ 1957 ರಿಂದ 1974 ರವರೆಗೆ ಸುಮಾರು 40ಲಕ್ಷ ಎಕರೆ ಜಮೀನನ್ನು ರೈತರಿಂದ ಕಿತ್ತುಕೊಂಡಿದ್ದಾರೆ. ಆದರೆ ಏತಕ್ಕೆ ಇನ್ನು ವಿತರಣೆ ಮಾಡುವುದಕ್ಕೆ ಆಗಲಿಲ್ಲ?

ನಾನು ತಮ್ಮಲ್ಲಿ ಕೇಳುತ್ತೇನೆ. ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಈ ವಿಷಯವನ್ನು ತಿಳಿಸಬೇಕು ಎಂದು. 1-3-1974ರ ನಂತರ ಭೂಸುಧಾರಣೆ ಜಾರಿಗೆ ಬಂದಮೇಲೆ ರಾಜ್ಯದಲ್ಲಿ ಎಷ್ಟು ಲಕ್ಷ ಎಕರೆ ಜಮೀನುಗಳನ್ನು ಕೊಟ್ಟಿದ್ದೀರಿ? ಯಾವ ರೈತ ಜಮೀನು ಸಾಗು

ಮಾಡಿದ್ದನೋ ಅವನಿಗೆ ಅದು ಸಿಕ್ಕಿದೆಯೇ ? ಈ ಭೂ ಸುಧಾರಣೆ ಜಾರಿಗೆ ಬಂದಮೇಲೆ ರಾಜಕೀಯ ಪಕ್ಷದ ಮುಂದಾಳುಗಳಿಂದ, ಪ್ರಭಾವಶಾಲಿಗಳಿಂದ ರೈತರಿಂದ ಜಮೀನನ್ನು ಕಿತ್ತುಕೊಂಡು ಭೂಮಾಲೀಕರಿಗೆ ಕೊಡಿಸಿರುವ ಪ್ರಕರಣಗಳೆಷ್ಟು ? ಇದಕ್ಕೆ ಸರ್ಕಾರದವರು ಉತ್ತರ ಕೊಡಬೇಕು. ಈಗ ಒಂದು ಉದಾಹರಣೆಗೆ ಹೇಳುವುದಾದರೆ ಭೂ ಸುಧಾರಣೆ ಕಾನೂನು ಜಾರಿಗೆ ಬಂದಮೇಲೆ ಗೇಣಿದಾರರಿಗೆ ಇರತಕ್ಕಂಥ ಜಮೀನುಗಳು ಮತ್ತು ಅವರ ಹಕ್ಕುಭಾದ್ಯತೆಗಳು ಮತ್ತು ಅವರ ಹಿತಾಸಕ್ತಿಗಳು ಸರ್ಕಾರದಲ್ಲಿ ಅಕ್ಷಿಪ್ತವಾಗಿವೆ. ಇನ್ನು ಅವರ ಮಾಲೀಕತ್ವವನ್ನು ಅವರಿಗೇನೇ ಕೊಡುವುದು ಒಂದು ಮಾತ್ರ ಉಳಿದಿದೆ. 1-3-1974ರಿಂದ ಗೇಣಿದಾರರಿಗೆ ಯಾವ ಜಮೀನು ಇತ್ತೋ ಅವೆಲ್ಲಾ ಸರ್ಕಾರಕ್ಕೆ ಸೇರಿದ್ದು. ಆದರೆ ಇದರಲ್ಲಿ ಏನಾಗಿದೆ ಎಂದರೆ ಸರ್ಕಾರಕ್ಕೆ ಸೇರಿದ ಈ ಜಮೀನನ್ನು ಸರ್ಕಾರದ ಅಧಿಕಾರಿಗಳು ಭೂಮಾಲೀಕರು ಷಾಮೀಲಾಗಿ ರೈತರ ಕೈಯಿಂದ ಕಿತ್ತುಕೊಂಡಿದ್ದಾರೆ. ಅದಕ್ಕೆ ಯಾವ ರೀತಿಯಾದ ದಾಖಲೆಯೂ ಇಲ್ಲ. ಅವನ ಕೈಯಲ್ಲಿ ಇದ್ದ ಜಮೀನಿನಲ್ಲಿ ಅರ್ಧಾಂಶ ಕೊಟ್ಟು ಇನ್ನು ಅರ್ಧಾಂಶ ಕಿತ್ತುಕೊಂಡಿದ್ದಾರೆ. ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಇಂಥಾ ದಾಖಲೆಗಳು ಎಷ್ಟು ರಿಜಿಸ್ಟರ್ ಆಗಿದೆ, ಎಷ್ಟು ಜಮೀನು ಗೇಣಿದಾರರಿಂದ ಭೂಮಾಲೀಕರ ಸ್ವಾಧೀನಕ್ಕೆ ಹೋಗಿವೆ ಎನ್ನುವುದನ್ನು ಹೇಳಬೇಕು. ಇದರಲ್ಲಿ ನನ್ನ ತಾಲ್ಲೂಕು ಮಟ್ಟಿಗೆ ಬೇಕಾದ ಸಂಖ್ಯಾಂಶವನ್ನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಬೇರೆ ತಾಲ್ಲೂಕುಗಳಲ್ಲೂ ಈ ವಿಷಯವನ್ನು ಸಂಗ್ರಹಣೆ ಮಾಡಬೇಕು. ಯಾರು ಯಾರು ಗೇಣಿದಾರರ ಕೈಯಲ್ಲಿ ಇರತಕ್ಕಂಥ ಭೂಮಿಯನ್ನು ಭೂಮಾಲೀಕರು ವಶಪಡಿಸಿಕೊಂಡಿದ್ದಾರೆ ಅನ್ನುವುದನ್ನು ತಿಳಿದು ತಹಸೀಲ್ದಾರರ ಕೈಯಲ್ಲಿರುವ ಅಧಿಕಾರವನ್ನು ಉಪಯೋಗಮಾಡಿ ಎಲ್ಲೆಲ್ಲಿ ಇಂತಹ ಅಕ್ರಮ, ಅವ್ಯವಹಾರಗಳು ನಡೆದಿವೆಯೋ ಅಲ್ಲಿ ಈ ಜಮೀನಿನ ಮಾಲೀಕತ್ವವನ್ನು ಗೇಣಿದಾರರಿಗೆ ಕೊಡಿಸುವ ಒಂದು ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ ಎಂದು ಒಂದು ಆಶ್ವಾಸನೆಯನ್ನು ಕೊಡಬೇಕು ಎಂದು ನಾನು ಕೇಳುತ್ತೇನೆ. ಈವೊತ್ತಿನ ದಿವಸ ನನ್ನ ಜಿಲ್ಲೆಯಿಂದ ಸುಮಾರು $1\frac{1}{2}$ಲಕ್ಷ ಜನ ರೈತರು ಲ್ಯಾಂಡ್ ಟ್ರಿಬ್ಯೂನಲ್‌ಗೆ ಅರ್ಜಿಗಳನ್ನು ದಾಖಲು ಮಾಡಿದ್ದಾರೆ. $1\frac{1}{2}$ಲಕ್ಷ ಜನರು ಲ್ಯಾಂಡ್ ಟ್ರಿಬ್ಯೂನಲ್‌ಗೆ ಅರ್ಜಿಗಳನ್ನು ದಾಖಲು ಮಾಡಿದ ಮೇಲೂ ಅದು ತನಿಖೆ ಆಗುವುದಕ್ಕಿಂತ ಮುಂಚೆ ಅವರನ್ನು ಹೊಡೆದೋಡಿಸಿದ್ದಾರೆ. ಕೆಲವು ಕಡೆಗಳಲ್ಲಿ ಕೋರ್ಟುಗಳ ಮುಖಾಂತರ ಪೋಲೀಸ್ ರಕ್ಷಣೆ ಮತ್ತು ರೆವಿನ್ಯೂ ಸಿಬ್ಬಂದಿಯೊಡನೆ ಸೇರಿ ಭೂಮಾಲೀಕರು ಸಹಾಯ ಪಡೆದುಕೊಳ್ಳುತ್ತಿದ್ದಾರೆ. ಇದನ್ನು ತಾವು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಲ್ಯಾಂಡ್ ಟ್ರಿಬ್ಯೂನಲ್ಸ್‌ಗೆ ಮುನ್ಸೀಫ್ ಕೋರ್ಟಿನಿಂದ ಇಂಜಕ್ಷನ್ ಕೊಟ್ಟಿದ್ದಾರೆ. ಯಾವನು ರಿಸೀವರ್ ಇದ್ದಾನೋ ಅವನಿಗೆ ಜಮೀನು ಇರತಕ್ಕಂಥಾದ್ದು ಎಂದು ಈ ಮನೆಯಲ್ಲಿ ಈ ಶಾಸನ ಅಂಗೀಕಾರವಾಗಿದ್ದರೂ ಕೂಡ ಸರಿಯಾಗಿ ಜಾರಿಗೆ ತಂದಿಲ್ಲ. ಹಿಂದೆ ಯಾವ ಗೇಣಿದಾರರು ಈ ಜಮೀನು ಮಾಡುತ್ತಿದ್ದನೋ ಅವನಿಗೆ ಆ ಜಮೀನನ್ನು ಇನ್ನೂ ಬಿಡಿಸಿ ಕೊಟ್ಟಿಲ್ಲ. ಈ ಬಗ್ಗೆ ಮುನ್ಸೀಫ್ ಕೋರ್ಟಿನಲ್ಲಿರುವ ಫೈಲುಗಳನ್ನು ಲ್ಯಾಂಡ್ ಟ್ರಿಬ್ಯೂನಲ್ಸ್‌ಗೆ ವರ್ಗಾಯಿಸಬೇಕು ಎಂದು ಇಂಜಕ್ಷನ್ ಕೊಟ್ಟಿದ್ದರೂ ಕೂಡ ಆ ಫೈಲುಗಳನ್ನು ತಮ್ಮಲ್ಲೇ ಇಟ್ಟುಕೊಂಡು ಒಂದೊಂದು ಡೇಟ್ ಮುಂದಕ್ಕೆ ಹಾಕಿ ಇನ್ನೂವರೆಗೂ ಲ್ಯಾಂಡ್ ಟ್ರಿಬ್ಯೂನಲ್ಸ್‌ಗೆ ಆ ಫೈಲುಗಳನ್ನು ಕೊಟ್ಟಿಲ್ಲ. ಆದುದರಿಂದ ಈಗ ಏನಾಗಿದೆ ಎಂದರೆ ಕೋರ್ಟಿನಿಂದ ಇಂಜಕ್ಷನ್ ಆರ್ಡರ್ ಆಗಿದ್ದರೂ ಕೂಡ ರಿಸೀವರ್‌ಗೆ ಆ ಜಮೀನಿನ ಬೆಳೆ ಬರುತ್ತಾ ಇಲ್ಲ. ಬೆಳೆ ಬಂದಾಗ ಭೂ ಮಾಲೀಕರು ಪೋಲೀಸರ ಸಹಾಯ ಪಡೆದು ಗೂಂಡಾಗಳನ್ನು ಕಟ್ಟಿಕೊಂಡು ಆ ಬೆಳೆಯನ್ನು ಕುಯ್ದುಕೊಂಡು ಸಾಗಿಸಿದ್ದಾರೆ. ಈ ವಿಷಯವನ್ನು ಬರೆದು ಮುಖ್ಯಮಂತ್ರಿಗಳಿಗೂ ಮತ್ತು ಕಂದಾಯ ಮಂತ್ರಿಗಳಿಗೂ ಕಳುಹಿಸಿದ್ದೇನೆ. ಇದರ ಬಗ್ಗೆ ಏನು ವಿಚಾರಣೆ ನಡೆಸಿದ್ದೀರಿ ? ರೈತನ ಮನೆಗೆ ತಲಪಬೇಕಾಗಿದ್ದ ಧಾನ್ಯ ಮತ್ತು ಹುಲ್ಲು ತಲುಪದೆ ಜಮೀನ್ದಾರರು ಪೋಲೀಸರ ಸಹಾಯದಿಂದ ತಮ್ಮ ಮನೆಗೆ ಸಾಗಿಸಿದ್ದಾರೆ, ಇವೆಲ್ಲವನ್ನೂ ಸರ್ಕಾರಕ್ಕೆ ತಿಳಿಸಿದ್ದೇನೆ. ಇದರಮೇಲೆ ಸರ್ಕಾರ ಏನು ಕಾರ್ಯಕ್ರಮ ಕೈಕೊಂಡಿದೆ ಎನ್ನುವುದನ್ನು ಹೇಳಬೇಕು. ಆದುದರಿಂದ ನಾನು ಹೇಳುವುದು ಏನೆಂದರೆ ಭೂಸುಧಾರಣೆ ಜಾರಿಗೆ ತರುವುದು ಅಷ್ಟು ಸುಲಭವಾದುದಲ್ಲ. ಕಠಿಣವಾದ ಕೆಲಸ ಮತ್ತು ಭೂಸುಧಾರಣಾ ಮಂಡಲಿಯಲ್ಲಿ ಸದಸ್ಯರಾಗಿರುವಂಥ ಪ್ರಾಮಾಣಿಕರಾದಂಥ ಜನರಿಗೆ ಕೆಲಸ ಮಾಡುವುದು ಕಷ್ಟ ಅಲ್ಲದೆ ಅವರ ಜೀವಕ್ಕೆ ಅಪಾಯ ಇದೆ ಎಂದು ನಾನು ಸರ್ಕಾರವನ್ನು ಕೇಳಬೇಕಾಗಿದೆ. ಈವೊತ್ತು ಸರ್ಕಾರದವರು ಮತ್ತು ಅವರ ಪಕ್ಷಕ್ಕೆ ಸೇರಿದಂಥ ಅನೇಕ ಮುಖಂಡರು ನಮ್ಮ ಜಿಲ್ಲೆಯಲ್ಲಿ ಭೂಮಾಲೀಕರ ಜೊತೆಯಲ್ಲಿ ಸೇರಿಕೊಂಡಿದ್ದಾರೆ. ಗೇಣಿದಾರರಿಗೆ ನ್ಯಾಯ ಈವೊತ್ತಿನವರೆಗೂ ಸರಿಯಾಗಿ ಸಿಕ್ಕುತ್ತಾ ಇಲ್ಲ. ಆದುದರಿಂದ ಇದರ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕು ಎಂದು ನಾನು ಕೇಳುತ್ತೇನೆ.

ಈ ಭೂಸುಧಾರಣೆಯಲ್ಲಿ ಇನ್ನೊಂದು ವಿಷಯ ಹೇಳಬೇಕಾಗಿದೆ. ಈ ಭೂಸುಧಾರಣಾ ಶಾಸನವನ್ನು ಜಾರಿಗೆ ತರುವಾಗ ಸಣ್ಣ ಹಿಡುವಳಿದಾರರಿಗೆ, ವಿಧವೆಯರಿಗೆ, ಅಪ್ರಾಪ್ತ ವಯಸ್ಕರಿಗೆ ಅಂಗವಿಕಲರಿಗೆ ಮತ್ತು ಮಾನಸಿಕ ದುರ್ಬಲ ಇರುವವರಿಗೆ ಮತ್ತು ಮಹಿಳೆಯರಿಗೆ ತುಂಬಾ ಕಷ್ಟವಾಗುತ್ತದೆ ಎಂದು ಹೇಳಿದರು. ನನಗೂ ಸಹ ಅವು ಅಂತಹವರಿಗೆ ಬಹಳ ಕಷ್ಟವಾಗುತ್ತದೆ ಎಂದು ಅನಿಸುತ್ತದೆ. ಕಾನೂನಿನ ಅರಿವು ನಮಗೆ ಇತ್ತು. ಆದರೂ ಈ ಕಾನೂನಿಗೆ ಅನುಮೋದನೆ ಕೊಟ್ಟಂಥ ಕಾಲದಲ್ಲಿ ಈ ಬಗ್ಗೆ ಒಂದು ಪರಿಹಾರ ಮಾಡಲಿಲ್ಲ. ಇವರ ಬಗ್ಗೆ ನನಗೆ ಅನುಕಂಪ ಇದೆ. ಆದುದರಿಂದ ಕಾನೂನಿನ ಚೌಕಟ್ಟಿನೊಳಗೆ ಅವರಿಗೆ ಏನು ಸಹಾಯ ಮಾಡಿಕೊಡಬೇಕೋ ಅದನ್ನು ಮಾಡಿಕೊಡಬೇಕು ಎಂದು ಕೇಳುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಅವರು ದಾವಾ ಮಾಡುವ ಹಾಗಿಲ್ಲ ಎಂದು ಹೇಳಿದರು. ಆದುದರಿಂದ ಇದಕ್ಕೆ ನಾನು ಹೇಳುವುದು ಏನೆಂದರೆ ಅವರಿಗೆ ಕೊಡಬೇಕಾದಂಥ ಪರಿಹಾರವನ್ನು ಏಕಗಂಟಿನಿಂದ ಕೊಡಬೇಕು ಅಷ್ಟೇ ಅಲ್ಲ ಅವರ ಪುನರ್‌ನಿವೇಶನಕ್ಕೆ ಬೇಕಾದಂಥ ಜಮೀನುಗಳನ್ನು ಕೊಡಬೇಕು. ದೊಡ್ಡ ಹಿಡುವಳಿದಾರರಿಂದ ಭೂಮಾಲೀಕರಿಂದ ಆ ಜಮೀನನ್ನು ವಶಪಡಿಸಿಕೊಂಡರೆ ಅಂತಹ ಜಮೀನಿನಲ್ಲಿ ಅವರಿಗೆ ಪುನರ್‌ನಿವೇಶನ ಮಾಡಬಹುದು. ಮತ್ತು ಅವರಿಗೆ ಬೇರೆ ಯೋಜನೆಗಳಲ್ಲೂ ಸಹಾಯ ಮಾಡಬೇಕು. ಅವರ ಮಕ್ಕಳು ಪ್ರಾಪ್ತವಯಸ್ಕರಾಗಿದ್ದರೆ ಅವರಿಗೆ ಉದ್ಯಮಗಳನ್ನು ಒದಗಿಸಿ ಕೊಡಬೇಕು ಮತ್ತು ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಬೇಕಾದ ಸಹಾಯವನ್ನು ವಿಶೇಷ ಸಹಾಯವನ್ನು ಸರ್ಕಾರದವರು ಮಾಡಿಕೊಡಬೇಕು. ಯಾರು ಈ ಶಾಸನದಿಂದ ಅನಾನುಕೂಲವಾಗಿ ನಷ್ಟಕ್ಕೆ ಗುರಿಯಾಗಿರುತ್ತಾರೋ ಅಂಥಾವರನ್ನು ಉತ್ತಮ ನಾಗರೀಕರನ್ನಾಗಿ ಮಾಡುವುದಕ್ಕೆ ಏನು ಅನುಕೂಲತೆಗಳು ಬೇಕೋ ಅದನ್ನು ಮಾಡಿಕೊಡಬೇಕು; ಮತ್ತು ಗೇಣಿದಾರರ ಮತ್ತು ಬಡವರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಅವರ ಅಭಿವೃದ್ಧಿ ಮಾಡುವುದಕ್ಕೆ ಏನು ಕಾನೂನು ಮಾಡಬೇಕೋ ಆ ಕಾನೂನನ್ನು ರೂಪಿಸಿ, ಅವರನ್ನು ಉತ್ತಮ ನಾಗರೀಕರನ್ನಾಗಿ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆಗಳ ಬಗ್ಗೆ ಒಂದು ಮಾತು ಹೇಳುತ್ತೇನೆ. ಹಿಂದೆ ನಮ್ಮ ರಾಜ್ಯದಲ್ಲಿ ದಿವಾನ್‌ರಾಗಿದ್ದಂಥ ಕೀರ್ತಿಶೇಷರಾದ ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರು, ಸರ್ ಮಿರ್ಜಾ ಇಸ್ಮಾಯಿಲ್‌ರವರು ಇವರೆಲ್ಲಾ ಸಮತಾವಾದ ಕಂಡಿರಲಿಲ್ಲವೇ ? ಏಕೆಂದರೆ ಅವರು ದೂರದೃಷ್ಟಿಯುನ್ನಿಟ್ಟುಕೊಂಡು ಕೆಲಸ ಮಾಡುತ್ತಿದ್ದರು. ನಮ್ಮ ರಾಜ್ಯ ಅಭಿವೃದ್ಧಿ ಹೊಂದಬೇಕಾದರೆ ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಕೈಗಾರಿಕೆಗಳು ಆಗಬೇಕು ಎಂದು ತಿಳಿದಿದ್ದರು. ಅದು ಖಾಸಗೀ ಬಂಡವಾಳದಲ್ಲಿಯೇ ಆಗಲಿ ಅಥವಾ ಸರ್ಕಾರದ ಮಾಲೀಕತ್ವದ್ದೇ ಆಗಿರಲಿ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ದೇಶದ ಸಂಪನ್ಮೂಲವನ್ನು ಬಳಸುವ ದೃಷ್ಟಿಯಿಂದ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಎಂದು ಅವರು ಯೋಚನೆ ಮಾಡಿದ್ದರು. ಈವೊತ್ತು ಏನು ನಡೆಯುತ್ತಾ ಇದೆ ಎಂದರೆ ಸರ್ಕಾರದ ಸ್ವಾಧೀನದಲ್ಲಿರತಕ್ಕಂಥಾ ಕೈಗಾರಿಕೆಗಳನ್ನು ಬೇರೆಯವರ ಕೈಗೆ ಕೊಡುತ್ತಿದ್ದೀರಲ್ಲಾ, ಇದು ಬಹಳ ವಿಷಾದನೀಯವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

12 Noon

ನಮ್ಮ ರಾಜ್ಯದವರೇ ಕೇಂದ್ರದಲ್ಲೂ ಮಂತ್ರಿಗಳಾಗಿದ್ದಾರೆ. ಶ್ರೀ ಟಿ. ಎ. ಪೈರವರು ಕೇಂದ್ರದಲ್ಲಿ ಕೈಗಾರಿಕಾ ಮಂತ್ರಿಗಳಾಗಿದ್ದಾರೆ. ಈಚೆಗೆ ಇವರು ಒಂದು ರೀತಿಯಾದ ಹೊಸ ಸಿದ್ಧಾಂತವನ್ನೇ ತರುತ್ತಿದ್ದಾರೆ. ಅದು ಎಲ್ಲೆಲ್ಲೂ ಜಾಯಿಂಟ್ ಸೆಕ್ಟರ್ ಕೈಗಾರಿಕೆಯನ್ನೇ ತರಬೇಕು ಎಂದು. ಇದರಲ್ಲಿ ಅವರ ಅಧಿಕಾರಿಗಳೂ ಸರಕಾರದ ಕೈಗಾರಿಕೆಯವರೂ ಸೇರಿಕೊಂಡು ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಕಾರ್ಮಿಕರು ತ್ಯಾಗಮಾಡಿ ಕೆಲಸಮಾಡಿ ಚೆನ್ನಾಗಿರುವ ಸರಕಾರದ ಕಾರ್ಖಾನೆಗಳಲ್ಲಿ ಸರಕಾರದ ಅಧಿಕಾರಿಗಳೂ ಚೆನ್ನಾಗಿ ಕೆಲಸ ಮಾಡುತ್ತಿದ್ದರೂ ಕೂಡ ಕೆಲವು ಕಡೆ ಲಾಭದಾಯಕವಾಗಿ ಕೆಲಸಮಾಡುತ್ತಿಲ್ಲ ಎಂದು ಇದನ್ನು ಮತ್ತೆ ಬಂಡವಾಳಷಾಹಿಯವರ ಕೈಗೆ ಕೊಡಬೇಕೆನ್ನುವ ಪ್ರಯತ್ನಗಳೂ ನಡೆಯುತ್ತಿವೆ. ಆ ರೀತಿ ಮಾಡಲು ಎಂದಿಗೂ ಸಾಧ್ಯವಿಲ್ಲ. ಇದು ಸರಕಾರಕ್ಕೂ ಮನವರಿಕೆಯಾಗಿದೆ. ಇದರ ಬಗ್ಗೆ ಕಾರ್ಮಿಕರಿಗೂ ಕೈಗಾರಿಕೆಗಳ ಕ್ಷೇತ್ರದಲ್ಲಿರುವವರಿಗೂ ಅನೇಕ ಬಾರಿ ಹೊಡೆದಾಟಗಳಾಗಿವೆ. ಶ್ರೀ ಟಿ.ಎ. ಪೈಯವರು ಹೇಳುವಂತೆ ಜಾಯಿಂಟ್ ಸೆಕ್ಟರಿನಲ್ಲಿ ಶೇಕಡಾ 49 ರಷ್ಟು ಇರಬಹುದು. ಹಾಗಿದ್ದರೂ ಇವನ್ನು ಸರಕಾರದ ಆಡಳಿತದಿಂದ ತಪ್ಪಿಸಿ ಎಲ್ಲ ಕಡೆಯಲ್ಲೂ ಇರುವ ಸರಕಾರದ ಕೈಗಾರಿಕೆಗಳಲ್ಲಿ ಜಾಯಿಂಟ್ ಸೆಕ್ಟರನ್ನು ತರಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ಶ್ರೀ ಪೈಯವರು ಯಾವ ರೀತಿ

ಅನುಸರಿಸಬೇಕೆಂದಿದ್ದಾರೋ ಅದೇ ನೀತಿಯನ್ನೂ ನಮ್ಮ ರಾಜ್ಯದ ಕೈಗಾರಿಕಾ ಮಂತ್ರಿಗಳಾದ ಶ್ರೀಮಾನ್ ಎಸ್. ಎಂ. ಕೃಷ್ಣಾರವರೂ ಕೂಡ ಅನುಸರಿಸಿ ನಮ್ಮಲ್ಲಿರುವ ಕೈಗಾರಿಕೆಗಳನ್ನು ಬಂಡವಾಳಷಾಹಿಯವರ ಕೈಗೆ ಕೊಡಬೇಂಬ ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಪೈರವರ ಮಾರ್ಗವನ್ನೇ ಇವರೂ ಇಲ್ಲಿ ಅನುಸರಿಸುತ್ತಿದ್ದಾರೆ. ಜಾಯಿಂಟ್ ಸೆಕ್ಟರು ಮಾಡಿ ಇದರಲ್ಲಿ ಖಾಸಗಿಯವರೂ ಪಾಲು ಪಡೆಯಲು ಅವಕಾಶ ಮಾಡಿಕೊಟ್ಟಿದ್ದಾರೆ. ಆದರ ನಮ್ಮ ಕರ್ನಾಟಕದ ಜನತೆ ಇದನ್ನ ಮಾಡಲು ಖಂಡಿತ ಅವಕಾಶ ಕೊಡುವುದಿಲ್ಲ. ಈಚೆಗೆ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಕೃಷ್ಣಾರವರು ಕರ್ಣಾಟಕ ಸ್ಕೂಟರ್ಸ್ ಕಂಪನಿಯನ್ನು ಮಾಡುವಾಗ ಇದರಲ್ಲಿ ಜಾಯಿಂಟ್ ಸೆಕ್ಟರು ಇರಬೇಕೆಂದು ಶ್ರೀ ಪೈರವರ ನೀತಿಯನ್ನೇ ಇದರಲ್ಲೂ ಅನುಸರಿಸುತ್ತಿದ್ದಾರೆ. ಆದರೆ ಇದು ಸರಿಯಲ್ಲ. ನಮ್ಮ ರಾಜ್ಯದ ಸರಕಾರದ ಕೈಗಾರಿಕೆಗಳಲ್ಲಿ ಜಾಯಿಂಟು ಸೆಕ್ಟರು ನೀತಿಯನ್ನು ತರುವುದು ಬೇಡ. ಇದಕ್ಕೆ ಕರ್ಣಾಟಕ ಜನತೆ ಖಂಡಿತ ಒಪ್ಪುವುದಿಲ್ಲ. ಇದಕ್ಕೆ ತಕ್ಕ ಪ್ರತಿಭಟನೆಯನ್ನು ನಮ್ಮ ಜನ ಸೂಚಿಸುತ್ತಾರೆ ಎಂದು ಹೇಳಲು ಇಲ್ಲಿ ಇಷ್ಟಪಡುತ್ತೇನೆ. ಕೆಲವು ಕೈಗಾರಿಕೆಗಳಲ್ಲಿ ಎಂದರೆ ನಮ್ಮ ಬೆಂಗಳೂರಿನಲ್ಲಿರುವ ಹೆಚ್. ಎಂ. ಟಿ. ಕೈಗಾರಿಕೆಯನ್ನು ನೋಡಬಹುದು ಲೋಕದಲ್ಲೇ ನಮ್ಮ ಹೆಚ್. ಎಂ. ಟಿ. ಕೈಗಾರಿಕೆ ಬಹಳ ವಿಶ್ವವಿಖ್ಯಾತವಾಗಿದೆ ಮತ್ತು ಇಲ್ಲಿ ತಯಾರಾಗುತ್ತಿರುವ ಗಡಿಯಾರಗಳು ಹಾಗೂ ಮೆಷಿನರಿಗಳು ಬೇಕಾದಷ್ಟು ಹೊರದೇಶಗಳಿಗೆ ರಫ್ತಾಗುತ್ತಿವೆ, ಮತ್ತು ಇಲ್ಲಿನ ಕಾರ್ಮಿಕರೂ ಕೂಡ ಬಹು ಉತ್ಸಾಹದಿಂದ ಕೆಲಸ ಮಾಡಿ ಹೆಚ್ಚು ಉತ್ಪಾದನೆಯನ್ನು ಮಾಡಲು ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಇದರಲ್ಲಿರುವ ಮ್ಯಾನೇಜ್‌ಮೆಂಟಿನವರಿಗೆ ಇಲ್ಲಿರುವ ಕಾರ್ಮಿಕರ ಬಗ್ಗೆ ಸರಿಯಾದ ಭಾವನೆ ಇಲ್ಲ. ಸರಕಾರದ ಗುತ್ತೆದಾರಿ ಪಡೆದಿರುವ ಕೈಗಾರಿಕೆ ಎಂದು ತಮ್ಮ ಕೈಯ್ಯಲ್ಲಿ ಎಲ್ಲ ಕಾರ್ಮಿಕರೂ ಇದ್ದಾರೆ ಅವರ ಶಕ್ತಿಯನ್ನು ಇವರ ಮೇಲೆ ಪ್ರಯೋಗ ಮಾಡುತ್ತಿದ್ದಾರೆ. ಇಂತಹ ಕೈಗಾರಿಕಾ ನೀತಿಯಿಂದ ಸರಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ನಿಮ್ಮ ಕೈಗಾರಿಕಾ ನೀತಿ ಸರಿಯಾಗಿಲ್ಲ. ಇದರ ಬಗ್ಗೆ ಒಂದು ವಿಚಾರ ತಮ್ಮ ಗಮನಕ್ಕೆ ತರಬೇಕಾಗಿದೆ. ಇದೇ ಹೆಚ್. ಎಂ. ಟಿ. ಕಾರ್ಮಿಕರ ಬಗ್ಗೆ ನಮ್ಮ ಸರಕಾರದ ಅಧಿಕಾರಿಗಳು 1970ರಲ್ಲಿ ಈ ಮಂತ್ರಿಮಂಡಲ ಬಂದಾಗಿನಿಂದ 25-10-1973ರವರೆಗೆ ಸುಮಾರು 30 ಕೇಸುಗಳನ್ನು ಕಾರ್ಮಿಕರ ಮೇಲೆ ಹೂಡಿದ್ದಾರು. ಇದರಲ್ಲಿ ಸುಮಾರು 20 ಕೇಸುಗಳನ್ನು ಕೋರ್ಟಿನಲ್ಲಿ ಬಿಡುಗಡೆ ಮಾಡಿದರು. ಇಲ್ಲಿರುವ ಅಧಿಕಾರಿಗಳು ವಿನಾ ಕಾರಣ ಪ್ರಚೋದನೆಮಾಡಿ ಕಾರ್ಮಿಕರ ಮೇಲೆ ಧಾಳಿಮಾಡಿಸಿ, ಬಸ್ಸುಗಳಲ್ಲಿ ಹೋಗುತ್ತಿದ್ದರೆ ಅವರ ಮೇಲೆ ವಿನಾ ಕಾರಣ ಧಾಳಿಮಾಡಿ ಕೇಸುಗಳನ್ನು ಹಾಕಲು ಪ್ರಯತ್ನ ಮಾಡಿದರೂ ಅಂತಹ ಕೇಸುಗಳು ಕೋರ್ಟಿನಲ್ಲಿ ಊರ್ಜಿತವಾಗಲಿಲ್ಲ. 20 ಕೇಸುಗಳಲ್ಲಿ ಅಕ್ವಿಟ್ ಆಗಿವೆ. ಹೀಗೆ 30 ಸುಳ್ಳು ಕೇಸುಗಳಲ್ಲಿ 20 ಕೇಸುಗಳು ಬಿಡುಗಡೆಯಾಗಿವೆ ಎಂದರೆ ಇದನ್ನು ಸರಕಾರವೇ ಅರ್ಥಮಾಡಿಕೊಳ್ಳಬಹುದು. ಇಂತಹ ನೀತಿ ನೋಡಿ ನಮಗೆ ತುಂಬಾ ವ್ಯಸನವಾಗುತ್ತದೆ. ಇಲ್ಲದ ಪ್ರಚೋದನೆಗಳಿಗೆ ಒಳಗಾಗಿ ಕಾರ್ಮಿಕರ ಮೇಲೆ ದೌರ್ಜನ್ಯಗಳನ್ನು ಮಾಡುವುದನ್ನು ಇನ್ನು ಮೇಲಾದರೂ ಸರಕಾರ ಕೈಬಿಡುವುದು ಒಳ್ಳೆಯದು. ಇದಕ್ಕೆ ನಾವು ತೀವ್ರವಾದ ಪ್ರತಿಭಟನೆಯನ್ನು ಸೂಚಿಸಬೇಕಾಗುತ್ತದೆ. ಸರಕಾರದ ಪೋಲೀಸರು ಮಾಡುತ್ತಿರುವ ದೌರ್ಜನ್ಯಗಳು ಬಹಳವಾಗಿವೆ, ಇಂತಹ ಹಲವಾರು ವಿಚಾರಗಳು ದಿನವೂ ಪತ್ರಿಕೆಗಳಲ್ಲಿ ಬರುತ್ತಿವೆ. ಈಗ್ಗೆ ಕೆಲವು ದಿನಗಳ ಹಿಂದೆ ಮಂಗಳೂರಿನಲ್ಲಿ ಒಬ್ಬರು ಮಂತ್ರಿಗಳು ಪ್ರವಾಸ ಬಂದಿದ್ದರು. ಅಲ್ಲಿಗೆ ಅಂದು ನಮ್ಮ ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್‌ರವರೂ ಹೋಗಿದ್ದರು. ಅಲ್ಲಿಗೆ ಅವರಿಗೆ ಒಂದು ಟೆಲಿಫೋನು ಬಂತು. ಆದರೆ ಆ ಟೆಲಿಫೋನನ್ನು ನಮ್ಮ ಮಂತ್ರಿಗಳು ತೆಗೆದುಕೊಂಡು ಎಂ. ಎಸ್. ಕೃಷ್ಣನ್ ತಾನೇ ಎಂದು ಹೇಳಿ ಕದ್ದು ಕೇಳಿದರೆಂದು ವರದಿಯಾಗಿದೆ. ನಮ್ಮ ಮಂತ್ರಿಗಳು ಹೀಗೆ ಇನ್ನೊಬ್ಬರ ಫೋನನ್ನು ಟ್ಯಾಪ್ ಮಾಡುವುದು ನೋಡಿ ನಮಗೆ ತುಂಬಾ ವ್ಯಸನವಾಗುತ್ತದೆ. ಇಂತಹ ಅವ್ಯವಹಾರಗಳು ಅನೇಕವಾಗಿ ನಡೆಯುತ್ತಿವೆ. ಇಲ್ಲೂ ಕೂಡ ಶಾಸಕರಿಗೆ ಕೆಲವು ವೇಳೆ ಫೋನು ಬಂದರೆ ಅವನ್ನು ಕದ್ದು ಕೇಳುವ ಸಂಪ್ರದಾಯವೂ ಇದೆ. ಇಂತಹ ಅವ್ಯವಹಾರಗಳನ್ನು ನಾವು ತೀವ್ರವಾಗಿ ಪ್ರತಿಭಟಿಸಬೇಕಾಗುತ್ತದೆ. ಇದರ ಬಗ್ಗೆ ವಿವರಗಳನ್ನು ತಿಳಿಸಬಹುದು. ಅದನ್ನು ಸಕಾಲದಲ್ಲಿ ಸರಿಯಾದ ವೇಳೆಯಲ್ಲಿ ತಿಳಿಸುತ್ತೇನೆ.

ಇನ್ನು ನಮ್ಮ ರಾಜ್ಯಪಾಲರು ಮೀಸಾದನ್ವಯ ಕೆಲವರು ಬಂಧಿಸಿರುವುದರ ಬಗ್ಗೆ ಒಂದು ಬಿಲ್ಲನ್ನು ಅನುಮೋದಿಸಬೇಕೆಂದು ಹೇಳಿಕೊಂಡಿದ್ದಾರೆ. ಅದರೆ ಯಾರನ್ನು ಮೀಸಾದನ್ವಯ ಬಂಧಿಸಿದ್ದಾರೋ ಅದರಲ್ಲಿ ಕೆಲವರನ್ನು ಮಾತ್ರ ಹಿಡಿದಿದ್ದಾರೆ. ಆದರೆ ಇನ್ನೂ ಬಹಳ ಜನರು ಹೊರಗೇ ಉಳಿದಿದ್ದಾರೆ. ಅಷ್ಟೇ ಅಲ್ಲ ಯಾರು ಒಳಗೆ ಹೋಗಬೇಕಾಗಿತ್ತೋ ಅವರು ಹೋಗಿಲ್ಲ. ಅಂತಹವರಿಗೆ ಉನ್ನತ ಪದವಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಯಾರಿಗೆ ಶಿಕ್ಷೆಯಾಗಬೇಕೋ ಅಂತ

ಹವರಿಗೆ ಯಾವುದೂ ಆಗಲಿಲ್ಲ. ನಮಗೂ ಇದರ ಬಗ್ಗೆ ಎಲ್ಲ ವಿವರಗಳೂ ತಿಳಿದಿವೆ. ಆದರೆ ನಾವು ಸರಕಾರಕ್ಕೆ ಇನ್ನೂ ಸಲ್ಪ ಸಮಯ ಕೊಟ್ಟು ನೋಡುತ್ತೇವೆ. ಅವರಾಗಿಯೇ ಸರಿಯಾಗಿ ಹಿಡಿಯಲಿ ಎಂದು ನಾವು ಕೂಡ ಇದೇ ಸದನದಲ್ಲಿ ಸಕಾಲದಲ್ಲಿ ಇವೆಲ್ಲವನ್ನೂ ಬಹಿರಂಗಪಡಿಸುತ್ತೇವೆ.

ಇನ್ನು ಪತ್ರಿಕೆಗಳಲ್ಲಿ ಹರಿಜನರು ಹಾಗೂ ಗಿರಿಜನರ ಮೇಲೆ ಅಲ್ಲಲ್ಲಿ ದೌರ್ಜನ್ಯಗಳು ಆಗುತ್ತಿರುವುದರ ಬಗ್ಗೆ ಸುದ್ದಿಗಳು ಬರುತ್ತಿವೆ. ಕಳೆದ ಒಂದು ವರ್ಷದಲ್ಲಿ ಭದ್ರಾವತಿಯಲ್ಲಿ ಇಬ್ಬರು ವಿದ್ಯಾರ್ಥಿಗಳ ಕೊಲೆಯಾಯಿತು, ಚಿಕ್ಕಮಗಳೂರಿನಲ್ಲಿ 1[illegible] ಜನ ಹರಿಜನರನ್ನು ಕೊಂದು ಹಾಕಿದರು, ಹಾಗೂ ಇನ್ನಿತರ ಕಡೆಗಳಲ್ಲಿ ಹರಿಜನರು ಪೋಲಿಸರ ದೌರ್ಜನ್ಯಕ್ಕೆ ಬಲಿಯಾದರು ಎಂದು ಪತ್ರಿಕೆಗಳಲ್ಲಿ ಬರುತ್ತಲೇ ಇವೆ. ಇದರ ಬಗ್ಗೆ ಸರಕಾರ ಸರಿಯಾಗಿ ಪರಿಶೀಲನೆ ಮಾಡಿ ಇಂತಹ ದೌರ್ಜನ್ಯಗಳನ್ನು ತಡೆಗಟ್ಟಬೇಕೆಂದು ಸರಕಾರದಲ್ಲಿ ಒತ್ತಾಯ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ರಾಮರಾಜ್ಯ ಮಾಡಬೇಕೆಂದು ಹೇಳುತ್ತಾರೆ. ಕೇಂದ್ರ ಸರಕಾರ ಈಚೆಗೆ ಹೊರಡಿಸಿರುವ ಒಂದು ಸರ್ಕ್ಯುಲರು ಪ್ರಕಾರ ನೋಡಿದರೆ ನಮ್ಮ ರಾಜ್ಯದಲ್ಲಿ ಪ್ರತಿ 15 ದಿನಕ್ಕೊಂದು ಸಾರಿ ಒಂದೊಂದು ಭಾಗದಲ್ಲಿ ಒಬ್ಬೊಬ್ಬರು ಹರಿಜನರು ಇಲ್ಲವೇ ಗಿರಿಜನರ ಕೊಲೆಯಾಗುತ್ತಲೇ ಇದೆ. ಇದೇ ರೀತಿ ಆಂಧ್ರದಲ್ಲಿ ಹಾಗೂ ಇನ್ನಿತರ ರಾಜ್ಯಗಳಲ್ಲೂ ಕೊಲೆಗಳಾಗುತ್ತಿವೆ. ದೌರ್ಜನ್ಯವೆಲ್ಲಾ ಪ್ರತಿ ಹಳ್ಳಿಯಲ್ಲಿರುವ ಹರಿಜನರು ಇಲ್ಲವೇ ಗಿರಿಜನರ ಕೊಲೆಗಳೇ ಬಹುತೇಕ ಆಗುತ್ತಿವೆ. ಇವರಿಗೆಲ್ಲಾ ರಕ್ಷಣೆ ಕೊಡುತ್ತೇವೆ, ಮನೆ ಕೊಡುತ್ತೇವೆ ಎಂದು ಬಾಯಲ್ಲಿ ಹೇಳುತ್ತಾರೆಯೇ ಹೊರತು ಇಂತಹ ಜನರ ಮೇಲೆ ದಬ್ಬಾಳಿಕೆ ನಡೆಸಿ ಕೊಲೆಯಾಗುತ್ತಿರುವುದನ್ನು ತಪ್ಪಿಸಲು ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಇದನ್ನು ಸರಕಾರ ಆಗಲಾದರೂ ಸರಿಪಡಿಸಬೇಕೆಂದು ಒತ್ತಾಯ ಮಾಡುತ್ತೇನೆ ಮತ್ತು ಎಲ್ಲರಿಗೂ ನ್ಯಾಯವನ್ನು ಸರಕಾರ ಒದಗಿಸಿಕೊಡಬೇಕೆಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ.ಎಂ. ಥಂಗಿ (ಜಮಖಂಡಿ) —ಮಾನ್ಯ ಉಪಸಭಾಧ್ಯಕ್ಷರೇ, ಮಾನ್ಯ ಕೆ. ಪ್ರಭಾಕರ್ ಅವರು ರಾಜ್ಯಪಾಲರ ವಂದನಾರ್ಪಣೆಯ ಬಗ್ಗೆ ಸೂಚಿಸಿದ ನಿರ್ಣಯವನ್ನು ತುಂಬಾ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ 1972ನೇ ಇಸವಿಯಲ್ಲಿ ಹೊಸ ಚುನಾವಣೆಯಾಗಿ ನಮ್ಮ ಮಂತ್ರಿಮಂಡಲ ಅಧಿಕಾರಕ್ಕೆ ಬಂದ ನಂತರ ದುರ್ಬಲವರ್ಗಗಳಿಗೆ ಎಲೆಕ್ಷನ್ ಸಮಯದಲ್ಲಿ ನಮ್ಮ ಪಾರ್ಟಿ ಪರವಾಗಿ ಕೊಟ್ಟಂತಹ ಆಶ್ವಾಸನೆಗಳನ್ನು ಪಾಲಿಸುವುದಕ್ಕೆ ಹತ್ತಿರುವುದು ತುಂಬಾ ಸಂತೋಷದ ಸಂಗತಿ. ಬಡಜನಗಳಿಗೆ ಮನೆ ಇಲ್ಲದವರಿಗೆ ಮನೆ, ಭೂಮಿ ಇಲ್ಲದವರಿಗೆ ಭೂಮಿ, ಸೈಟು ಇಲ್ಲದವರಿಗೆ ಸೈಟು, ಕೊಡುತ್ತೇವೆ ಎಂದು ನಮ್ಮ ಸರ್ಕಾರದವರು ಎಲೆಕ್ಷನ್ ಟೈಮ್‌ನಲ್ಲಿ ಕೊಟ್ಟ ವಚನಗಳನ್ನು ಪರಿಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಇದು ಸಂತೋಷದ ಸಂಗತಿ. ಜನತಾ ಗೃಹನಿರ್ಮಾಣ ಯೋಜನೆಯಲ್ಲಿ ಮನೆಗಳನ್ನು ಕಟ್ಟಲು ಕಳೆದ ವರ್ಷ 14 ಸಾವಿರ ಮನೆಗಳನ್ನು ಕಟ್ಟಲು ಮಂಜೂರಾತಿಯನ್ನು ಕೊಟ್ಟಿದ್ದಾರೆ. ಈ ವರ್ಷ 20 ಸಾವಿರ ಮನೆಗಳನ್ನು ಕಟ್ಟಲು ಮಂಜೂರಾತಿ ಕೊಟ್ಟಿದ್ದಾರೆ. ನಿವೇಶನ ಇಲ್ಲದವರಿಗೆ ನಿವೇಶನವನ್ನು ಕೊಡಲು ಎರಡು ಲಕ್ಷ ನಿವೇಶನಗಳನ್ನು ಹಂಚುವುದಕ್ಕೋಸ್ಕರ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಇದು ನಾವು ಜನಗಳಿಗೆ ಕೊಟ್ಟಂತಹ ವಚನವನ್ನು ಪರಿಪೂರ್ಣಮಾಡುವ ದೃಷ್ಟಿಯಿಂದ ನಮ್ಮ ಸರ್ಕಾರ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಹತ್ತಿದೆ. ದುರ್ದೈವದಿಂದ ಬಡವರಿಗೆ ಮತ್ತು ದುರ್ಬಲವರ್ಗದವರಿಗೆ ಸಾಕಷ್ಟು ಸಹಾಯ ಸಿಕ್ಕದಿರುವುದು ತುಂಬಾ ವ್ಯಸನವಾಗುತ್ತದೆ.

ಭೂಸುಧಾರಣಾ ಕಾಯಿದೆಯನ್ನು ತಿದ್ದುಪಡಿಮಾಡಿ ಭೂಹೀನರಿಗೆ ಭೂಮಿಯನ್ನು ಹಂಚುವುದಕ್ಕಾಗಿ ಸರ್ಕಾರದವರು ಭೂಪಂಚಾಯಿತಿಗಳನ್ನು ನೇಮಕಮಾಡಿ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಭೂಪಂಚಾಯಿತಿಗಳವರಿಗೆ ಸಾಕಷ್ಟು ಅಧಿಕಾರಗಳಿಲ್ಲ. ಅವರಿಗೆ ಗೇಣಿದಾರರಿಗೆ ಟೆನೆನ್ಸಿ ಬಗ್ಗೆ ಇದ್ದ ವಾದವನ್ನು ನಿರ್ಣಯ ಮಾಡುವ ಅಧಿಕಾರ ಇದೆ. ಅದರಂತೆ ಭೂಪರಿಮಿತಿಗಿಂತಲೂ ಹೆಚ್ಚಿನ ಭೂಮಿಯನ್ನು ವಿತರಣೆಮಾಡುವ ಅಧಿಕಾರವೂ ಇದೆ, ಆದರೆ ಭೂಮಾಲೀಕರು ಭೂಸುಧಾರಣೆ ಕಾಯಿದೆ ಮೇರೆಗೆ ಭೂಪರಿಮಿತಿಗಿಂತಲೂ ಹೆಚ್ಚಿನ ಭೂಮಿಯನ್ನು ಬೇರೆಯವರ ಹೆಸರಿನಿಂದ ವರ್ಗಾಯಿಸಿ ರೆವಿನ್ಯೂ ಅಧಿಕಾರಿಗಳ ಜೊತೆಗೂಡಿ ಬಂಧುಗಳ ಹೆಸರಿಗೆ ದಾಖಲು ಮಾಡಿಕೊಂಡಿದ್ದಾರೆ. ಈ ಬೋಗಸ್ ಎಂಟ್ರಿಗಳ ಬಗ್ಗೆ ತನಿಖೆಮಾಡಿ ದೊಡ್ಡ ಜಮೀನ್ದಾರರ ಹೆಸರಿನಲ್ಲಿರುವ ಭೂಮಿಯನ್ನು ಭೂಪರಿಮಿತಿಗಿಂತಲೂ ಹೆಚ್ಚಾಗಿರುತ್ತವೆ ಎಂದು ನಿರ್ಣಯಿಸುವ ಅಧಿಕಾರವು ತಹಶೀಲ್ದಾರರಿಗೆ ಇರುತ್ತದೆ. ಆದ್ದರಿಂದ ಭೂಪಂಚಾಯಿತಿಗಿಂತಲೂ

ಹೆಚ್ಚಿನ ಅಧಿಕಾರಗಳು ತಹಶೀಲ್ದಾರರಿಗೆ ಇಲ್ಲವೇ ವಿಶೇಷ ತಹಶೀಲ್ದಾರರಿಗೆ ಇರುತ್ತದೆ. ಆದ್ದರಿಂದ ಸರ್ಕಾರದವರು ದಕ್ಷ ಮತ್ತು ಪ್ರಾಮಾಣಿಕ ತಹಶೀಲ್ದಾರರನ್ನು ಈ ವಿಷಯದ ಬಗ್ಗೆ ನೇಮಿಸಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಹಾಗೆ ಮಾಡದೆ ಹೋದಲ್ಲಿ ಹರಿಜನಗಿರಿಜನರಿಗೆ ಮತ್ತು ಭೂಹೀನರಿಗೆ ಯಾವುದು ಭೂಮಿಯೂ ದೊರೆಯುವುದಿಲ್ಲ. ಆದ್ದರಿಂದ ಸರ್ಕಾರದವರು ಇಂಥ ತಹಶೀಲ್ದಾರರನ್ನು ಹತೋಟಿಯಲ್ಲಿಡಲು ಯೋಗ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಬಯಸುತ್ತೇನೆ. ಭೂಸುಧಾರಣೆ ಕಾಯಿದೆ ಕಲಮು 48 ರ ಪ್ರಕಾರ ಜಮೀನುಗಳಲ್ಲಿ ಹಿತಾಸಕ್ತಿ ಇರುವಂತಹವರಿಗೆ ನೋಟೀಸ್ ತೆಗೆದು ನಿರ್ಣಯ ಮಾಡಬೇಕೆಂದು ವಿಧಾನ ಇದೆ. ಆಯಾ ತಾಲ್ಲೂಕುಗಳಲ್ಲಿ ಇರುವಂಥಾ ಹರಿಜನ ಗಿರಿಜನ ಮತ್ತು ಭೂಹೀನರಿಗೆ ಇಂಥಾ ಜಮೀನುಗಳಲ್ಲಿ ಆಸಕ್ತಿ ಉಳ್ಳವರೆಂದು ಸರ್ಕಾರದವರು ನೋಟಿಫಿಕೇಷನ್ ತೆಗೆದು ಸ್ಪಷ್ಟಪಡಿಸಬೇಕು. ಮತ್ತು ಇಂಥಾ ಭೂಹೀನರು ಕಾಯಿದೆ ಬದ್ಧವಾದ ಸಂಘಗಳನ್ನು ಕಟ್ಟಿಕೊಂಡು ತಾಲ್ಲೂಕು ತಹಶೀಲ್ದಾರರ ಕಡೆ ಹೋಗಿ ದೊಡ್ಡ ಭೂಮಾಲೀಕರು ಭೂಸುಧಾರಣೆ ಕಾಯಿದೆಯ ಕಲಮುಗಳನ್ನು ತಪ್ಪಿಸಲು ಬೇರೆ ಯಾರ ಹೆಸರಿನಿಂದ ಅಕ್ರಮವಾಗಿ ವರ್ಗಾವಣೆ ಮಾಡಿದ್ದಾರೆಂದೂ ತೋರಿಸಿಕೊಡಬೇಕೆಂದೂ ಮತ್ತು ಇಂಥಾ ದುರ್ಬಲರಾದ ಭೂಹೀನರಿಗೆ ಸರ್ಕಾರದವರು ವಕೀಲರನ್ನು ನೇಮಿಸಿ ಅಂಥವರಿಗೆ ಸಹಾಯ ಮಾಡಬೇಕೆಂದೂ ನಾನು ಸೂಚಿಸುತ್ತೇನೆ.

ತಹಶೀಲ್ದಾರರ ಕಡೆಹೋಗಿ ತಮ್ಮ ವಾದವನ್ನು ತಿಳಿಸಲು ಮತ್ತು ವಕೀಲರನ್ನು ನೇಮಿಸಲು ಯಾವ ಬಗೆಯ ಅಭ್ಯಂತರವಿಲ್ಲ ಈ ಮಾದರಿಯ ಕ್ರಮ ಕೈಗೊಂಡರೆ ಮಾತ್ರ ಪರಮಾವಧಿ ಹಿಡುವಳಿಗಿಂತಲೂ ಹೆಚ್ಚಿನ ಭೂಮಿಯು ಸರ್ಕಾರದ ವಶಕ್ಕೆ ಬರುತ್ತದೆ. ಮತ್ತು ಅವುಗಳನ್ನು ಭೂಹೀನರಿಗೆ ಹಂಚಲು ಸಾಧ್ಯವಾಗುತ್ತದೆ.

ಬಡತನ ರೇಖೆಗಿಂತಲೂ ಕೆಳಗಿರುವ ಹರಿಜನ ಮತ್ತು ಗಿರಿಜನ ಮತ್ತು ಉಳಿದ ದುರ್ಬಲವರ್ಗದವರಿಗೆ ಸಾಕಷ್ಟು ಪ್ರಮಾಣದಲ್ಲಿ ಯೋಗ್ಯ ಬೆಲೆಯಿಂದ ಅಗ್ಗದ ದರದ ಅಂಗಡಿ ಮುಖಾಂತರ ದವಸ ಧಾನ್ಯಗಳನ್ನು ಹಂಚುವ ವ್ಯವಸ್ಥೆ ಮಾಡಬೇಕು. ಮತ್ತು ಪೇಟೆಯಲ್ಲಿ ಜೋಳದ ದರವು ಕೆ. ಜಿ. ಗೆ. 2 ರೂಪಾಯಿ 25 ಪೈಸೆಯಂತೆ ಇರುತ್ತದೆ. ಆದರೆ ಕೂಲಿಕಾರರ ಕೂಲಿಯಲ್ಲಿ ಹೆಚ್ಚಳವಾಗಿಲ್ಲ. ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಲ್ಲಿ ಅನ್ನ ಧಾನ್ಯಗಳ ಬೆಲೆ ಕೆ. ಜಿ. ಗೆ. ರೂ. 8 ರಿಂದ ರೂ. 9ರವರೆಗೆ ಇದೆಯೆಂದು ಕರ್ನಾಟಕದಲ್ಲಿ ಅದಕ್ಕೂ ಕಡಿಮೆ ದರದಲ್ಲಿ ದೊರೆಯುತ್ತದೆಂದು ಹೇಳಿದರೆ ಯಾರಿಗೂ ಸಮಾಧಾನವಾಗಲಾರದು. ಕೂಲಿ ದರದಲ್ಲಿ ಯಾವ ಹೆಚ್ಚಳವಾಗಿಲ್ಲ. ದುರ್ಬಲವರ್ಗದವರಿಗೆ ಹೊಟ್ಟೆ ತುಂಬಿಕೊಳ್ಳಲು ತುಂಬಾ ಕಷ್ಟವಾಗಿದೆ. ಅದರಂತೆ ಗ್ರಾಮದಲ್ಲಿ ವಾಸಿಸುವ ಹರಿಜನ—ಗಿರಿಜನ ಮತ್ತು ದುರ್ಬಲ ವರ್ಗದವರಿಗೆ ಬಹುಸಂಖ್ಯಾತರಿಗೆ ಸಕ್ಕರೆ ಮತ್ತು ನಿಯಂತ್ರಿತ ಬೆಲೆಯ ಬಟ್ಟೆಯು ದೊರೆತಿಲ್ಲವೆಂದು ನಾನು ನನ್ನ ಕ್ಷೇತ್ರದ ಪ್ರವಾಸದಲ್ಲಿ ಕಂಡು ಕೇಳಿದ ಅನುಭವ. ಎಲ್ಲ ಜನಾಂಗದವರೂ ಮೇಲಿಂದಮೇಲೆ ಪ್ರಬಲವಾದ ಜನಗಳ ಬಗ್ಗೆ ಪರಿಹಾರವನ್ನು ಕೇಳುತ್ತಲೇ ಇರುತ್ತಾರೆ. ಆದರೆ ಶೇಕಡಾ 18ರ ಜನಗಳ ಕಷ್ಟವನ್ನು ಕೇಳುವ ಜನ ಕಡಿಮೆ. ಈ ಸಮಯದಲ್ಲಿ ನಾನು ಮತ್ತೂ ಹೇಳಬಯಸುವುದೇನೆಂದರೆ ಭೂಮಿಯನ್ನು ಸ್ವಂತ ಸಾಗುಮಾಡುವ ರೈತರು ತಮ್ಮ ಕೂಲಿಕಾರರಿಗೆ ಕೂಲಿಯನ್ನು ಧಾನ್ಯ ರೂಪವಾಗಿ ಕೊಡಬೇಕೆಂದು ಸರ್ಕಾರವು ಒತ್ತಾಯಪಡಿಸಬೇಕು.

ಇದೇ ಸಮಯದಲ್ಲಿ ಕೈಮಗ್ಗದ ನೇಕಾರರಿಗೆ ಸಂಬಂಧಪಟ್ಟ ಹಾಗೆ ಕೆಲವೊಂದು ಸೂಚನೆಗಳನ್ನು ಕೊಡಬಯಸುತ್ತೇನೆ. ಹೇಗೆ ಮನೆ ಇಲ್ಲದವರಿಗೆ ಮನೆ ಭೂರಹಿತರಿಗೆ ಭೂಮಿ ನಿವೇಶನ ರಹಿತರಿಗೆ ನಿವೇಶನಗಳನ್ನು ಕೊಡುವ ನಿರ್ಧಾರ ಮಾಡಿದ್ದಾರೆಯೋ ಅದೇ ರೀತಿ ಕೈಮಗ್ಗಗಳಿದವರಿಗೆ ಕೈಮಗ್ಗ ಕೊಡುವ ಘೋಷಣೆಯನ್ನು ಮಾಡಿ ಕೈಮಗ್ಗವಿಲ್ಲದ ನೇಕಾರರಿಗೆ ಒಂದೊಂದು ಮಗ್ಗವನ್ನು ಒದಗಿಸಿ ಅದರಿಂದ ಅವರು ಉಪಜೀವನ ನಡೆಸಲು ಕನಿಷ್ಠ 1000 ರೂಪಾಯಿಗಳನ್ನು ಕೊಡಬೇಕೆಂದು ನಾನು ಸೂಚಿಸಬಯಸುತ್ತೇನೆ. ಇದರಿಂದ ನಿರುದ್ಯೋಗ ನಿವಾರಣೆಗೆ ಕೆಲಮಟ್ಟಿಗೆ ಸಹಾಯವಾದೀತೆಂದು ನನ್ನ ಹಾರೈಕೆ.

ಕೈಮಗ್ಗದ ಬಗ್ಗೆ ಪ್ರತ್ಯೇಕ ಡೈರೆಕ್ಟೊರೇಟನ್ನು ರಚಿಸಬೇಕೆಂದು ಈ ಸದನದಲ್ಲಿ ಒಪ್ಪಿಕೊಂಡಿದ್ದಾಗ್ಯೂ, ಆ ಬಗ್ಗೆ ಈ ವರ್ಷ 5 ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಿ ಅನುಕೂಲ ಕಲ್ಪಿಸಿದ್ದರೂ ಕೈಮಗ್ಗದ ಬಗ್ಗೆ ಸ್ವತಂತ್ರವಾದ ಡೈರೆಕ್ಟೊರೇಟ್ ಇನ್ನೂ ನಿರ್ಮಿತವಾಗಿಲ್ಲ. ಕೇಂದ್ರ ಸರ್ಕಾರದವರು ನಿಯಮಿಸಿದ ಶಿವರಾಮನ್ ಸಮಿತಿ ಸಿಫಾರಸ್ಸುಗಳು ಯೋಗ್ಯವಿದ್ದು ಅವುಗಳ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಇಲ್ಲಿಯವರೆಗೆ ಪ್ರಕಟಪಡಿಸಲಾಗಿದೆಯೋ ಹೇಗೆ ಎಂಬುದು ತಿಳಿದುಬಂದಿಲ್ಲ.

ಈಗಿದ್ದ ಕೈಮಗ್ಗ ಸಲಹಾ ಸಮಿತಿಯನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಲು ಕೇಳಿಕೊಳ್ಳಲಾಗಿದೆ. ಆ ಬಗ್ಗೆ ಸರ್ಕಾರದ ನಿರ್ಣಯ ತಿಳಿದು ಬಂದಿಲ್ಲ. ಬಹುಜನ ಕೈಮಗ್ಗ ನೇಕಾರರು ದುರ್ಬಲವರ್ಗದವರಾಗಿದ್ದು ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿರುವವರು ಅವರಿಗೆ ಸರ್ಕಾರವು ಸಹಾಯ ಮಾಡಬೇಕೆಂದು ಕೋರುತ್ತೇನೆ.

ಫುಡ್‌ಗ್ರೈನ್ಸ್ ವಿತರಣೆಯ ಬಗ್ಗೆ ಸಾಕಷ್ಟು ಅಕ್ರಮ ವ್ಯವಹಾರಗಳು ತಾಲ್ಲೂಕು ಮಟ್ಟದಲ್ಲಿ ನಡೆದರೂ ಕೂಡ ನಮ್ಮ ಶಾಸಕರು ದೂರುಗಳನ್ನು ಅಧಿಕಾರಿಗಳಿಗೆ ತಿಳಿಸಿದ್ದರೂ ಕೂಡ ಏನೂ ವ್ಯವಸ್ಥೆಯಾಗುವುದಿಲ್ಲ. ಜಮಖಂಡಿ ತಾಲ್ಲೂಕಿನಲ್ಲಿ ಇಂಥಾ ವಿಷಯಗಳನ್ನು ಅಧಿಕಾರಿಗಳಿಗೆ ಮತ್ತು ಡೆಪ್ಯುಟಿ ಕಮಿಷನರಿಗೆ ಪತ್ರಮುಖೇನ ಬರೆದರೂ ಕೂಡ ಏನೂ ಉಪಯೋಗವಾಗಿಲ್ಲ. ತಾಲ್ಲೂಕು ಫುಡ್ ಅಡ್ವೈಜರಿ ಕಮಿಟಿಗಳ ಅವಧಿ ಮುಗಿದು ಸುಮಾರು 9 ತಿಂಗಳಾಯಿತು, ಇನ್ನು ವರೆಗೆ ಹೊಸ ಸಮಿತಿಗಳ ರಚನೆಯಾಗಿಲ್ಲ. ತಾಲ್ಲೂಕು ಮಟ್ಟದಲ್ಲಿ ಧಾನ್ಯ ಮತ್ತು ಸಕ್ಕರೆ ವಿತರಣೆಯಲ್ಲಿ ಅಕ್ರಮವ್ಯವಹಾರಗಳು ಗುತ್ತವೆ, ಆದರ ಮೇಲೆ ಸರಿಯಾದ ನಿಯಂತ್ರಣವಿಲ್ಲ. ತಾಲ್ಲೂಕು ಫುಡ್ ಅಡ್ವೈಜರಿ ಕಮಿಟಿಗಳನ್ನು ಆದಷ್ಟು ಬೇಗ ಹೊಸದಾಗಿ ರಚಿಸಬೇಕೆಂದು ಭೇಟಿಯಾಗಿ ವಿನಂತಿಸಿಕೊಂಡು ಮಾನ್ಯ ಆಹಾರ ಖಾತೆಯ ಮಂತ್ರಿಗಳಿಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ಕಾಗದ ಬರೆದರೂ ಕೂಡ ಇದನ್ನು ಅದರ ಬಗ್ಗೆ ಯಾವ ನಿರ್ಧಾರಗಳನ್ನೂ ಕೈಗೊಂಡಿಲ್ಲ.

ಶ್ರೀಮತಿ ಇ. ಇ. ವಾಜ್.—ಎಲ್ಲಿ. ಯಾವ ತಾಲ್ಲೂಕಿನಲ್ಲಿ ?

ಶ್ರೀ ಪಿ. ಎಂ. ಭಂಗಿ.—ಜಮಖಂಡಿ ತಾಲ್ಲೂಕಿನಲ್ಲಿ ದುರ್ವವಹಾರ ನಡೆದಿದೆ. ಅಲ್ಲಿ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಮತ್ತು ಜಮಖಂಡಿ ತಾಲ್ಲೂಕಿನಲ್ಲಿ ಸಕ್ಕರೆ ಹಂಚುವ ವಿಷಯದಲ್ಲಿ ಸಾಕಷ್ಟು ದುರ್ವವಹಾರವಾಗಿದೆಯೆಂದು ತಿಳಿಯುತ್ತದೆ. ಆ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ಕೊಟ್ಟರೂ ಇನ್ನೂ ತನಿಖೆಯಾಗಿಲ್ಲ. ತಹಶೀಲ್ದಾರರ ಕಛೇರಿಯಲ್ಲಿ ಸಾಕಷ್ಟು ದುರ್ವವಹಾರ ಆಗಿದ್ದರೂ ಅಲ್ಲಿ ಕೆಲಸ ಮಾಡತಕ್ಕ ಕ್ಲಾರ್ಕ್ ಅನ್ನು ಸ್ಥಳಾಂತರ ಮಾಡಿಲ್ಲ. ಇದಕ್ಕೆಲ್ಲಾ ಕಾರಣ ಅಧಿಕಾರಿಗಳು ಮತ್ತು ಸೊಸೈಟಿಗಳ ಆಡಳಿ ವರ್ಗದವರೂ ಕೂಡಿಕೊಂಡು ಹಣ ಲೂಟಿ ಮಾಡುವುದಕ್ಕೆ ಹತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದರೂ ಇಂದಿನವರೆಗೂ ಏನೂ ಆಗಿಲ್ಲ. ಹರಿಜನ ಗಿರಿಜನರಿಗೆ ಮತ್ತು ದುರ್ಬಲವರ್ಗದವರಿಗೆ ಸಕ್ಕರೆ ಮತ್ತು ಇತರೆ ಕಂಟ್ರೋಲ್ ಪದಾರ್ಥಗಳು ಯಾವುದೂ ಸಿಕ್ಕಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಬೋಗಸ್ ಸೊಸೈಟಿಗಳು ಕಂಟ್ರೋಲ್ ಸಾಮಾನುಗಳನ್ನು ಸರ್ಕಾರದಿಂದ ತಂದು ಅದನ್ನು ಹರಿಜನ ಗಿರಿಜನರಿಗಾಗಲೀ, ದುರ್ಬಲವರ್ಗದವರಿಗಾಗಲೀ ವಿತರಣೆ ಮಾಡದೆ ಅದನ್ನು ಅವರೇ ಲೂಟಿ ಮಾಡುತ್ತಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮ ಕ್ಷೇತ್ರಕ್ಕೆ ಫುಡ್ ಖಾತೆಯ ಮಂತ್ರಿಗಳು ಬಂದಿಲ್ಲವೇ ?

ಶ್ರೀ ಪಿ. ಎಂ. ಬಾಂಗಿ.—ಅವರು ಫುಡ್ ಖಾತೆಯ ಮಂತ್ರಿಗಳಾದ ಮೇಲೆ ನಮ್ಮ ಕ್ಷೇತ್ರಕ್ಕೆ ಬಂದಿಲ್ಲ ಅಸೆಂಬಿ ಮುಗಿದ ನಂತರ ಬರುತ್ತೇನೆ ಎಂದು ಹೇಳಿದ್ದಾರೆ. ಆಹಾರ ವಿತರಣೆ ವಿಷಯದಲ್ಲಿ ಸರ್ಕಾರದವರು ಸಾಕಷ್ಟು ಗಮನ ಕೊಡಬೇಕು ದುರ್ವ್ಯವಹಾರಗಳು ನಡೆಯದಂತೆ ನೋಡಿಕೊಳ್ಳಬೇಕು. ಜಿಲ್ಲಾ ಮಟ್ಟದಲ್ಲಿ ಫುಡ್ ಅಡ್ವೈಜರಿ ಕಮಿಟಿಗಳನ್ನು ರಚನೆ ಮಾಡಿ 2 ವರ್ಷಗಳಾದರೂ ಒಂದು ಮೀಟಿಂಗ್ ಅನ್ನೂ ಕರೆದಿಲ್ಲ. ಆಹಾರದ ವಿತರಣೆ ಸರಿಯಾಗಿಲ್ಲ. ಆಗಿಲ್ಲ ದುರ್ಬಲವರ್ಗದವರಿಗೆ ಹರಿಜನ ಗಿರಿಜನರಿಗೆ ಯೋಗ್ಯಬೆಲೆಯಲ್ಲಿ ಆಹಾರಧಾನ್ಯವು ಸಿಕ್ಕುವಂತೆ ಮಾಡಬೇಕು. ಬಡಜನಗಳು ಒಂದು ಕೆ. ಜಿ. ಜೋಳಕ್ಕೆ ಓಪನ್ ಮಾರ್ಕೆಟ್ಟಿನಲ್ಲಿ 1½ರೂಪಾಯಿಗಳನ್ನು ಕೊಟ್ಟು ತಂದು ತಿನ್ನುವುದಕ್ಕೆ ಶಕ್ತಿ ಇಲ್ಲದೆ ಅವರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಕೂಲಿಗಾರರಿಗೆ, ದುರ್ಬಲವರ್ಗದವರಿಗೆ ರೈತರು ಧಾನ್ಯ ರೂಪದಲ್ಲಿ ಕೂಲಿಯನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕು. ಬಡ ಜನಗಳಿಗೆ, ದುರ್ಬಲವರ್ಗದವರಿಗೆ ಕೆಂಪು ಜೋಳ ಮಿಲೋ ಕೊಡಿ. ಅದನ್ನು ಯೋಗ್ಯದರದಲ್ಲಿ ಕೊಡುವಂತೆ ಮಾಡಬೇಕು. ಆಹಾರಧಾನ್ಯಗಳ ಬೆಲೆ ಏರಿರುವುದರಿಂದ ಕೂಲಿಗಾರರಿಗೂ ಕೂಲಿ ದರವನ್ನು ಜಾಸ್ತಿ ಮಾಡಬೇಕು. ಇಲ್ಲವೇ ಹೋದರೆ ಅವರಿಗೆ ಈಗ ಬರುವ ಕೂಲಿಯಿಂದ ಹೊಟ್ಟೆ ತುಂಬುವುದಿಲ್ಲ. ನಾನು ಎಲ್ಲಾ ಹಳ್ಳಿಗಳಲ್ಲೂ ಅಡ್ಡಾಡಿದ್ದೇನೆ. ಪಂಚಾಯಿತಿಗಳಲ್ಲಿ, ತಾಲ್ಲೂಕುಬೋರ್ಡಿನಲ್ಲಿ ಮುನಿಸಿಪಾಲಿಟಿಗಳಲ್ಲಿ ಅವರ ಬಜೆಟ್ಟಿನಲ್ಲಿ 18 ಪರ್ಸೆಂಟ್ ಹಣವನ್ನು ಹರಿಜನ ಗಿರಿಜನರಿಗೆ ರಿಜರ್ವ್‌ಮಾಡಿ ಹಂಚಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಆದರೆ ಆ ರೀತಿ ಹರಿಜನ ಗಿರಿಜನರಿಗೆ ಪರಿಹಾರ ಸಿಕ್ಕಿಲ್ಲ. ಅವರಿಗೆ ಆದ್ದು

ದೊರೆಯುವಂತೆ ಮಾಡಬೇಕು. ದೊಡ್ಡ ದೊಡ್ಡ ಭೂಮಾಲೀಕರು, ತಮ್ಮ ಬಂಧುಗಳ ಹೆಸರಿಗೆ ದಾಖಲು ಮಾಡಿಸಿಕೊಂಡು ಹರಿಜನ ಗಿರಿಜನರಿಗೆ ದುರ್ಬಲವರ್ಗದವರಿಗೆ ಕೂಲಿಗಾರರಿಗೆ ಯಾವುದು ಭೂಮಿ ಸಿಕ್ಕಬಾರದು ಎನ್ನುವ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ ಹರಿಜನ ಗಿರಿಜನರು ಮತ್ತು ದುರ್ಬಲವರ್ಗದವರು ತಹಶೀಲ್ದಾರರ ಕಡೆ ಹೋಗಿ ತಕರಾರು ಮಾಡುವ ಅಧಿಕಾರ ಇಲ್ಲ. ಆದ್ದರಿಂದ ಇಂಥಾ ತಹಶೀಲ್ದಾರರನ್ನು ಹತೋಟಿಯಲ್ಲಿಡುವ ಕ್ರಮಗಳನ್ನು ಕೈಗೊಳ್ಳಬೇಕು. ಅಯಾ ತಾಲ್ಲೂಕುಗಳಲ್ಲಿರುವಂಥಾ ಹರಿಜನ ಗಿರಿಜನ ಮತ್ತು ಭೂಹೀನರು ಇಂಥಾ ಜಮೀನುಗಳಲ್ಲಿ ಆಸಕ್ತಿಯುಳ್ಳವರೆಂದು ಸರ್ಕಾರದವರು ನೋಟಿಫಿಕೇಷನ್ ತೆಗೆದು ಸ್ಪಷ್ಟಪಡಿಸಬೇಕು. ಇಲ್ಲದೇ ಹೋದರೆ ಲ್ಯಾಂಡ್ ಆರ್ಡರ್ ಒಪ್ಪುತ್ತಾನೆಂದು ಗೇಣೀದಾರರು ಹೇಳುತ್ತಾರೆ ಲ್ಯಾಂಡ್ ಆರ್ಡರ್ ಮಾಡಿದ್ದನ್ನು ಒಂದೊಂದು ಸಾರಿ ಒಂದೊಂದು ಸಮಯದಲ್ಲಿ ಲ್ಯಾಂಡ್ ಟ್ರಿಬ್ಯೂನಲ್ ಅನಿವಾರ್ಯವೆಂದು ಒಪ್ಪುತ್ತದೆ. ಒಪ್ಪಿದನಂತರ ಲ್ಯಾಂಡ್‌ಗಳನ್ನು ಹರಿಜನ ಗಿರಿಜನರಿಗೆ ನ್ಯಾಯವಾಗಿ ಕೊಡೋದಿಲ್ಲಾ. ಟ್ರಿಬ್ಯೂನಲ್‌ಗೆ ಹೆಚ್ಚಿನ ಅಧಿಕಾರವಿಲ್ಲ. ಅವರಿಗೆ ಆರತಕ್ಕ ಅಧಿಕಾರಗಳಲ್ಲಿ ಅನ್ಯಾಯಗಳು ನಡೆಯುವ ಸಂಭವವಿದೆ. 19[illegible]-67 ರಲ್ಲಿ ಹಾಗೂ 1965-66 ರಲ್ಲಿ ಬಂದಂತಹ ರಿಸಂಪ್‌ಷನ್ ಅಪ್ಲಿಕೇಷನ್ಸ್ ಎಷ್ಟೋ ಫೈಲ್ ಆಗಿದ್ದರೂ ಇನ್ನೂ ಇದುವರೆಗೆ ಯಾವ ರೀತಿಯಲ್ಲಿಯೂ ತೀರ್ಮಾನವಾಗಿಲ್ಲ. ಅನೇಕ ಕೇಸುಗಳು ಹೈಕೋರ್ಟಿನಲ್ಲಿ ಇನ್ನೂ ಪೆಂಡಿಂಗ್‌ನಲ್ಲಿವೆ. ಇಂಥ ವ್ಯಾಜ್ಯಗಳಿಗೆ ಸಂಬಂಧಪಟ್ಟ ಗೇಣೀದಾರರು Form VII ಮೇರೆಗೆ ಅರ್ಜಿ ಸಲ್ಲಿಸಿದ್ದಾರೆ, ಅವರು ನಿಜವಾದ ಗೇಣೀದಾರರೆಂದು ಭಾವಿಸತಕ್ಕದ್ದು. ಇಂಥ ವ್ಯಾಜ್ಯಗಳ ಕಾಗದಗಳನ್ನು ಮತ್ತು ರಿಜಿಸ್ಟರುಗಳನ್ನು ಹೈಕೋರ್ಟಿನ ಮುಖಾಂತರ, ಭೂ ಪಂಚಾಯಿತಿಗಳಿಗೆ ವದಗಿಸತಕ್ಕದ್ದು. ಲ್ಯಾಂಡ್ ರಿಫಾರಮ್ಸ್ ಇಲಾಖೆಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ದುರ್ದೈವದಿಂದ ಇಲ್ಲಿ ಇಲ್ಲ. ಲ್ಯಾಂಡ್ ರಿಫಾರಮ್ಸ್ ಬಗ್ಗೆ ಎಷ್ಟೋ ನೋಟಿಫಿಕೇಷನ್‌ಗಳನ್ನು ಮಾಡಿದ್ದರೂ ಈ ಕಾಯಿದೆಯಲ್ಲಿ ತಿದ್ದುಪಡಿ ಮಾಡಿದ್ದರೂ, ಅದಕ್ಕೆ ತಕ್ಕ ಹಾಗೆ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಮಾಡಿದ್ದರೂ ಕೂಡ ಈಗಿನ ಒಂದು ಪಾಲಿಸಿಯಲ್ಲಿ ಲ್ಯಾಂಡ್ ರಿಫಾರಮ್ಸ್‌ನಿಂದ ವಕೀಲರಿಗೆ ಮತ್ತು ಭೂಮಾಲಿಕರಿಗೆ ಹೆಚ್ಚಿನ ಅನುಕೂಲ ದೊರೆಯುತ್ತಿದೆಯೇ ಹೊರತು ಬಡವರಿಗೆ ಏನೂ ಸೌಲಭ್ಯ ಸ್ವಲ್ಪಷ್ಟು ದೊರೆಯುತ್ತಿಲ್ಲ. ಹಿತಾಸಕ್ತರಾದ ಕೆಲವು ವಕೀಲರು Land Trebunnals ಗಳಲ್ಲಿ ಇರುವರು. ಅಂಥ ವಕೀಲರಿಂದಾ, ಗೇಣೀದಾರರಿಗೆ ನ್ಯಾಯ ಸಿಕ್ಕೋದಿಲ್ಲಾ. ಆ ವ್ಯಾಜ್ಯಗಳನ್ನು ವರ್ಗ ಮಾಡಲು ಬೇರೆ Tribunal ಗಳಿಗೆ, ಕಳುಹಿಸುವ ವ್ಯವಸ್ಥೆ ಲ್ಯಾಂಡ್ ರಿಫಾರಮ್ಸ್ ಆಕ್ಟ್‌ನಲ್ಲಿ ಏನೂ ಸರಿಯಾದ ವ್ಯವಸ್ಥೆ ಇಲ್ಲ. Civil Procedure Code ನಲ್ಲಿ ಒಂದು ದಾವೆಯನ್ನು, ಒಂದು ಕೋರ್ಟಿನಿಂದ ಮತ್ತೊಂದು ಕೋರ್ಟಿಗೆ ಕಳುಹಿಸುವ ಅಧಿಕಾರ District Judge ಗೆ ಇದೆ.

ನಾನು ಹಿಂದೆ ಹೇಳಿದ ಹಾಗೆ ಯಾವ ಪ್ರಕಾರವಾಗಿ 'ಭೂಮಿ ಇಲ್ಲದವರಿಗೆ ಭೂಮಿ' ಎಂಬುದಾಗಿ ಹೇಳುತ್ತಾರೋ ಅದೇ ರೀತಿಯಾಗಿ "ಮನೆ ಇಲ್ಲದವರಿಗೆ ಮನೆ" ಎಂಬುದಾಗಿ ಹೇಳುವಾಗ "ಕೈಮಗ್ಗಗಳು ಇಲ್ಲದವರಿಗೆ ಕೈಮಗ್ಗ" ಎಂಬ ಒಂದು ತತ್ವವನ್ನು ನಮ್ಮ ಸರ್ಕಾರದವರು ಅಳವಡಿಸುವುದು ಸೂಕ್ತವೆಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನೊಂದು ವಿಷಯ. ನೇಕಾರರಿಗೆ S.C. & S.T. ಗಳಂತೆ ಶೇಕಡ 18ರಷ್ಟು ರಿಲೀಫ್ ಸಿಗಬೇಕು. ಯಾರಿಗೆ ಮಗ್ಗ ಇಲ್ಲವೋ ಅಂತಹವರಿಗೆ ಮಗ್ಗ ಕೊಡಬೇಕು. ಅವರಿಗೆ ಒಂದು ಸಾವಿರ ರೂಪಾಯಿಗಳಷ್ಟು ವರ್ಕಿಂಗ್ ಕ್ಯಾಪಿಟಲ್ ಕೊಡಬೇಕು. ಇದರಿಂದ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ಕೈಗಾರಿಕೆಗಳ ವಿಷಯವಾಗಿ ಹೇಳುವಾಗ, ನೇಯ್ಗೆ ವಿಚಾರದಲ್ಲಿ ನಮ್ಮ ಸರ್ಕಾರ ಸಾಕಷ್ಟು ಸೌಕರ್ಯಗಳನ್ನು ಕೊಡಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರದವರು ನಿಯಮಿಸಿದ ಶಿವರಾಮನ್ ಕಮಿಟಿಯವರು ಅನೇಕ ಶಿಫಾರಸುಗಳನ್ನು ಮಾಡಿದ್ದರೂ, ಅವು ಯೋಗ್ಯವಾಗಿದ್ದರೂ ಅವುಗಳ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಇಲ್ಲಿಯವರೆಗೆ ಕೇಂದ್ರ ಸರಕಾರಕ್ಕೆ ತಿಳಿಸಿರುವರೋ ಹೇಗೆ ಎಂಬುದು ತಿಳಿದು ಬಂದಿಲ್ಲ. ಸಂಬಂಧಪಟ್ಟ ಆಫೀಸಿನಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲ ದಾಖಲಾತಿಗಳು ಇರುತ್ತವೆ. ಹ್ಯಾಂಡ್ ಲೂಮ್ಸ್‌ಗಳನ್ನು ಬೆಳೆಸುವ ಸಲುವಾಗಿ ಜಿಲ್ಲಾ ಮಟ್ಟದ ಹ್ಯಾಂಡ್‌ಲೂಮ್ಸ್ welfare ಸಮಿತಿಗಳನ್ನು ನೇಮಿಸಿ ಅವುಗಳ ಮೂಲಕ ಕೈಮಗ್ಗಗಳನ್ನು ಕೈಮಗ್ಗಗಳಿಲ್ಲದವರಿಗೆ ಒದಗಿಸಿಕೊಟ್ಟರೆ ಹಾಗೂ ಅವರ ಶಿಫಾರಸುಗಳನ್ನು ಇಂಪ್ಲಿಮೆಂಟ್ ಮಾಡಿದರೆ ನಿಜವಾಗಿಯೂ ನೇಕಾರ ವರ್ಗದ ಉದ್ಧಾರವಾಗುತ್ತದೆ. ಈ ವರ್ಷ ಬಜೆಟಿನಲ್ಲಿ 5 ಲಕ್ಷ ರೂಪಾಯಿಗಳನ್ನು ಹ್ಯಾಂಡ್‌ಲೂಮ್ ಡೈರೆಕ್ಟರೇಟಿನ ಬಗ್ಗೆ ಇಟ್ಟಿದ್ದರೂ ಒಂದು ಕಾಸೂ ಕೂಡ ಖರ್ಚು ಮಾಡಲಿಲ್ಲ. ಇಷ್ಟೊಂದು ಅನುಕೂಲ ಮಾಡಿಕೊಟ್ಟಾಗ್ಯೂ ಕೈಮಗ್ಗದ ಬಗ್ಗೆ ಸ್ವತಂತ್ರವಾದ ಡೈರೆಕ್ಟರೇಟ್ ಇನ್ನೂ ನಿರ್ಮಿತವಾಗಿಲ್ಲ. ಹ್ಯಾಂಡ್‌ಲೂಂ ಅಡ್ವೈಜರಿ ಬೋರ್ಡ್‌ನ್ನು statutory Board ನ್ನಾಗಿ ಶಿವರಾಮನ್ ಕಮಿಟಿಯ ಶಿಫಾರಸು ಬಂದನಂತರ ನಿರ್ಮಾಣಮಾಡುತ್ತೇವೆ

ಎಂದು ಹೇಳಿದ್ದರೂ ಅದನ್ನು ಇದುವರೆಗೆ ರಚನೆಮಾಡಲಿಲ್ಲ. ಈಗ ಅವರ ಬಗ್ಗೆ ಒಂದು ಕಾರ್ಪೊರೇಷನ್ ಮಾಡುತ್ತೇವೆಂದು ಹೇಳುತ್ತೀರಿ. ಈ ಪ್ರಕಾರ ನೇಕಾರರಿಗೆ ಸಾಕಷ್ಟು ಪರಿಹಾರ ಸಿಗುವ ಬಗ್ಗೆ ಸರಕಾರದವರು ಏರ್ಪಾಡು ಮಾಡಬೇಕು. ವರಲಕ್ಷ್ಮಿ ಹತ್ತಿಗೆ ಏನೊಂದು ಬೆಲೆಯನ್ನು ನಿರ್ಧಾರ ಮಾಡುತ್ತೀರೋ ಅದರಿಂದ ಬೆಳೆಗಾರರಿಗೆ ಹೆಚ್ಚು ಬೆಲೆ ಬರಬೇಕು. ಸೋಮಯ್ಯ ಷುಗರ್ ಫ್ಯಾಕ್ಟರಿಯವರಿಗೆ ಸರ್ಕಾರದ ಪರವಾಗಿ ಸುಮಾರು 75 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೋ ಅಥವಾ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೋ ಗೊತ್ತಿಲ್ಲ. ಅದರ ಬಗ್ಗೆ ಸರಿಯಾದ ಅಂಕಿಅಂಶಗಳು ಇಲ್ಲ. ಅಷ್ಟರಮಟ್ಟಿಗೆ ಧನಸಹಾಯವನ್ನು ಮಾಡಿದಾಗ್ಯೂ ಕಬ್ಬು ಬೆಳೆಗಾರರಿಗೆ ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿನ ಬೆಲೆಯನ್ನು ಕೊಟ್ಟಿಲ್ಲ. ಅವರಿಗೆ ಹೆಚ್ಚಿನ ಬೆಲೆಯನ್ನು ಕೊಡುವಂತೆ ಮಾಡಲು ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ. ಆ ಕಡೆಯ ಶಾಸಕರು, ಮತ್ತು ಈ ಕಡೆಯ ಶಾಸಕರು ಪ್ರಜೆಗಳಿಗೆ ಕಲ್ಯಾಣವಾಗಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತು. ನಾನು ಇನ್ನೂ ಹೇಳುವ ವಿಷಯಗಳು ಸಾಕಷ್ಟು ಇದ್ದಾಗ್ಯೂ, ಮುಂದೆ ಬಜೆಟ್ ಚರ್ಚೆಯ ಸಮಯದಲ್ಲಿ ಹೆಚ್ಚಿಗೆ ಮಾತನಾಡಲು ಅವಕಾಶವಿರುವುದರಿಂದ ಮತ್ತು ಇನ್ನೂ ಸ್ಪಷ್ಟ ರೀತಿಯಲ್ಲಿ ನನ್ನ ಅಭಿಪ್ರಾಯಗಳನ್ನು ವ್ಯಕ್ತಮಾಡುವುದಕ್ಕೆ ಅವಕಾಶ ಹೆಚ್ಚಿಗೆ ಸಿಗುವುದರಿಂದ, ಈಗ ನಾನು ಮಾನ್ಯ ರಾಜ್ಯಪಾಲರಿಗೆ ವಂದನೆಗಳನ್ನು ಸಲ್ಲಿಸುವ ನಿರ್ಣಯಕ್ಕೆ ಸಂಪೂರ್ಣವಾಗಿ ಬೆಂಬಲವನ್ನು ಸೂಚಿಸಿ, ಮಾನ್ಯ ಉಪಾಧ್ಯಕ್ಷರು ಈ ಸಲಹೆಗಳನ್ನು ಮಾಡಲು ನನಗೆ ಚಾನ್ಸ್ ಕೊಟ್ಟ ಬಗ್ಗೆ ಅಭಿನಂದನೆಗಳನ್ನು ಅವರಿಗೆ ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರು ಮಾಡಿರತಕ್ಕ ಭಾಷಣವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸಿ, ಬೆಂಬಲಿಸಿ ಕೆಲವು ಮಾತುಗಳನ್ನು ಆಡಬೇಕೆಂದು ಬಯಸುತ್ತೇನೆ. ಮೊನ್ನೆ ನಮ್ಮ ಜಿಲ್ಲೆಯಿಂದ ಒಬ್ಬರು ಬಂದಿದ್ದರು. ಅವರ ಹೆಸರನ್ನು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಅವರು ನನ್ನನ್ನು ಒಂದು ಪ್ರಶ್ನೆ ಮಾಡಿದರು. ನಿಮ್ಮ ಶಾಸನ ಸಭೆಯ ವಿಷಯ ಏನು ಕೇಳಲಿ, ಶಾಸನಸಭೆಯ ಅನೇಕ ಕಾಲವನ್ನು ವ್ಯರ್ಥವಾದ ಚರ್ಚೆಯಲ್ಲಿಯೇ ಕಳೆಯುತ್ತಿದ್ದೀರಿ, ದೇಶದ ದುಡ್ಡು ವೃಥಾ ಹಾಳಾಗುತ್ತಿದೆಯೆಂದು.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸದಸ್ಯರನ್ನು ಇಲ್ಲಿಗೆ ಕಳುಹಿಸಿದ್ದೂ ಸಹ ವ್ಯರ್ಥವೆಂದು ಅವರು ಹೇಳಲಿಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಾದರೆ ಈ ಸಭೆಗೆ ಮಾನ್ಯ ಸದಸ್ಯರು ಬಂದು ಕುಳಿತು ಅವರನ್ನು ಇಲ್ಲಿಗೆ ಜನ ಆರಿಸಿ ಕಳುಹಿಸಿದ್ದು ವ್ಯರ್ಥವೆಂದು ಹೇಳುತ್ತಾರೆಯೇ ?

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸದಸ್ಯರು ಮಾತನಾಡುವಾಗ ಶಿವಮೊಗ್ಗ ಜಿಲ್ಲೆಯವರು ಬಂದು ಆ ರೀತಿಯಾಗಿ ಹೇಳಿದರು ಎಂಬುದಾಗಿ ಹೇಳಿದ್ದಾರೆ. ಇದು ಆ ಜಿಲ್ಲೆಯವರಿಗೆ ಕೆಟ್ಟ ಹೆಸರು ತಂದಂತಾಯಿತು. ಮಾನ್ಯ ಸದಸ್ಯರಿಗೆ ಯಾರೋ ಒಬ್ಬರು ಆ ಜಿಲ್ಲೆಯಿಂದ ಬಂದು ಈ ಸಭೆಯ ಕಾಲವನ್ನು ವ್ಯರ್ಥ ಮಾಡುತ್ತಿದ್ದಾರೆಂಬ ಮಾತನ್ನು ಹೇಳಿದ ವಿಚಾರವನ್ನು ಈ ಸಭೆಯಲ್ಲಿ ನನ್ನ ಸ್ನೇಹಿತರಾದ ಮಾನ್ಯ ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ ಅವರು ಹೇಳಿ ಈ ಸಭೆಯ ಹಕ್ಕುಬಾಧ್ಯತೆಗಳಿಗೆ ಹಾಗೂ ಗೌರವಕ್ಕೆ ಚ್ಯುತಿ ತಂದಿರುವುದರಿಂದ ಮಾನ್ಯ ಸದಸ್ಯರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

Mr. DEPUTY SPEAKER.—I was observing what the hon. Member would say further. What he said was just preliminary remarks. ಶಿವಮೊಗ್ಗಾ ಜಿಲ್ಲೆಯವರು ಹೇಳಿದ ರೀತಿಯಲ್ಲಿ ಕೆಟ್ಟ ಹೆಸರು ಎಂದಿಗೂ ಈ ಸಭೆಗೆ ಬರುವುದಿಲ್ಲ. He is not justified in doing that.

ಶ್ರೀ ಕಾಗೋಡು ತಿಮ್ಮಪ್ಪ.—ಶಿವಮೊಗ್ಗ ಜಿಲ್ಲೆಯವರೊಬ್ಬರು ಬಂದಿದ್ದರು. ಈ ಶಾಸನ ಸಭೆಯ ಕಾಲವನ್ನು ವ್ಯರ್ಥಮಾಡುತ್ತಿದ್ದೇವೆಂದು ಅವರು ಹೇಳಿದ್ದಾರಂತೆ.

ಉಪಾಧ್ಯಕ್ಷರು.—ಈ ಶಾಸನಸಭೆಯ ಸಮಯವನ್ನು ಹಾಳು ಮಾಡುವುದಕ್ಕೆ ಹಾಗೂ ಈ ಸಭೆಗೆ ಕೆಟ್ಟ ಹೆಸರು ತರುವುದಕ್ಕೆ ಯಾರಿಗೂ ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ —ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶ ಕೊಡುವವರು ತಾವು. ಆದ್ದರಿಂದ ಈ ಸಭೆಯ ಕಾಲ ವ್ಯರ್ಥವಾಗಿಲ್ಲ. ಸದುಪಯೋಗವಾಗಿದೆ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ಈ ರೀತಿ ಮಧ್ಯೆ ಮಧ್ಯೆ ಸದಸ್ಯರುಗಳು ಮಾತನಾಡುವುದಾದರೆ, ನನಗೆ ಕೊಟ್ಟ ಅವಕಾಶ ಮುಗಿದುಹೋಗುತ್ತದೆ. ಆಗ ತಾವು ನನಗೆ ಪುನಃ ನನ್ನ ಅಭಿಪ್ರಾಯವನ್ನು ವ್ಯಕ್ತಮಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಕೊಡಬೇಕು.

Mr. DEPUTY SPEAKER.—The hon. Member is not justified in saying that. We are all good-intentioned hon'ble people. I have a fund of goodwill for the hon. Member. Let him not be under the impression that I have anything else for him.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ನನ್ನ ಸ್ನೇಹಿತರು ಹೇಳಿದ ಮಾತು ಅಕ್ಷರಶಃ ನಿಜ.

ಉಪಾಧ್ಯಕ್ಷರು.—ಯಾರೇ ಆಗಲಿ, ಮಧ್ಯೆ ಮಾತನಾಡಲು ಅವಕಾಶವಿಲ್ಲ.

Sri KAGODU THIMMAPPA.—On a point of order.

1-30 P.M.

Mr. DEPUTY SPEAKER.—I would urge on the member to have a little patience and restraint. Let him feel for others also. Whenever somebody raises something against him, let the hon. memeber have patience.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ 'ಶಿವಮೊಗ್ಗ ದಿಂದ ಬಂದಿದ್ದ ಜನರು ಈ ಸಭೆಯಲ್ಲಿ ಸಮಯವನ್ನು ಸದಸ್ಯರು ಅನವಶ್ಯಕವಾಗಿ ಹಾಳು ಮಾಡುತ್ತಿದ್ದಾರೆಂದು' ಏನು ಹೇಳಿದರು ಆ ಮಾತು ನಿಜ, ಅದನ್ನು ನಾನೂ ಕೂಡ ಒಪ್ಪುತ್ತೇನೆ ಎಂಬುದಾಗಿ ಮತ್ತೆ ಹೇಳುತ್ತಿದ್ದಾರೆ. ಅಂದರೇನಾಯಿತು ? ಈ ಸದನದ ಕಾರ್ಯಕಲಾಪಗಳನ್ನು ನಡೆಸತಕ್ಕವರು ಈ ಸಭೆಯ ಅಧ್ಯಕ್ಷರು. ಅವರು ಇಲ್ಲಿ ನಡೆಸತಕ್ಕ ಕಾರ್ಯಕಲಾಪಗಳನ್ನು ಸರಿಯಾಗಿ ನಡೆಸುತ್ತಿಲ್ಲವೆಂದು ಹೇಳಿದ್ದನ್ನು ಈ ಮಾನ್ಯ ಸದಸ್ಯರೂ ಕೂಡ ಅಕ್ಷರಶಃ ಒಪ್ಪಿದರೆಂದರೆ ಅದು ಸಲ್ಲತಕ್ಕ ಮಾತಲ್ಲ.

Mr. DEPUTY SPEAKER.—The hon. Member is not justified in saying that ಎಂದು ನಾನಾಗಲೇ ಹೇಳಿದ್ದೇನೆ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—'ಕುಂಬಳಕಾಯಿ ಕಳ್ಳ' ಎಂದರೆ ಇವರೇಕೆ ಹೆಗಲನ್ನು ಮುಟ್ಟಿ ನೋಡಿಕೊಳ್ಳಬೇಕು.

Mr. DEPUTY SPEAKER.—Please do not make any insinuation against anybody.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ; ವಿರೋಧಪಕ್ಷದ ಮಾನ್ಯ ಅಧ್ಯಕ್ಷರು ನೆನ್ನೆ ದಿವಸ ಮತ್ತು ಈ ದಿನ ಪ್ರಾರಂಭದಲ್ಲಿ ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ಸಾಕಷ್ಟು ಕಾಲವನ್ನು ಕೊಡದೆ ಕುಂಠಿತಗೊಳಿಸಿದ್ದಾರೆಂದು ಹೇಳಿದ್ದಾರೆ...

ಶ್ರೀ ಕಾಗೋಡು ತಿಮ್ಮಪ್ಪ.—ಈ ಮಾನ್ಯ ಸದಸ್ಯರಿಗೆ ಅಸಂಬದ್ಧ ವಿಷಯಗಳನ್ನು ಪ್ರಸ್ತಾಪ ಮಾಡುವುದೇ ಇವರಿಗೊಂದು ಅಭ್ಯಾಸವಾಗಿದ್ದಂತೆ ಕಾಣುತ್ತದೆ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ಹೀಗೆ ನನ್ನ ಭಾಷಣ ಕಾಲದಲ್ಲಿ ಸದಸ್ಯರುಗಳು ಮಧ್ಯೆ ಮಧ್ಯೆ ಪ್ರವೇಶ ಮಾಡುತ್ತಿದ್ದರೆ ನನಗೆ ಅಧ್ಯಕ್ಷರು ಅರ್ಧಗಂಟೆ ಅವಕಾಶ ಕೊಟ್ಟರೂ ಸಾಲದಾಗುತ್ತದೆ. ಆದರೆ ಇವರ ಸಂಸ್ಕೃತಿಯೇ ಹೀಗೆ ಇದ್ದಂತೆ ಕಾಣುತ್ತಿದೆ. ನನಗೆ ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತಿದೆ. ಅದೇನೆಂದರೆ ಇಬ್ಬರು ದೇವರನ್ನು ಕುರಿತು ಘೋರ ತಪಸ್ಸಿಗೆ ಕುಳಿತರಂತೆ...

Mr. DEPUTY SPEAKER.—The hon. member must speak on the matter referred to in the Address.

Sri A. R. BADRINARAYAN.—He is narrating an interesting story.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಅವರಿಬ್ಬರೂ ಬಹಳ ಘೋರ ತಪಸ್ಸನ್ನೇ ಮಾಡಿದರು. ಅವರಿಗೆ ದೇವರೂ ಕೂಡ ಪ್ರತ್ಯಕ್ಷನಾದ. ಆಗ ದೇವರು ಒಬ್ಬನನ್ನು ಕುರಿತು ನಿನಗೇನು ಬೇಕು ಎಂದು ಕೇಳಿದ್ದಕ್ಕೆ ಆತನು ಆ ಇನ್ನೊಬ್ಬನು ಏನು ಬೇಡುತ್ತಾನೋ ಅವರ ಎರಡರಷ್ಟನ್ನು ನನಗೆ ಕೊಡು ಎಂದು ಹೇಳುತ್ತಾನೆ. ಆಗ ದೇವರು ಇನ್ನೊಬ್ಬನನ್ನು ಕುರಿತು ನಿನಗೇನು ಬೇಕೆಂದು ಕೇಳಿದಾಗ ಆತನು ಆ ಮೊದಲನೆಯವನೇನು ಕೇಳಿದ ಎಂದು ಕೇಳಿದ್ದಕ್ಕೆ ದೇವರು 'ನೀನು ಏನು ಕೇಳುತ್ತೀಯೋ ಅದರ ಎರಡರಷ್ಟನ್ನು ನನಗೆ ಕೊಡು' ಎಂದು ಆತ ಕೇಳಿದ ಎಂದುದಕ್ಕೆ...

Mr. DEPUTY SPEAKER —I have told the hon. member the provision under the Constitution and Rules of Procedure Please be within the scope.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನೀಗ ಅದೇ ವಿಷಯಕ್ಕೆ ಬರುತ್ತಿದ್ದೇನೆ. ನಾನು ಈಗ ಹೇಳುತ್ತಿರುವುದು ಪೀಠಿಕೆ ಮಾತ್ರ. ಅವನು ನನಗೆ ಭಗವಂತ ಒಂದು ಕಣ್ಣು ಹೋಗಲಿ ಎಂದಾಗ ಇವನಿಗೆ ಎರಡು ಕಣ್ಣುಗಳೂ ಹೋಗಬೇಕಾಯಿತು. ಅದರಂತೆ ಇಲ್ಲಿಯೂ ಇವರಿಗೆ ಒಂದು ಚಟವಿದ್ದಂತೆ ಕಾಣುತ್ತೆ. ಮಾನ್ಯ ಸದಸ್ಯರುಗಳು ಅದನ್ನು ದಯಮಾಡಿ ಬಿಟ್ಟುಬಿಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಯಾರಿಗೆ ಚಟವಿದೆ ಎಂಬುದನ್ನು ಸಭೆಯೇ ಹೇಳುತ್ತಿದೆ......

Mr. DEPUTY SPEAKER.—It is just like Bernard Shaw's preface which will be longer than the plays.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರ ಭಾಷಣವೇ ಹೇಳುತ್ತಿದೆ. ಯಾರದು ಅಸಂಬದ್ಧ ಪ್ರಲಾಪ ಎಂಬುದನ್ನು......

Sri S. M. SHERNALY CHANDRASEKHAR.—If you cannot control how can I speak? It is difficult for me if every time they interfere.

Mr. DEPUTY SPEAKER.—What does the hon. member mean when he say that I cannot control the other members? I told him that the mistake lies with him and not with anybody else. He creates problems for himself and for others also. Inspite of that he said that I cannot control.

Sri S. M. SHERNALY CHANDRASEKHAR.—I did not say that the Chair cannot control.

Mr. DEPUTY SPEAKER.—I heard the hon. member he is expected to address the Chair and no one else. I am not going to be a dumb statue here.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಒಂದು ದಿವಸ ನಾನು ಮನೆಗೆ ಬರುವಷ್ಟರಲ್ಲಿಯೇ ಅಲ್ಲಿ ಒಂದು ದೊಡ್ಡ ಸ್ತ್ರೀ ಸಮ್ಮೇಳನ ನಡೆಯುತ್ತಿತ್ತು. ಅಲ್ಲಿ 50—100 ಜನರು ಮಹಿಳೆಯರು ಸೇರಿದ್ದರು. ಅಲ್ಲಿ ಗಂಡಸರು ಸೇರಿದ್ದರೆ ಅವರನ್ನು ಹೇಗಾದರೂ ಮಾತಿ ವ್ಯವಹಾರ ನಡೆಸಬಹುದಿತ್ತು. ಆದರೆ ಆ ದಿವಸ ಅಲ್ಲಿ ಹೆಣ್ಣುಮಕ್ಕಳೇ ಸೇರಿದ್ದರು. ಅವರನ್ನು ನೋಡಿ ನನಗೆ ಘಾಬರಿಯಾಯಿತು. ಏತಕ್ಕೆಂದರೆ ಕಣ್ಣೀರು ಹಾಕುತ್ತಿರುವ ಹೆಣ್ಣುಮಗಳನ್ನು ನೋಡಿ ಸ್ಮೈರಣೆ ತಂದುಕೊಳ್ಳತಕ್ಕ ಶಕ್ತಿಯನ್ನು ದೇವರು ಗಂಡಸರಿಗೆ ಕೊಡಲಿಲ್ಲ.

Mr. DEPUTY SPEAKER.—I am really feeling helpless.

Sri S. M. SHERNALY CHANDRASEKHAR.—I am coming to the subject matter. It is relevant. ತಾವು ನನಗೆ ಮುಂದುವರಿಸುವುದಕ್ಕೆ ಅವಕಾಶವನ್ನೇ ಕೊಡದಿದ್ದರೆ ನಾನೇನು ಮಾಡಬೇಕು? ಹಾಗೆ ಅಲ್ಲಿ ಅಳುತ್ತಿದ್ದ ಹೆಣ್ಣುಮಕ್ಕಳನ್ನು ಕಾರಣ ಕೇಳಿದ್ದಕ್ಕೆ ಅವರು ಹೇಳಿದರು, ನೀವು ನಿಮ್ಮ ಕ್ಷೇತ್ರದಲ್ಲಿ ಪರ್ಯಟನೆ ಮಾಡುತ್ತಿದ್ದ ಕಾಲದಲ್ಲಿ ಗೇಣಿದಾರರಿಗೆ ಯಾರೂ ಗೇಣಿ ಕೊಡಬಾರದೆಂದು ಹೇಳಿದ್ದರಿಂದ ಅವರು ನಮಗೆ ಕೊಡುತ್ತಿದ್ದ ಅಷ್ಟಿಷ್ಟು ಗೇಣಿಯನ್ನು ಅದನ್ನೂ ಕೊಡದೆ ಎಲ್ಲಿಸಿದ್ದಾರೆ. ಅಂದಾಗ ನಮ್ಮ ಜೀವನಕ್ಕೇನು ದಾರಿ?

ಅದನ್ನು ಕೊಡುವಂತೆ ನೀವು ಮಾಡದಿದ್ದರೆ ನಿಮ್ಮ ಮನೆಯ ಬಾಗಿಲಲ್ಲೇ ನಾವು ಉಪವಾಸಮಾಡಿ ಪ್ರಾಣ ಬಿಡುತ್ತೇವೆಂದು ಹೇಳಿದರು. ಆ ರೋಧನವನ್ನು ನೋಡುವುದಕ್ಕೆ ನನ್ನಿಂದ ಸಾಧ್ಯವಾಗಲಿಲ್ಲ. ಕಾನೂನು ಪ್ರಕಾರ ಸಣ್ಣ ಹಿಡುವಳಿದಾರರಿಗೆ ಗೇಣಿಯನ್ನು ಕೊಡಬೇಕೆಂದು ಕಾನೂನಿನಲ್ಲಿ ಇದೆ......

Mr. DEPUTY SPEAKER.—I said at the outset that all members have goodwill for him. He went on dilating on some matter. I reminded him of the provisions under the constitution and rules of procedure. I told him what exactly he is creating for himself. Still the hon. member thinks that he is right. I am helpless to help the hon. member. If he goes on like this, I will have to cut short his time and call other members.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಆದರೆ ಇವತ್ತಿನವರೆಗೆ ಆಚರಣೆಗೆ ತಂದಿಲ್ಲ. ಹಳ್ಳಿಗಳಲ್ಲಿ ಪಡುವ ಕಷ್ಟ ಅಷ್ಟಿಷ್ಟಲ್ಲ. ಶ್ರೀಮಾನ್ ಸುಬ್ಬಯ್ಯಶೆಟ್ಟರು ಕೂಡಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ, ಕಾನೂನನ್ನು ಜಾರಿಗೆ ತರುತ್ತೇವೆ ಎಂದು ಹೇಳಿದರು. ಯಾವಾಗ ತರುವರೋ ಏನೋ. ಬೇಗ ಸರಿಯಾಗಿ ಜಾರಿಗೆ ತರದೇ ಹೋದರೆ ಯಾರಿಂದ ಮತ ಪಡೆದು ಬಂದಿದ್ದೇವೆ ಅವರಿಗೆ ದ್ರೋಹ ಮಾಡಿದಂತಾಗುವುದು. ಶೇಕಡ 50 ಭಾಗದಷ್ಟು ಮಹಿಳೆಯರಿರುವ ಸಮಾಜದಲ್ಲಿ ಅವರೆಲ್ಲರೂ ನಮಗೆ ಮತ ಕೊಟ್ಟಿದ್ದಾರೆ. ಇದು ನಿಜ. ಅವರ ಆಶೋತ್ತರವನ್ನು ಈಡೇರಿಸದಿದ್ದರೆ ನಾವು ನಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ಹೆಣ್ಣುಮಕ್ಕಳಿಗೆ ಸಾಕಷ್ಟು ರಕ್ಷಣೆ ಒದಗಿಸದಿದ್ದರೆ ನಾವು ಅವರಿಂದ ಘೇರಾವ್‌ಗೆ ತುತ್ತಾಗಬೇಕಾಗುತ್ತದೆ, ಇದನ್ನು ನೋಡಿ ನನಗೆ ಹೆದರಿಕೆಯಾಗುವುದು. ಹೆಣ್ಣುಮಕ್ಕಳು ಘೇರಾವ್ ಮಾಡಿದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಇದು ಬಹಳ ತಾಪತ್ರಯದ ಕೆಲಸ. ನಮ್ಮ ಜಿಲ್ಲೆಯಲ್ಲಿ ಮತ್ತು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇದ, ಬಹಳವಾಗಿ ನಡೆಯುತ್ತಿದೆ. ಈ ದಿವಸ ಸರಕಾರದಲ್ಲಿ ಅರಿಕೆ ಮಾಡುವುದು ಏನಾದರೂ ಮಾಡಿ ಸಣ್ಣ ಹಿಡುವಳಿದಾರರು ಮತ್ತು ವಿಧವೆಯರ ನೆರವಿಗೆ ಸರಕಾರ ಬರಬೇಕು ಎಂದು. ಇಲ್ಲದಿದ್ದರೆ ಸರಕಾರಕ್ಕೆ ಖಂಡಿತ ಒಳ್ಳೆಯ ಹೆಸರು ಬರುವುದಿಲ್ಲ. ಹೆಣ್ಣುಮಕ್ಕಳು ಕಣ್ಣೀರಿಟ್ಟರೆ ಖಂಡಿತ ಒಳ್ಳೆಯದಾಗುವುದಿಲ್ಲ. ಇದನ್ನು ನಾನು ಆಗ್ರಹಪೂರ್ವಕವಾಗಿ ಹೇಳುತ್ತಿದ್ದೇನೆ. ಅವರು ಸತ್ಯಾಗ್ರಹ ಮುಂತಾದ್ದನ್ನು ಮಾಡಲು ಅವಕಾಶ ಕೊಡದೆ ಮುಂಚಿತವಾಗಿ ಅವರ ಜೀವನಕ್ಕೆ ಆಧಾರ ಮಾಡಿಕೊಟ್ಟರೆ ಒಳ್ಳೆಯದಾಗುವುದು.

ಇನ್ನೊಂದು ವಿಷಯ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಕೆಲವು ದಿವಸಗಳ ಹಿಂದೆ ಪ್ರವಾಸ ಬಂದಾಗ ರಿಪ್ಪನ್‌ಪೇಟೆಯಲ್ಲಿ ಸಾವಿರಾರು ರೈತರ ಎದುರಿಗೆ ಕೆಲವು ಮಾತುಗಳನ್ನು ಹೇಳಿದರು, ಸರಕಾರಿ ನೌಕರರು ರೈತರ ವಿರುದ್ಧ ಏನಾದರೂ ಕೇಸ್ ಮಾಡಿದರೆ ಅವರಮೇಲೆ ಶಿಸ್ತಿನ ಕ್ರಮ ಕೈಕೊಳ್ಳಬೇಕು ಎಂದು ಮೇಲಧಿಕಾರಿಗಳಿಗೆ ತಿಳಿಸಿದರು. ಆದರೆ ಇವತ್ತಿಗೂ ಕೂಡ ನೌಕರರು ಭೂಮಾಲೀಕರ ಏಜೆಂಟರಾಗಿ ವರ್ತಿಸುತ್ತಿದ್ದಾರೆ. ಹೀಗಾದರೆ ನಮ್ಮ ಶಾಸನ ಜಾರಿಗೆ ಕೊಟ್ಟರೆ ಅವರಿಂದ ಎಷ್ಟುಮಟ್ಟಿಗೆ ಫಲ ದೊರೆಯುವುದು ಎಂದು ನಾನಾದರೂ ಕೇಳುತ್ತೇನೆ. ಈ ದಿವಸ ನಮ್ಮ ಉದ್ದೇಶ ದೊಡ್ಡದು, ಚರಿತ್ರೆಯಲ್ಲಿಲ್ಲದಿರುವ ಕೆಲಸ ಮಾಡಿದ್ದೇವೆ. ಎಷ್ಟೋ ಜನರಿಗೆ ಹತ್ತು ಅಡಿ ಜಾಗ ಕೂಡ ಇರಲಿಲ್ಲ, ಅಂಥವರಿಗೆ ಲಕ್ಷಗಟ್ಟಲೆ ಇದ್ದ ಆ ಜನರಿಗೆ ವಾಸಮಾಡಿಕೊಂಡಿರಲು ಮನೆಗೆ ಸೌಕರ್ಯಮಾಡಿಕೊಟ್ಟಿದ್ದಾರೆ. ಆ ಜನರಿಗೆ ಅದರ ಚಿಂತನೆಯೇ ಇರಲಿಲ್ಲ. ಈ ದಿವಸ ಈ ಸರಕಾರ ಬಂದಮೇಲೆ ಈ ದೇಶದಲ್ಲಿ ಮನೆಯಿಲ್ಲದೆ ಯಾರೂ ಇರಬಾರದು, ವಾಸಕ್ಕೆ ಪ್ರತಿಯೊಬ್ಬರಿಗೂ ಜಾಗವಿರಬೇಕು ಎಂಬ ತತ್ವದಂತೆ ಕಾರ್ಯಕ್ರಮ ಜಾರಿಗೆ ತಂದರು. ಆದರೆ ನಮ್ಮಲ್ಲಿರುವವರು ಎಂಥವರು ? ನನ್ನ ಕ್ಷೇತ್ರದಲ್ಲಿ ಒಂದು ದೂರು ಬಂತು, ಒಬ್ಬ ಅರ್ಜಿ ಕೊಟ್ಟ. ಒಂದು ಮನೆಯ ಸಂಬಂಧವಾಗಿ ರಿಕಾರ್ಡ್ ಮಾಡಲು ರೆವೆನ್ಯೂ ಇನ್‌ಸ್ಪೆಕ್ಟರು ಕೇಳುತ್ತಿದ್ದಾರೆ ನಾನೇನು ಮಾಡಬೇಕು ಎಂದು ಆತ ಕಣ್ಣೀರಿಟ್ಟ. ಇಂತಹ ಸಮಾಜಘಾತಕರ ಅನೀತಿವಂತರ ಯಂತ್ರ ಸರಕಾರದಲ್ಲಿರುವಾಗ ಅವರು ಎಷ್ಟು ಜನರ ಹಿತ ಸಾಧಿಸಬಹುದು ? ನಾವೆಷ್ಟು ತತ್ವಗಳನ್ನಿಟ್ಟುಕೊಂಡು ಜನಹಿತ ಸಾಧಿಸಲು ತೊಡಗಿದರೂ ಸಹ ಅದನ್ನು ಆಚರಣೆಗೆ ತರಲು ಕೊನೆಯ ಹಂತದಲ್ಲಿ ಅದು ಶೇಕದಾರರ ಬಳಿಗೆ ಹೋಗುವುದು. ಮುಖ್ಯಮಂತ್ರಿಗಳಿಗೆ ಕಾಗದ ಬರೆದರೂ ರೆವೆನ್ಯೂ ರಿಕಾರ್ಡ್ ಬಿಲ್ಡಪ್ ಮಾಡಲು ಅದು ಶೇಕದಾರರ ಬಳಿಗೆ ಹೋಗಬೇಕು. ಆತ ತನಗೆ ಬರಬೇಕಾದ ಮಾಮೂಲು ಬರುವವರೆಗೆ ಕಾಗದವನ್ನು ಹಾಗೆಯೇ ಇಟ್ಟುಬಿಡುವನು. ಒಳ್ಳೆಯವರು ಸಹ ಇದ್ದಾರೆ.ಇಂಥ ದುಷ್ಕ

ಮಿರ್ಗಗಳಿಂದ ಒಳ್ಳೆಯುವರಿಗೆ ಹೆಚ್ಚು ಕೆಲಸ ಮಾಡಲು ಅವಕಾಶವಿಲ್ಲದಂತಾಗಿದೆ. ಇಂಥ ಪರಿಸ್ಥಿತಿ ಇರುವಾಗ ಸಮಾಜವಾದನ್ನು ಜಾರಿಗೆ ತರಲು ಸಾಧ್ಯವೇ ಎಂಬ ಅನುಮಾನ ಬರುವುದು. ಪಟ್ಟಭದ್ರ ಹಿತಾಸಕ್ತಿಗಳಿಂದ ಅಂಥಹ ತಪ್ಪಿತಸ್ಥರಿಗೆ ಶಿಕ್ಷೆ ಮಾಡಲು ಅವಕಾಶವಿಲ್ಲಂದತಾಗಿದೆ, ಶಿಕ್ಷೆ ವಿಧಿಸಿದರೆ ಕೋರ್ಟಿಗೆ ಹೋಗುವರು. ಕೋರ್ಟಿನಲ್ಲಿ ತಪ್ಪು ಸಾಬೀತಾಗದೆ ದುಷ್ಕರ್ಮಿಗಳನ್ನು ಬಿಟ್ಟುಬಿಡುವರು. ಈ ದಿವಸ ಒಂದು ಪಕ್ಷದ ಸರಕಾರವಿರಬಹುದು, ನಾಳೆ ಬೇರೆ ಸರಕಾರ ಬರಬಹುದು. ಯಾವ ಸರಕಾರವೇ ಬರಲಿ ಅಧಿಕಾರಿಗಳು ಯೋಗ್ಯರಾದವರಿರಬೇಕು. ಸರಕಾರದ ಯೋಜನೆಗಳನ್ನು ಕುಂಠಿತಗೊಳಿಸುವ ಘಾತಕರಿದ್ದರೆ ಸುಧಾರಣೆ ಜಾರಿಗೆ ತರಲು ಹೇಗೆ ಸಾಧ್ಯ ಎಂಬುದನ್ನು ಗಮನಿಸಬೇಕು. ಇಂದು ಭೂಸುಧಾರಣೆ ಜಾರಿಗೆ ಬಂತು, ಟ್ರಿಬ್ಯೂನಲ್ ನೇಮಕವಾಗಿದೆ ತಹಸೀಲ್ದಾರರು ಸ್ಥಳ ಅಜಮಾಯಿಷಿ ಮಾಡಿ ತೀರ್ಮಾನ ಮಾಡಬೇಕೆಂದರೆ ಅವಕಾಶವಿಲ್ಲವೆಂದು ಹೇಳುವರು. ಇದರಿಂದ ಜನರ ಹಿತಕ್ಕಾಗಿ ಮಾಡುವ ಪ್ರಾವಿಷನ್ ರೂಲ್ಸ್‌ಗಳಿಂದ ಹಿತವಾಗುವುದೇ ? ಇಂದು ಒಂದು ಅರ್ಜಿಕೊಟ್ಟರೆ ಕೆಲಸವೇನಾಗಬೇಕೋ ಅದಾಗದಂತೆ ಇರುವ ತೊಡಕನ್ನು ಹುಡುಕಿ ಹೇಳುವರು, ಇಂಥ ಸೆಕ್ಷನ್ ಪ್ರಕಾರ ಇದು ಸಾಧ್ಯವಿಲ್ಲ ಎಂದು ಹೇಳುವರು. ಕಾನೂನಿರುವುದು ಜನಹಿತ ಸಾಧಿಸುವುದಕ್ಕೆ. ಹೇಗಾದರೂ ಮಾಡಿ ಜನರಿಗೆ ಒಳ್ಳೆಯದಾಗುವಂತೆ ಮಾಡಲೇಬೇಕು. ನಮ್ಮ ಮುಖ್ಯಮಂತ್ರಿಗಳು ಪ್ರವಾಸ ಮಾಡಿದಾಗ ನೂರಾರು ಅರ್ಜಿ ಕೊಟ್ಟರು, ಆಗ ಮುಖ್ಯಮಂತ್ರಿಗಳು ಡಿ. ಸಿ. ಮತ್ತು ತಾಸಿಲ್ದಾರರಿಗೆ ಹತ್ತಾರು ವರ್ಷಗಳಿಂದ ಕೆಲವು ಜಮೀನುಗಳನ್ನು ಸಾಗುಮಾಡಿರುವವರಿದ್ದಾರೆ, ಈಗ ಹೊಸ ಆಕ್ಟ್ ಬಂದಮೇಲೆ ಅವರಿಗೆ ತೊಂದರೆಯಾಗಿದೆ, ಆದುದರಿಂದ ಅಂಥವರ ಒಂದು ಪಟ್ಟಿಮಾಡಿ ಹತ್ತು ವರ್ಷಗಳಿಂದ ಯಾರು ಸಾಗುಮಾಡುತ್ತಿದ್ದಾರೆ, ರೆವೆನ್ಯೂ ಲ್ಯಾಂಡ್ ಎಷ್ಟಿದೆ ಎಂದು ಪಟ್ಟಿಮಾಡಿ ಇದರ ಬಗ್ಗೆ ಒಂದು ವ್ಯವಸ್ಥೆಮಾಡಬೇಕಾವುದು ಎಂದು ಹೇಳಿದರು. ಆದರೆ ಇವತ್ತಿನವರೆಗೆ ಆ ಪಟ್ಟಿ ತಯಾರಾಗಿಲ್ಲ, ಇದನ್ನು ಹೇಳಿ ಆರು ತಿಂಗಳಾಯಿತು.

ಇವತ್ತು ನಾನು ಕೇಳುತ್ತೇನೆ, ಜನ ಹಿತ ಸಾಧನೆ ಮಾಡತಕ್ಕ ಆಡಳಿತ ಯಂತ್ರವನ್ನು ನಾವು ಇಟ್ಟುಕೊಂಡಿದ್ದೇವೆಯೇ, ಇದನ್ನು ಯಾವರೀತಿ ಸಾಧನೆ ಮಾಡಬೇಕು ? ಇದನ್ನು ಪ್ರತಿಯೊಬ್ಬ ಬುದ್ಧಿವಂತನೂ ಕೂಡ ಯೋಚನೆ ಮಾಡಬೇಕಾದಂಥಾದ್ದು. ಇವತ್ತು ನಾವು ಜನತಾ ನ್ಯಾಯಾಲಯವನ್ನು ಮಾಡಿದ್ದೇವೆ, ಜನತಾ ನ್ಯಾಯಾಲಯವನ್ನು ಮಾಡಿ ಅಧ್ಯಕ್ಷರು ಯಾರನ್ನು ಹಾಕುತ್ತೇವೆ ? ಅಸಿಸ್ಟೆಂಟ್ ಕಮಿಷನರ್‌ನ್ನು ಹಾಕುತ್ತೇವೆ. ಪ್ರದೇಶಕ್ಕೆ ಸಂಬಂಧಪಟ್ಟ ಎಂ.ಎಲ್.ಎ ಅನ್ನು ಅಧ್ಯಕ್ಷರನ್ನಾಗಿ ಮಾಡುವುದಕ್ಕಾಗುವುದಿಲ್ಲವೇ ? ಜನತೆಯ ಹಿತಚಿಂತೆ ಮಾಡತಕ್ಕಂಥ ಕಕ್ಕುಲಾತೆಯನ್ನು, ವ್ಯಾಕುಲತೆಯನ್ನು ಒಬ್ಬ ಶಾಸಕ ಇಟ್ಟುಕೊಂಡಿರುತ್ತಾನೆಯೇ, ಒಬ್ಬ ಅಧಿಕಾರಿ ಇಟ್ಟುಕೊಂಡಿರುತ್ತಾನೆಯೇ ? ಆದ್ದರಿಂದ ಒಬ್ಬ ಶಾಸಕನನ್ನು ಇದಕ್ಕೆ ಅಧ್ಯಕ್ಷನನ್ನಾಗಿ ಮಾಡಿದರೆ ಶೋಭೆ ಬರುತ್ತದೆ.

ಪ್ರಜಾ ಪ್ರಭುತ್ವದಲ್ಲಿ ಶಾಸನಸಭೆಯು ಉಚ್ಛಸ್ಥಾನದಲ್ಲಿರತಕ್ಕ ಸಂಸ್ಥೆ. ಶಾಸನಸಭೆಯ ನಂತರ ನ್ಯಾಯಾಲಯ ಬರುತ್ತದೆ. ನ್ಯಾಯಾಲಯದನಂತರ ಕಾರ್ಯಾಂಗ ಬರುತ್ತದೆ. ಶಾಸನ ಸಭೆಯ ಸದಸ್ಯನನ್ನು, ಸದಸ್ಯನನ್ನಾಗಿ ಮಾಡಿ ಒಬ್ಬ ಅತ್ಯಂತ ಕೊನೆಯ ಮಟ್ಟದ ನೌಕರನನ್ನು ತೆಗೆದುಕೊಂಡು ಹೋಗಿ ಅಧ್ಯಕ್ಷನನ್ನಾಗಿ ಮಾಡುವುದು ಯಾವ ನ್ಯಾಯ ? ಇದು ಪ್ರಜಾಪ್ರಭುತ್ವಕ್ಕೆ ಕಳಂಕ ಬರುತ್ತದೆ ಎನ್ನುವ ಪ್ರಶ್ನೆಯನ್ನು ಈ ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಕೈಗಾರಿಕೆಗಳ ಬಗ್ಗೆ ಇವತ್ತು ನಾವು ಬೃಹದಾಕಾರವಾಗಿ ಎಲ್ಲಾ ಕಡೆಯಲ್ಲಿಯೂ ಗೃಹಕೈಗಾರಿಕೆಗಳನ್ನು ಮತ್ತು ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ಬೆಳಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ ಇದಕ್ಕಾಗಿ ನಾವು ಜಿಲ್ಲಾ ಮಟ್ಟದಲ್ಲಿ ಕೆಲವಾರು ಎಕ್ಸ್‌ಟೆನ್‌ಷನ್ ಆಫೀಸರ್‌ಗಳನ್ನು ಹಾಕಿಕೊಂಡಿದ್ದೇವೆ ಈ ಆಫೀಸರ್‌ಗಳನ್ನು ಹಾಕಿರತಕ್ಕ ಉದ್ದೇಶ ಏನು ? ಅವರು ಊರು ಊರಿಗೆ ಹೋಗಿ ಕೈಗಾರಿಕೆಗಳನ್ನು ಎಲ್ಲಿ ಸ್ಥಾಪನೆ ಮಾಡಬಹುದು, ಯಾವ ಯಾವರೀತಿಯಲ್ಲಿ ಮಾಡಬಹುದು ಎನ್ನುವುದನ್ನು ಹೇಳುವುದಕ್ಕೆ ಅವರು ಇರುವುದು. ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿ ತೆಗೆದುಕೊಂಡರೆ 5–6 ಜನ ಈ ಆಫೀಸರ್‌ಗಳು ಇದ್ದಾರೆ. ಇವರು ಯಾವರೀತಿಯ ಪ್ರಗತಿಯನ್ನು ತೋರಿಸಿದ್ದಾರೆ, ಎಷ್ಟು ಕೈಗಾರಿಕೆಗಳನ್ನು ಮಾಡಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಿ ? ನಾನು ಕೇಳುತ್ತೇನೆ, ಅವರ ರಿಪೋರ್ಟ್ ಏನು ? ಮೂರು ವರ್ಷಗಳಿಂದ ಅವರು ಸರ್ಕಾರಕ್ಕೆ ಎಷ್ಟು ರಿಪೋರ್ಟನ್ನು ಕೊಟ್ಟಿದ್ದಾರೆ. ರಿಪೋರ್ಟ ಪ್ರಕಾರ ಯಾವ ಯಾವ ಕೈಗಾರಿಕೆ ಕಾರ್ಯಗತವಾಗಿದೆ ? ಎನ್ನುವುದನ್ನು ಯಾರಾದರೂ ನೋಡಿದ್ದಾರೆಯೇ ? ಒಂದೇ ನಿದರ್ಶನ ಕೊಡುತ್ತೇನೆ, ರಿಪ್ಪನಪೇಟೆ ಎನ್ನುವ ಊರು ಇದೆ. ಅಲ್ಲಿ ಚಾಪೆ ಹೆಣೆಯುವುದು, ಮತ್ತು ಚಮ್ಮಾರರ ಕೆಲವು ಕಸುಬುಗಳನ್ನು ಮಾಡಿ

ಕೊಂಡಿರುತ್ತಾರೆ. ಒಬ್ಬರು ಎಕ್ಸ್‌ಟೆನ್‌ಷನ್ ಆಫೀಸರ್ ಒಂದು ಸೊಸೈಟಿಯನ್ನು ನಿರ್ಮಾಣ ಮಾಡಿದರು. ಅದರ ಅಧ್ಯಕ್ಷತೆಯನ್ನು ನಾನು ವಹಿಸಿದ್ದೆ. ಅದರ ಭವಿಷ್ಯವೂ ಉಜ್ವಲವಾಗಿರುತ್ತದೆನ್ನುವ ನಿರೀಕ್ಷಣೆ ಇತ್ತು. 1973ನೇ ಇಸವಿಯಲ್ಲಿ ಇದು ನಿರ್ಮಾಣವಾಯಿತು. ಈ ಸೊಸೈಟಿ ರಿಜಿಸ್ಟರ್ ಆಗಿ ಬರುವುದು ಎರಡೂವರೆ ವರ್ಷವಾಯಿತು. ರಿಜಿಸ್ಟರ್ ಆದಮೇಲೆ ಅದಕ್ಕೆ ನೆರವನ್ನು ಕೊಡಬೇಕು ಎಂದು ಬರೆದರೆ........

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇಲ್ಲಿಯ ಕೈಗಾರಿಕಾ ಆಫೀಸರ್ ಅವರು ಇದು ನಮಗೆ ಲಾಗು ಆಗುವುದಿಲ್ಲ ಎಂದು ಎರಡೂವರೆ ವರ್ಷದ ಮೇಲೆ ಕಾಗದ ಬರೆದರು. ಅಲ್ಲದೆ ನೀವು ಡಿ.ಸಿ.ಸಿ. ಬ್ಯಾಂಕ್ ಕೇಳಬೇಕು ಎಂದು ಹೇಳಿದರು ಡಿ. ಸಿ. ಸಿ. ಬ್ಯಾಂಕಿನವರನ್ನು ಕೇಳಿದರೆ ಅವರು ಇದು ನಮಗೆ ಲಾಗು ಆಗುವುದಿಲ್ಲ, ಇಂಡಸ್ಟ್ರಿಯಲ್ ಫಿನಾನ್ಸ್ ಕಾರ್ಪೊರೇಷನ್ ಕೇಳಬೇಕು ಎಂದು ಹೇಳಿದರು. ಇಂಥ ಅಡಚಣೆಗಳನ್ನು ಇಟ್ಟುಕೊಂಡು ಇಂಥ ಗೊಂದಲವನ್ನು ಇಟ್ಟುಕೊಂಡು ಎಷ್ಟು ಕಾಲತಾನೇ ಜನರ ಏಳಿಗೆಯನ್ನು ಮಾಡಲಿಕ್ಕಾಗುತ್ತದೆ? ಎನ್ನುವ ಪ್ರಶ್ನೆಯನ್ನು ನನ್ನ ಅನೇಕ ಮಿತ್ರರು ಇಟ್ಟುಕೊಂಡಿದ್ದಾರೆಂದು ತಿಳಿದುಕೊಂಡಿದ್ದೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ).—ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ರಾಜ್ಯಪಾಲರ ಭಾಷಣವನ್ನು ಓದಿದ ಹಾಗೆ ನಾವೆಲ್ಲರೂ ತಿಳಿದುಕೊಂಡು ಅದರ ಮೇಲೆ ಚರ್ಚೆ ಮಾಡಬೇಕು ಹೇಳಿರುವ ವಿಷಯದಲ್ಲಿ ನಾನು ಅದನ್ನು ವಿರೋಧಮಾಡುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ಅವರ ಭಾಷದಲ್ಲಿ ಅನೇಕ ವಿಷಯಗಳನ್ನು ಸ್ವಲ್ಪ ಸ್ವಲ್ಪವಾಗಿ ಪ್ರಸ್ತಾಪಮಾಡಿದ್ದಾರೆ. ಇದನ್ನು ನೋಡಿದರೆ ಏನೋ ಸ್ವಲ್ಪ ವಿಷಯಗಳನ್ನು ಸಭೆಗೆ ಸ್ವಲ್ಪಸ್ವಲ್ಪ ತಿಳಿಸದಂತೆ ಭಾಸವಾಗಿದೆ. ಅನೇಕ ಸಾರಿ ನಾವು ಸಭೆಯಲ್ಲಿ ಚರ್ಚೆಮಾಡುತ್ತಾ ಇರುವಾಗ ಭ್ರಷ್ಟಾಚಾರದ ವಿಷಯ ಪ್ರಸ್ತಾಪವಾಗಿದೆ ರಾಜ್ಯದಲ್ಲಿ ಇದರ ಬಗ್ಗೆ ಅನೇಕ ಜನಗಳ ಅಭಿಪ್ರಾಯವನ್ನು ತೆಗೆದುಕೊಂಡರೆ ಯಾವಾಗಲೂ ಇಲ್ಲದಂಥ ಕಷ್ಟ ಈಗ ಬಂದಿದೆ ಎಂದು ಹೇಳುತ್ತಾರೆ. ಒಂದು ಕಡೆ ಆಹಾರ, ಒಂದು ಕಡೆ ಬಟ್ಟೆ, ಒಂದು ಕಡೆ ವಸತಿ, ವಿದ್ಯೆ ಕೊಡಿ ಎಂದು ಕೇಳುತ್ತಿರುವ ಕಾಲದಲ್ಲಿ ನಾವು ಅನೇಕ ಘೋಷಣೆಗಳನ್ನು ಸರ್ಕಾರದ ಕಡೆಯಿಂದ ಕೇಳುತ್ತಿದ್ದೇವೆ. ಗಂಜಿ ಕುಡಿಯುವುದಕ್ಕೆ ಅವಕಾಶ ಸಿಕ್ಕದೆ ಇರುವ ಕಾಲದಲ್ಲಿ ಘೋಷಣೆಗಳನ್ನು ಕೇಳಿ ಹೊಟ್ಟೆ ತುಂಬಿಸಿಕೊಳ್ಳಬೇಕು. ಎಲ್ಲಿ ನೋಡಿದರೂ ಭ್ರಷ್ಟಾಚಾರ ಮನೆಯಿಲ್ಲದವರಿಗೆ ಮನೆ ಕೊಡುತ್ತೇವೆ, ಎಂದು ಎಲ್ಲಾ ಘೋಷಣೆಗಳನ್ನು ಹೇಳಿದ್ದಾರೆ. ಹಳ್ಳಿಗಳಲ್ಲಿ ಇರತಕ್ಕ ಕಾರ್ಮಿಕರಿಗಾಗಲಿ, ಬೆಳೆಯುತಕ್ಕ ರೈತರನ್ನು ಬಿಟ್ಟು ಇತರೆ ರೈತರಿಗಾಗಲೀ ಸರ್ಕಾರ ಆಹಾರಧಾನ್ಯ ಕೊಡತಕ್ಕ ಏರ್ಪಾಡು ಏನೂ ಆಗಿಲ್ಲ. ಪಟ್ಟಣದಲ್ಲಿ ಇರುವವರಿಗೆ 6—7 ಕೆ. ಜಿ. ಅಕ್ಕಿಯನ್ನು ಕೊಡುತ್ತಾರೆ. ಅದು ಒಂದೆರಡು ದಿವಸಕ್ಕೂ ಸಾಲದು. ಮತ್ತೆ ಅವರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಕೊಂಡು ಜೀವನ ಮಾಡಬೇಕು ಆದ್ದರಿಂದ ಸರ್ಕಾರದಿಂದ ಯಾವ ಕೆಲಸಕಾರ್ಯಗಳೂ ಈ ದಿಸೆಯಲ್ಲಿ ಆಗಿಲ್ಲ ಎಂದು ಹೇಳಬಹುದು. ಕೆಳಗಡೆಯಿಂದ ಮೇಲ್ಗಡೆಯವರೆಗೂ ಲಂಚ ಕೊಟ್ಟು ಕೆಲಸಗಳನ್ನು ಮಾಡಿಸಬೇಕು. ಲಂಚ ಇಲ್ಲದೆ ಯಾವುದೂ ನಡೆಯುವುದಿಲ್ಲ. ಲಂಚ ಕೊಟ್ಟರೆ ಉದ್ಯೋಗಗಳು ಸಿಕ್ಕುವುದು. ಇಂಜಿನಿಯರ್ ಉದ್ಯೋಗಕ್ಕೆ ಇಷ್ಟು ಹಣ ಕೊಡಬೇಕು, ಕ್ಲರ್ಕ್ ಇಷ್ಟು ಹಣಕೊಡಬೇಕು ಪ್ರತಿಯೊಂದಕ್ಕೂ ಗ್ರೇಡ್‌ವಾರು ಲಂಚ ಕೊಡಬೇಕು. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಹೆಸರು ಕಳುಹಿಸಲೂ ಲಂಚ ಕೊಡುವ ಸ್ಥಿತಿ ಬಂದಿದೆ. ಸರ್ಕಾರದವರು ಭ್ರಷ್ಟಾಚಾರವನ್ನು ತೊಲಗಿಸಲು ಧಕ್ಷತೆಯಿಂದ ಚೆನ್ನಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಇದರಲ್ಲಿ ನಮೂದಿಸಿದ್ದಾರೆ. ಇದರ ಬಗ್ಗೆ ಏನೇನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಕಳ್ಳಸಾಗಾಣಿಕೆದಾರರನ್ನು ಬಂಧಿಸಿದ್ದೇವೆಂದು ಹೇಳಿದ್ದಾರೆ. ಅವರನ್ನು ಮಾಮೂಲಾಗಿ ಬಂಧಿಸಿದ್ದಾರೆಯೇ ಹೊರತು, ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಕಳ್ಳ ವ್ಯಾಪಾರ ಮಾಡುವವರನ್ನು ಸಾವಿರಾರು ಪಲ್ಲ ಭತ್ತವನ್ನು ಸ್ಟಾಕ್ ಮಾಡಿರುವವರನ್ನು ಹಿಡಿದು ಶಿಕ್ಷೆ ಮಾಡಿದ್ದೀರಾ? ಇಂಥ ಪ್ರಸಂಗಗಳು ಇದುವರೆಗೂ ಪತ್ರಿಕೆಯಲ್ಲಿಯೂ ಬರಲಿಲ್ಲ. ಅದರ ಒಂದು ರಿಪೋರ್ಟ್ ಇಲ್ಲ. ಬರೀ ಸಣ್ಣಪುಟ್ಟ ಅಂದರೆ ಕೇವಲ 10–15 ಕೆ. ಜಿ. ಕಳ್ಳಸಾಗಾಣಿಕೆಯಾದರೆ ಅದರ ಬಗ್ಗೆ ಮಾತ್ರ ರಿಪೋರ್ಟ್ ಬರೆಯುತ್ತಾರೆ. ದೊಡ್ಡ ದೊಡ್ಡ ಕಳ್ಳಸಾಗಾಣಿಕೆಗಾರರನ್ನು ಹಿಡಿದಿರುವವರಲ್ಲಿ ಯಾರಿಗೆ ಶಿಕ್ಷೆಯಾಗಿದೆ ಎಂಬುದನ್ನು ಹೇಳಿ ನೋಡೋಣ. ಆದ್ದರಿಂದ ಈ ದೇಶದಲ್ಲಿ ನಿಜವಾಗಿ ದಕ್ಷತೆಯಿಂದ ಆಡಳಿತ ನಡೆಯುತ್ತಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಈ ದೇಶದಲ್ಲಿ ಹರಿಜನ ಗಿರಿಜನರಾಗಲೀ ರೈತ ಕಾರ್ಮಿಕವರ್ಗದವರಾಗಲೀ, ಮಧ್ಯಮವರ್ಗದವರಾಗಲೀ, ಶ್ರೀಮಂತರೇ ಆಗಲೀ ಸುಖವಾಗಿ

ಸಮಾಧಾನಕರವಾಗಿ ಜೀವನ ಮಾಡುತ್ತಿದ್ದಾರೆಂದೂ ಹಾಗೂ ಸಂತೋಷವಾಗಿದ್ದಾರೆಂದೂ ಯಾರೂ ಹೇಳುವುದಕ್ಕಾಗುವುದಿಲ್ಲ. ಅಂದಮೇಲೆ ಇವರ ಒಂದು ಆಡಳಿತವನ್ನು ನೋಡಿ ಈಗ ಯಾರಿಗೂ ಸಮಾಧಾನವಿಲ್ಲ. ಪ್ರತಿಯೊಬ್ಬರೂ ಏನಪ್ಪಾ, ಇವತ್ತು ಈ ಕಷ್ಟ, ಆ ಕಷ್ಟ, ನಮಗೆ ಕಿರುಕುಳ ಕೊಡುತ್ತಿದ್ದಾರೆ, ತೊಂದರೆ, ಕಷ್ಟಗಳೇ ಜಾಸ್ತಿ ಎಂದು ಹೇಳುತ್ತಿದ್ದಾರೆಯೇ ಹೊರತು ಬೇರೆ ಏನೂ ಹೇಳುತ್ತಾ ಇಲ್ಲ. ಯಾವ ಕಾಲಿಕ್ಕೆ ಪರಿಹಾರವಾಗುತ್ತದೋ ಎಂದು ಎಲ್ಲರೂ ಯೋಚನೆ ಮಾಡುತ್ತಿದ್ದಾರೆ. ಆದರಿಂದ ಹತಾಶರಾಗಿದ್ದಾರೆ. ಯಾರಾದರೂ ಯಾರಮೇಲೆಯಾದರೂ ದೂರನ್ನು ಕೊಡುವುದಕ್ಕೆ ಹೋದರೆ ನಮ್ಮಲ್ಲಿ ಜನಗಳು ಏನು ಹೇಳುತ್ತಾರೆಂದರೆ, ಕಂಪ್ಲೇಂಟ್ ಕೊಡುವುದಕ್ಕೆ ಹೋದವರನ್ನೇ ಪೋಲೀಸಿನವರು ಹಿಡಿದುಕೊಂಡು ಅವರಿಂದ 100-200 ರೂಪಾಯಿಗಳನ್ನು ಈಗ ವಸೂಲುಮಾಡುತ್ತಿದ್ದಾರೆಂದು. ಹೀಗಾದರೆ ಯಾವ ರೀತಿಯಲ್ಲಿ ದೂರನ್ನು ಕೊಡಬೇಕೋ ಗೊತ್ತಾಗಲಿಲ್ಲ. ದೂರು ಕೊಟ್ಟವರನ್ನೇ ಹೆಚ್ಚಿಗೆ ಹೆದರಿಸಿ, ಹೆದರಿಸಿ, ಶಿಕ್ಷೆ ಕೊಟ್ಟ ನಿದರ್ಶನಗಳು ಬೇಕಾದಷ್ಟಿವೆ. ಅವನ್ನೆಲ್ಲಾ ನಾನು ಈ ಸಭೆಯಲ್ಲಿ ಕೊಡುವುದಕ್ಕೆ ಸಿದ್ಧನಾಗಿದ್ದೇನೆ.

1-00 P. M.

ಇನ್ನೊಂದು ವಿಷಯ. ಕೆಲವು ಸಣ್ಣಸಣ್ಣ ಆಸ್ಪತ್ರೆಗಳಲ್ಲಿ ಆದರಲ್ಲಿಯೂ ಹೆರಿಗೆ ಆಸ್ಪತ್ರೆಗಳಲ್ಲಿ ಆಯಾದಿಂದ ಹಿಡಿದು ಡಾಕ್ಟರ್‌ಗಳವರೆಗೆ ಇಷ್ಟಿಷ್ಟು ದುಡ್ಡು ಕೊಟ್ಟರೆ ಮಾತ್ರ ಟ್ರೀಟ್‌ಮೆಂಟ್ ಮಾಡುತ್ತೇವೆಂದು ಹೇಳುವುದು ಜಾಸ್ತಿಯಾಗಿದೆ. ಅವರಿಂದಾಗಿ ಅನೇಕ ಜನರು ತಾವಾಗಿ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಿಸಿಕೊಂಡು ಖಾಸಗೀ ಆಸ್ಪತ್ರೆಗಳಿಗೆ ಹೋಗುವ ಪ್ರಸಂಗ ಬಂದಿದೆ. ಈ ವಿಚಾರವಾಗಿ ನಾನು ಎಷ್ಟೋ ಸಾರಿ ಮಾನ್ಯ ಮಂತ್ರಿಗಳಿಗೂ ಅನೇಕ ಕಾಗದ ಪತ್ರಗಳನ್ನು ಬರೆದಿದ್ದೇನೆ. ಅವರಿಗೆ ಇದುವರೆಗೂ ಯಾವ ಕ್ರಮವನ್ನೂ ಅವರ ಬಗ್ಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತಾ ಇಲ್ಲ. ಅದರ ಕಡೆಗೆ ಮಾನ್ಯ ಮಂತ್ರಿಗಳು ಲಕ್ಷವಿಡಬೇಕು.

ಮತ್ತೊಂದು ವಿಚಾರ. ನನಗೆ ತಿಳಿದುಬಂದಿರುವ ಹಾಗೆ ಅನೇಕ ಸೊಸೈಟಿಗಳಲ್ಲಿ ಸಾವಿರಾರು ರೂಪಾಯಿಗಳು, ಲಕ್ಷಾಂತರ ರೂಪಾಯಿಗಳು ದುರುಪಯೋಗವಾಗುತ್ತಿದೆ. ಎಷ್ಟೋ ಸಾರಿ ಈ ವಿಚಾರ ಈ ಸದನದ ಗಮನಕ್ಕೆ ಬಂದಿದೆ. ಅದರ ಮೇಲೆ ಸರ್ಕಾರದ ಕ್ರಮ ಏನೂ ಇಲ್ಲ. ಉದಾಹರಣೆಗೆ ಹೇಳುವುದಾದರೆ ಮೈಸೂರು ಇನಕಲ್ ಬಸವೇಶ್ವರ ಹಾಲಿನ ಸಹಕಾರಿ ಸಂಘದಲ್ಲಿ ಸುಮಾರು 66 ಸಾವಿರ ರೂಪಾಯಿಗಳಷ್ಟು ದುರುಪಯೋಗವಾಗಿದೆ. 1973ನೇ ಇಸವಿಯ ಆಡಿಟ್ ರಿಪೋರ್ಟ್‌ನಲ್ಲಿ ಆ ರೀತಿ ದುರುಪಯೋಗವಾಗಿದೆಯೆಂದು ವರದಿಮಾಡಿದ್ದರೂ ಇದುವರೆಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಪೋಲೀಸಿನವರೂ ಸಹ ಕ್ರಮ ತೆಗೆದುಕೊಳ್ಳಲಿಲ್ಲ. ಇಂತಹ ಇನ್‌ಸ್ಟೆನ್ಸಸ್ ನನ್ನಲ್ಲಿ ಬೇಕಾದಷ್ಟಿವೆ. ಅದರ ಬಗ್ಗೆ ಇದುವರೆಗೆ ಸರ್ಕಾರದವರು ಏಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಿಲ್ಲ ? ಯಾರೋ ಇವರನ್ನು ಹೆದರಿಸಬಹುದು, ಅಥವಾ ಪೋಲೀಸ್ ಅಧಿಕಾರಿಗಳನ್ನು ಹೆದರಿಸುವುದು—ಹೀಗೆ ಮೇಲಿನಿಂದ ಕೆಳಗಿನವರೆಗೆ ಇದಕ್ಕೆ ಎಲ್ಲರೂ ಜಾಮೀನಾಗಿದ್ದಾರೆಂದು ನನಗೆ ಕಾಣುತ್ತಿದೆ. ಇದರ ಬಗ್ಗೆ ಸೂಕ್ತ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು.

ಇನ್ನೊಂದು ವಿಚಾರ. ಮೈಸೂರು ಸಿಟಿ ಟ್ರಸ್ಟ್‌ಬೋರ್ಡ್ ಆಫೀಸಿನಲ್ಲಿಯೇ ಕೆಲವು ಜನಗಳಿಂದ ಹಿಂದೆ ನಾಲ್ಕೂವರೆ ಲಕ್ಷ ರೂಪಾಯಿಗಳ ಒಂದು ಚೆಕ್ ದುರುಪಯೋಗವಾಗಿದೆ. ಆ ಚೆಕ್ಕನ್ನು ಫೋರ್ಜರಿ ಮಾಡಿರುವ ನಿದರ್ಶನವಿದೆ. ಇದರಲ್ಲಿ ಒಬ್ಬಿಬ್ಬ ನೌಕರರನ್ನು ಸಸ್‌ಪೆಂಡ್ ಮಾಡುವುದಷ್ಟೇ. ಅವರ ಬಗ್ಗೆ ಹಿಂದೆ ಚಾರ್ಜಸ್ ಮಾಡಿದ್ದರೂ ಅವನ್ನು ಇದುವರೆಗೆ ಮುಚ್ಚಿಟ್ಟಿದ್ದಾರೆ. ಬರೀ ಚೆಕ್ ಮಾಡುವುದರಲ್ಲಿಯೇ ಎಷ್ಟೋ ದುರುಪಯೋಗವಾಗುತ್ತಿದೆ. ಅಲ್ಲಿ ಏನು ಕೆಲಸವಾಗಿದೆಯೆಂದರೆ, ಸುಳ್ಳು ಬಿಲ್ ಮಾಡಿ ಇಷ್ಟು ದೊಡ್ಡ ಮೊತ್ತವನ್ನು ಡ್ರಾ ಮಾಡಿರಬಹುದೆಂದು ನನಗೆ ತಿಳಿದುಬಂದಿದೆ. ಇದರ ಬಗ್ಗೆ ಸಮಗ್ರವಾದ ತನಿಖೆ ನಡೆದರೆ ನಿಜವಾಗಿ ಮೈಸೂರು ನಗರಾಭಿವೃದ್ಧಿ ಮಂಡಲಿಯಲ್ಲಿ ಎಷ್ಟು ಲುಕ್ಸಾನು ಆಗಿದೆ, ಎಷ್ಟರಮಟ್ಟಿಗೆ ಭ್ರಷ್ಟಾಚಾರವಾಗಿದೆ ಎಂಬುದು ಗೊತ್ತಾಗುತ್ತದೆ. ಮಾನ್ಯ ಮಂತ್ರಿಗಳು ಪರ್ಟಿಕ್ಯುಲರ್ ಇನ್‌ಸ್ಟೆನ್ಸ್ ಕೊಟ್ಟರೆ ವಿಚಾರ ಮಾಡುತ್ತೇವೆಂದು ಹೇಳುತ್ತಾರೆ. ಇಂತಹ ಇನ್‌ಸ್ಟೆನ್ಸಸ್ ಮೊದಲೇ ಹೇಳಿದ್ದರೂ ಈಗ ಏನಾಗಿದೆಯೆಂದರೆ, ಯಾವ ಕ್ರಮವನ್ನೂ ಸರ್ಕಾರದವರು ತೆಗೆದುಕೊಂಡಿಲ್ಲ. ಮಾನ್ಯ ಶ್ರೀ ದೇವೇಗೌಡರೂ ಸಹ ಪ್ರತಿಯೊಂದು ಅಂಶವನ್ನು ಉದಾಹರಣೆಗಳ ಮೂಲಕ ಕೊಡಿ ಎಂಬುದಾಗಿ ಹೇಳಿದರು. ನಾನು ಆ ರೀತಿಯಾಗಿ ಕೊಟ್ಟಿದ್ದರೂ ಅವರ ಕೈಕೆಳಗೆ ಇರತಕ್ಕ ಅಧಿಕಾರಿಗಳು ಅಂತಹ ಕೇಸುಗಳನ್ನು

ವಿಚಾರಣೆಮಾಡಿ ಒಂದು ತೀರ್ಮಾನವಮಾಡುವುದಕ್ಕೆ ಅವಕಾಶ ಇಲ್ಲ. ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿದರೆ ನಾನು ಅದಕ್ಕೆ ಸಂಬಂಧಪಟ್ಟ ಎಲ್ಲ ವಿವರಗಳನ್ನು ಕೊಡುತ್ತೇನೆಂದು ಹೇಳಿದ್ದೇನೆ. ಆದರೆ ಮಂತ್ರಿಗಳ ಮೇಲಾಗಲೀ, ಅಧಿಕಾರಿಗಳ ಮೇಲಾಗಲೀ ಅಥವಾ ಸರ್ಕಾರದ ನೌಕರರುಗಳ ಮೇಲಾಗಲೀ ಏನಾದರೂ ಕಂಪ್ಲೇಂಟ್ ಬರೆದಾಗ ಅಲ್ಲಿನ ಹಿರಿಯ ಅಧಿಕಾರಿಗಳು ಅವರವರೇ ತೀರ್ಮಾನಮಾಡುವುದು ನಿಜವಾಗಿಯೂ ಸರಿಯಲ್ಲ. ಆ ದೃಷ್ಟಿಯಿಂದ ಇದರ ಬಗ್ಗೆ ಇಂಪಾರ್ಷಿಯಲ್ ಎನ್‌ಕ್ವೈರಿ ಆಗಬೇಕು. ಮುಂದೆ ಲೋಕಾಯುಕ್ತ ಬಿಲ್ ಬರುತ್ತದೆ. ಅದು ಬಂದು ಒಂದು ಪ್ರತ್ಯೇಕ ಬಾಡಿಯಾಗುವವರಗೆ ಇದರ ಬಗ್ಗೆ ಒಂದು ಪ್ರತ್ಯೇಕ ಎನ್‌ಕ್ವೈರಿ ಆಗಬೇಕು. ಅದು ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು. ಏಕೆಂದರೆ ಅನೇಕ ಭ್ರಷ್ಟಾಚಾರದ ಕೇಸ್‌ಗಳ ಬಗ್ಗೆ ಸರ್ಕಾರ ಇಷ್ಟೂ ಯಾವ ಕ್ರಮಗಳನ್ನೂ ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ಈ ದೇಶದಲ್ಲಿ ಒಂದು ದೊಡ್ಡ ಕೂಗು ಎದ್ದಿದೆ. ಇಡೀ ಕರ್ನಾಟಕದ ಜನಗಳಲ್ಲಿ ಅಸೆಂಬ್ಲಿ ಮತ್ತು ಕೌನ್ಸಿಲ್‌ನಲ್ಲಿ ಇಂತಹ ವಿಚಾರಗಳ ಬಗ್ಗೆ ಅನೇಕ ಜನರಿಂದ ಫುಕಾರುಗಳು ಬಂದಿವೆ. ಸರ್ಕಾರದವರು ಎಷ್ಟೋ ಯೋಜನೆಗಳನ್ನು ಮಾಡುತ್ತಾರೆ. ಆ ಯೋಜನೆಗಳಲ್ಲಿ ಬರೀ ಎಸ್ಟಾಬ್ಲಿಷ್‌ಮೆಂಟಿಗೇ ಅರ್ಧ ಹಣ ಖರ್ಚಾಗುತ್ತದೆ. ಇದರಿಂದ ಆ ಯೋಜನೆಗಳು ಕಾರ್ಯಗತವಾಗುತ್ತಾ ಇಲ್ಲ. ಸಿಬ್ಬಂದಿವರ್ಗದವರೇನೋ ಹಾಗೆಯೇ ಸಂಬಳಗಳನ್ನು ತೆಗೆದುಕೊಳ್ಳುತ್ತಾ ಇರುತ್ತಾರೆ. ಯೋಜನೆಗಳಂತೂ ಕಾರ್ಯಗತವಾಗುವುದೇ ಇಲ್ಲ. ಅವರಿಗೆ ಬೇಕಾದವರಿಗೆ ಏನಾದರೂ ಅಧಿಕಾರ ಉಳಿಯಬೇಕಾದರೆ, ಅವರಿಗಾಗಿಯೇ ಇಂತಹ ಒಂದೊಂದು ಹೊಸ ಹೊಸ ಯೋಜನೆಗಳನ್ನು ಮಾಡಿ ಅವರಿಗೆ ಎಕ್ಸ್‌ಟೆನ್‌ಷನ್‌ಗಳನ್ನು ಕೊಟ್ಟುಕೊಂಡು ಹೋಗುತ್ತಾ ಇರುತ್ತಾರೆ. ಉದಾಹರಣೆಗೆ ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮೈಸೂರು ಜೂನಲ್ಲಿ ಇರತಕ್ಕ ಪ್ರಾಣಿಗಳನ್ನು ಇತ್ತೀಚೆಗೆ ಹೊರಗಡೆ ಸಾಗಿಸಿಕೊಂಡು ಹೋಗಿರುವುದರಿಂದ ಅಲ್ಲಿರತಕ್ಕ ಪ್ರಾಣಿ ಗೂಡುಗಳು ವಿಶೇಷವಾಗಿ ಖಾಲಿಯಾಗಿಯೇ ಬಿದ್ದಿವೆ. ಈಗ ಅವನ್ನು ಎಕ್ಸ್‌ಟೆಂಡ್ ಮಾಡಬೇಕೆಂದು ಒಂದು ಯೋಜನೆಯನ್ನು ಹಾಕಿದ್ದಾರೆ. ಸುಮಾರು 8-10 ವರ್ಷಗಳಿಂದಲೂ ಅಲ್ಲಿರತಕ್ಕ ನೂರಾರು ಎಕರೆಯಷ್ಟು ಜಾಗವನ್ನು ಇಟ್ಟುಕೊಂಡೂ ಸಹ ಇದುವರೆಗೆ ಅವನ್ನು ಎಕ್ಸ್‌ಟೆಂಡ್ ಮಾಡಲಿಲ್ಲ. ಸುಮಾರು 3 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಹಾಕಿಕೊಂಡು ಅಲ್ಲಿ ಇನ್ನೂ 200 ಎಕರೆಗಳಷ್ಟು ಜಾಗವನ್ನು ತೆಗೆದುಕೊಂಡು ಆ ಪ್ರದೇಶವನ್ನು ಅಭಿವೃದ್ಧಿಪಡಿಸಬೇಕೆಂಬ ಒಂದು ಗುರಿಯನ್ನು ಇಟ್ಟುಕೊಂಡಿದ್ದಾರೆ. ಅಲ್ಲಿ ಡೈರೆಕ್ಟರ್ ಆಗಿರುವವರು ಹಾಗೂ ಅಸಿಸ್ಟೆಂಟ್ ಡೈರೆಕ್ಟರ್ ಆಗಿರುವವರು ಅಲ್ಲಿ ಅವರಿಗೆ ಒಂದು ಪ್ರೊಮೋಷನ್ ಕ್ರಿಯೇಟ್ ಮಾಡಿಕೊಳ್ಳಬೇಕೆಂದೂ, ಅವರಿಬ್ಬರೂ ಮೈಸೂರಿನಲ್ಲಿಯೇ ಉಳಿಯುವುದಕ್ಕೆ ಇಂತಹ ಪ್ಲಾನ್ ಹಾಕಿದ್ದಾರೆಂದು ನನಗೆ ತೋರುತ್ತದೆ. ಇದು ಮೂರು ಸಾವಿರ ಕೋಟಿ ರೂಪಾಯಿಗಳ ಯೋಜನೆ. ಇದು ಯಾವಾಗ ಕಾರ್ಯಗತವಾಗುವುದು ? ಇರುವ ಯೋಜನೆಗಳನ್ನು ಇನೂ ಇಂಪ್ಲಿಮೆಂಟ್ ಮಾಡಲಿಲ್ಲ. ಇಂತಹ ಯೋಜನೆಗಳನ್ನು ನೋಟಿಫೈ ಮಾಡಿಕೊಂಡು ಪ್ಲಾನ್ ತೋರಿಸಿಕೊಂಡು ಹಾಗೆಯೇ ಅವರ ಈಗಿನ ಹುದ್ದೆಗಳಲ್ಲಿ ಮುಂದುವರೆದುಕೊಂಡು ಹೋಗುತ್ತಿದ್ದಾರೆ. ಸರ್ಕಾರದವರು ಯಾವುದಕ್ಕೆ ಖರ್ಚು ಮಾಡಬೇಕೋ ಅದಕ್ಕೆ ಖರ್ಚು ಮಾಡದೆ ಅಗತ್ಯವಿಲ್ಲದೆ ಇರುವ ಬಾಬುಗಳಿಗೆ ವೃಥಾ ಖರ್ಚುಮಾಡುತ್ತಿದ್ದಾರೆ. ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳಿದ ಹಾಗೆ ಕಾಳೀ ನದಿ ಯೋಜನೆಗೇ ಸಾಕಷ್ಟು ದುಡ್ಡು ಇಲ್ಲವೇ ಇರುವ ಕಾಲದಲ್ಲಿ ಹೊಟೇಲುಗಳನ್ನು ಕಟ್ಟುವುದಕ್ಕೆ, ಯಾವುದೋ ಕಟ್ಟಡಗಳನ್ನು ಎಕ್ಸ್‌ಟೆಂಡ್ ಮಾಡುವುದಕ್ಕೆ ವೃಥಾ ವ್ಯಯಮಾಡುವುದನ್ನು ಸರ್ಕಾರದವರು ಕೂಡಲೇ ನಿಲ್ಲಿಸಿ ಈಗಾಗಲೇ ಕೈಗೊಂಡಿರತಕ್ಕ ಯೋಜನೆಗಳನ್ನು ಪೂರೈಕೆ ಮಾಡಿದರೆ ಇಡೀ ರಾಜ್ಯಕ್ಕೆ ಹೆಚ್ಚಿನ ಅನುಕೂಲಗಳು ಉಂಟಾಗುತ್ತವೆ. ಯೋಜನೆಗಳಲ್ಲಿ ಯಾವುದು ಅಗತ್ಯ, ಯಾವುದು ಅನಗತ್ಯವೆಂಬುದನ್ನು ನೋಡಿಕೊಂಡು ಅವನ್ನು ಮುಂದುವರಿಸುವುದು ಒಳ್ಳೆಯದು.

ಇನ್ನು ಕನ್ನಡ ಭಾಷೆಯ ವಿಷಯವಾಗಿ ನಾನು ಒಂದು ಮಾತನ್ನು ಹೇಳುತ್ತೇನೆ. ಪ್ರತಿ ವರ್ಷವೂ ನಾವೆಲ್ಲರೂ ನೋಡುತ್ತಿದ್ದೇವೆ. ಕನ್ನಡ ಭಾಷೆಯನ್ನೇ ಎಲ್ಲ ಸದಸ್ಯರೂ ಸ್ವಲ್ಪ ಹೆಚ್ಚಾಗಿಯೇ ಎರಡು ಸದನಗಳಲ್ಲಿಯೂ ಮಾತನಾಡುತ್ತಿದ್ದಾರೆ. ಕನ್ನಡಭಾಷೆ ಮಾತನಾಡುವುದೇ ಇತ್ತೀಚೆಗೆ ಎಲ್ಲಾ ಕಡೆಗಳಲ್ಲಿಯೂ ಹೆಚ್ಚಾಗಿದೆ. ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳಲ್ಲಿ ಕನ್ನಡ ಭಾಷೆಯನ್ನು ಪೂರ್ಣವಾಗಿ ಜಾರಿಗೆ ತರುತ್ತೇವೆಂದು ನಿರ್ಧಾರ ಮಾಡಬೇಕು. ಸರ್ಕಾರದವರು ನಿರ್ದಿಷ್ಟವಾಗಿ ಇಷ್ಟೇ ವರ್ಷಗಳಲ್ಲಿ ಅಂದರೆ ಇನ್ನು ಮೂರು ವರ್ಷಗಳೋ, ನಾಲ್ಕು ವರ್ಷಗಳೋ, ಐದು ವರ್ಷಗಳೋ ಅಥವಾ 10 ವರ್ಷಗಳಲ್ಲಿಯೋ ಪೂರ್ಣವಾಗಿ ಈ ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುತ್ತೇವೆಂದು ಹೇಳುವವರೆಗೂ ಈ ರಾಜ್ಯದಲ್ಲಿ ಆಡಳಿತ ಭಾಷೆ ಕನ್ನಡವಾಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮಹಾರಾಷ್ಟ್ರದಲ್ಲಿ

ಹಾಗೂ ತಮಿಳುನಾಡಿನಲ್ಲಿ ಈಗಾಗಲೇ ಪೂರ್ಣವಾಗಿ ಅವರವರ ರಾಜ್ಯಭಾಷೆಗಳಾದ ಮರಾಠಿ ಹಾಗೂ ತಮಿಳು ಭಾಷೆ ಜಾರಿಯಲ್ಲಿರುವುದರಿಂದ ನಮ್ಮ ರಾಜ್ಯದಲ್ಲಿ ನಮ್ಮ ಸರ್ಕಾರದವರು ಕನ್ನಡವನ್ನು ಪೂರ್ತಿಯಾಗಿ ರಾಜ್ಯಭಾಷೆಯನ್ನಾಗಿ ಮಾಡುವ ಬಗ್ಗೆ ಇದುವರೆಗೂ ಯಾವ ನಿರ್ಧಾರವನ್ನು ಕೈಗೊಳ್ಳದೇ ಇರುವುದು ಮತ್ತು ಅದನ್ನು ಇಡೀ ಕರ್ನಾಟಕದಲ್ಲಿ ಜಾರಿಗೆ ತರದೇ ಇರುವುದು ತುಂಬಾ ಶೋಚನೀಯವಾಗಿದೆ. ಇದರಿಂದಾಗಿಯೇ ಇನ್ನೂ ನಮ್ಮ ರಾಜ್ಯಭಾಷೆ ಪೂರ್ತಿಯಾಗಿ ಕನ್ನಡ ಆಗಿಲ್ಲವೆಂದು ನಾನು ಹೇಳುತ್ತೇನೆ. ಇದಕ್ಕೆ ಸರ್ಕಾರದ ಅಲಕ್ಷ್ಯವೇ ಮೂಲ ಕಾರಣ. ಇಲ್ಲಿನ ಅಧಿಕಾರಿಗಳೇ ಈ ವಿಚಾರವನ್ನು ಮುಂದೂಡುತ್ತಿದ್ದಾರೆಂಬ ಅನುಮಾನ ನನಗೆ ಬರುತ್ತಿದೆ. ಆದ್ದರಿಂದ ಸರ್ಕಾರದವರು ಕೂಡಲೇ ಈ ವಿಚಾರದಲ್ಲಿ ಒಂದು ನಿರ್ದಿಷ್ಟ ಅವಧಿಯನ್ನು ನಿಗದಿಮಾಡಿ ಆ ಅವಧಿಯೊಳಗೆ ಏನೇ ಆಗಲೀ ಕನ್ನಡ ಭಾಷೆಯನ್ನು ಇಡೀ ಕರ್ನಾಟಕದಲ್ಲಿ ರಾಜ್ಯ ಭಾಷೆಯಾಗಿ ಮಾಡುವಂತೆ ಒಂದು ಘೋಷಣೆಯನ್ನು ಹೊರಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದುವರೆಗೆ ಆ ರೀತಿ ಮಾಡದೇ ಇರುವುದು ಬಹಳ ತಪ್ಪು. ಸರ್ಕಾರ ಜನಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸುಮ್ಮನೆ ಅದರ ಬಗ್ಗೆ ಘೋಷಣೆಗಳನ್ನು ಕೂಗುವುದರಿಂದ ಪ್ರಯೋಜನವಿಲ್ಲ. ಆದರಿಂದ ಈಗ ಯಾರಿಗೆ ಅನುಕೂಲವಾಗಿದೆ ? ಅನುಕೂಲವಾಗಿದೆಯೆಂದು ಜನಗಳು ಯಾರೂ ಹೇಳುತ್ತಿಲ್ಲ. ಸರ್ಕಾರವೂ ಸಹ ಇದರಿಂದ ಅನೇಕ ಕಷ್ಟಗಳನ್ನು ಅನುಭವಿಸುವ ಪರಿಸ್ಥಿತಿ ಈಗ ಉಂಟಾಗುತ್ತಿದೆ. ಜನಗಳಿಗೆ ಇದರಿಂದಾಗುತ್ತಿರುವ ತೊಂದರೆಗಳನ್ನು ನಿವಾರಣೆಮಾಡುವ ದೃಷ್ಟಿಯಿಂದ, ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಜನಗಳಿಗೆ ಸ್ವಾತಂತ್ರ್ಯ ಕುರುಹಿನಲ್ಲಿ ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದರೋ ಅವನ್ನೆಲ್ಲಾ ಈಡೇರಿಸಿ ಕೊಡುವ ಪರಿಸ್ಥಿತಿಯಲ್ಲಿ ಈಗ ಸರ್ಕಾರ ಇಲ್ಲವಲ್ಲಾ ಎಂಬುದಾಗಿ ಹೇಳುವ ಪರಿಸ್ಥಿತಿ ಈಗ ಒದಗಿದೆ. ಒಟ್ಟಿನಲ್ಲಿ ನಾನು ಈ ರಾಜ್ಯಪಾಲರ ಭಾಷಣವನ್ನು ಸಂಪೂರ್ಣವಾಗಿ ವಿರೋಧಿಸಿ, ಇಷ್ಟು ಮಾತುಗಳನ್ನು ಆಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂಥ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ನಾನು ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತಾ ಈ ಆಡಳಿತದಲ್ಲಿ ಎಷ್ಟರಮಟ್ಟಿಗೆ ನಾವು ಸಾಧಿಸಿದ್ದೇವೆ ಮತ್ತು ಎಷ್ಟರ ಮಟ್ಟಿಗೆ ನಾವು ಇನ್ನೂ ಸಾಧಿಸಬೇಕಾಗಿದೆ ಎನ್ನುವುದನ್ನು ರಾಜ್ಯಪಾಲರು ತಮ್ಮ ಅಮೂಲ್ಯವಾದ ಭಾಷಣದಲ್ಲಿ ಹೇಳಿದ್ದಾರೆ. ಈ ಮಹಾಸಭೆಯ ಸದಸ್ಯರಾದಂಥ ಶ್ರೀಮಾನ್ ಕೆ. ಪ್ರಭಾಕರ್‌ರವರು ಇದನ್ನು ಮಂಡಿಸುವಾಗ ಅನೇಕ ಗಹನವಾದ ವಿಚಾರಗಳನ್ನು ಹೇಳಿದ್ದಾರೆ. ಅನ್ನು ನಾನು ಅನುಮೋದಿಸುತ್ತಾ ರಾಜ್ಯಪಾಲರು ಮೊದಲನೆಯದಾಗಿ ಏನು ಹೇಳಿದ್ದಾರೆ ಅದನ್ನು ಸ್ಥೂಲವಾಗಿ ವಿವರಿಸುತ್ತೇನೆ. ಅವರು ಈ ರೀತಿ ಹೇಳಿದ್ದಾರೆ:—

> "ಹಿಂದಿನ ವರ್ಷ ಸಮಗ್ರ ರಾಜ್ಯಕ್ಕೆ ಸಂಕಟಕಾಲವಾಗಿತ್ತು. ಆರ್ಥಿಕ ರಂಗದಲ್ಲಿ ಬೆಲೆ ಏರಿಕೆ ಹಾಗೂ ಅತ್ಯವಶ್ಯ ದವಸ ಧಾನ್ಯಗಳ ಕೊರತೆ ಪುನಃ ಪುನಃ ಸಂಭವಿಸುತ್ತಲೇ ಇವೆ. ಇದು ಸಮಗ್ರ ದೇಶವನ್ನೇ ವ್ಯಾಪಿಸಿಕೊಂಡ ಸ್ಥಿತಿ. ಈ ಸ್ಥಿತಿಗೆ ತೈಲ ಬಿಕ್ಕಟ್ಟು ಹಾಗೂ ವಿಶ್ವದಾದ್ಯಂತ ಹರಡಿದ ಹಣದುಬ್ಬರ, ಮುಂತಾದ ಲೋಕ ವ್ಯಾಪಕ ಘಟನೆಗಳೇ ಸ್ವಲ್ಪಮಟ್ಟಿಗೆ ಕಾರಣ. ಈ ಅವಧಿಯಲ್ಲಿ ನಮ್ಮ ಜನಕೋಟಿ ಅಪಾರ ಸಂಕಟವನ್ನು ಅನುಭವಿಸಬೇಕಾಯಿತು...ಎಂದು ಹೇಳಿದ್ದಾರೆ.

ನಮಗೂ ಏನು ಅಭಿವೃದ್ಧಿಯಾಗಿಲ್ಲ, ನಮ್ಮ ಜನ ಬಹಳ ಸಂಕಟ ಸ್ಥಿತಿಯಲ್ಲಿದ್ದಾರೆ. ಬಹಳ ಕಷ್ಟದಲ್ಲಿದ್ದಾರೆ ಎಂದು ಈಗತಾನೆ ಮಾನ್ಯ ಸದಸ್ಯರೊಬ್ಬರು ಹೇಳಿದರು. ಅವರೆ ಪ್ರಪಂಚಕ್ಕೆ ಹೋಲಿಸಿ ನೋಡಿದರೆ ನಮ್ಮ ದೇಶದ ಸ್ಥಿತಿ ಉತ್ತಮ ಎಂದು ಜನ ಹೇಳುತ್ತಿದ್ದಾರೆ ಎನ್ನತಕ್ಕಂಥಾದ್ದು ಮಾನ್ಯ ಸದಸ್ಯರು ಮರೆತುಕೊಂಡಿದ್ದಾರೆ ಅಂತ ಕಾಣುತ್ತದೆ. ಪ್ರಪಂಚದಲ್ಲಿ ಕ್ಷಾಮಡಾಮರಗಳು ಹೆಚ್ಚಾಗಿ ತೈಲದ ಬಿಕ್ಕಟ್ಟು ಹೆಚ್ಚಾಗಿ ಕಷ್ಟಕಾರ್ಪಣ್ಯಗಳನ್ನು ಅನುಭವಿಸಬೇಕಾಯಿತು ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಚೆನ್ನಾಗಿತ್ತು ಎಂದು ನನ್ನ ಭಾವನೆ. ಅದೇನೇಇರಲಿ ಈಗಿನಕಾಲದಲ್ಲಿ ಸುಧಾರಣೆಯಾಗಿದೆ ಎಂದು ಹೇಳುತ್ತೇನೆ. ಈಗ ವಿದ್ಯಾಭ್ಯಾಸಕ್ಕಾಗಿ ಎಷ್ಟು ಖರ್ಚು ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿ. ಈ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾದರೆ ಈ 25 ವರ್ಷದಲ್ಲಿ ಎಷ್ಟು ಪ್ರೈಮರಿ ಶಾಲೆಗಳು, ಹೈಸ್ಕೂಲ್‌ಗಳು, ಕಾಲೇಜುಗಳು ಮತ್ತು ಯೂನಿವರ್ಸಿಟಿಗಳೂ ಆಗಿವೆ ಎನ್ನುವುದನ್ನು ನೋಡಿ. ವಿದ್ಯಾಭ್ಯಾಸದ ಮಟ್ಟದಲ್ಲಿ ನಿರೀಕ್ಷಿಸಿದಷ್ಟು ಪ್ರಗತಿಯಾಗಿಲ್ಲ, ಎಲ್ಲಾ ಮಟ್ಟದಲ್ಲೂ ಪ್ರಗತಿಯಾಗಿದೆ. ಇನ್ನೊಂದು ಉದಾಹರಣೆ ಹೇಳುವುದಾದರೆ ಮನುಷ್ಯನಿಗೆ ಅತ್ಯವಶ್ಯಕವಾಗಿ ಬೇಕಾದಂಥ ಕುಡಿಯುವ ನೀರಿನ

ವ್ಯವಸ್ಥೆ ನೋಡಿದರೆ ಹಿಂದೆ ಎಷ್ಟು ಬಾವಿಗಳು ಇದ್ದವು ಈಗ ಎಷ್ಟು ಬಾವಿಗಳು ಆಗಿವೆ ವ್ಯವಸಾಯದ ಬಾವಿಗಳು ಈ ಹಿಂದೆ ಎಷ್ಟು ಬಾವಿಗಳು ಇದ್ದುವು ಈಗ ಎಷ್ಟು ಬಾವಿಗಳು ಆಗಿವೆ ಇವುಗಳಿಗೆ ಹಿಂದೆ ಎಷ್ಟು ಹಣ ಖರ್ಚಾಗಿತ್ತು ಈಗ ಎಷ್ಟು ಖರ್ಚಾಗುತ್ತಾ ಇದೆ. ಇವುಗಳನ್ನೆಲ್ಲಾ ನಾವು ಪರಿಶೀಲನೆ ಮಾಡಿ ಅಂಕಿ ಅಂಶಗಳನ್ನು ನೋಡಿದ್ರೆ ಆದರೆ ಎಷ್ಟು ಸುಧಾರಣೆಯಾಗಿದೆ ಎನ್ನುವುದನ್ನು ನೋಡಿ. ಆದರೆ ಇನ್ನೂ ಸುಧಾರಣೆ ಆಗಬೇಕಾದ್ದು ಇದೆ ಅದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ.

ಇನ್ನು ದೇಶದಲ್ಲಿ ಭ್ರಷ್ಟಾಚಾರ, ಭ್ರಷ್ಟಾಚಾರ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಹೇಳಬೇಕಾದರೆ ಯಾರು ಭ್ರಷ್ಟಾಚಾರರು, ಯಾವ ವರ್ಗಕ್ಕೆ ಸೇರಿದವರು ಎನ್ನುವುದನ್ನು ಹೇಳಬೇಕು. ನಾನು ಹೇಳಬೇಕಾದರೆ ಇಷ್ಟು ವರ್ಷಗಳ ಕಾಲ ಹರಿಜನ ಗಿರಿಜನರಿಗೆ, ದುರ್ಬಲ ವರ್ಗದವರಿಗೆ ಅನ್ಯಾಯ ಮಾಡುತ್ತಿದ್ದಾರಲ್ಲಾ ಇದು ಭ್ರಷ್ಟಾಚಾರವಲ್ಲವೇ ? ಈ ವರ್ಗದ ಜನರಿಗೆ ಕಿರುಕುಳ ಬಹಳ ಜಾಸ್ತಿಯಾಗುತ್ತಿದೆ ತಾಯಿ. ಹರಿಜನರಿಗೆ ರಕ್ಷಣೆ ಇಲ್ಲ ಎಂದು ಹೇಳುತ್ತಿದ್ದಾರೆ. ಎಲ್ಲಿ ನೋಡಿದರೂ ಖೂನಿ, ಎಲ್ಲಿ ನೋಡಿದರೂ ದರೋಡೆ, ಕಿರುಕುಳ ಮತ್ತು ಹಾಸ್ಟಲುಗಳಲ್ಲಿ ನೋಡಿದರೆ ಅವರಿಗೆ ಕಿರುಕುಳ ಕೊಡುತ್ತಿದ್ದಾರೆ. ಹಳ್ಳಿಗಳಲ್ಲಿ ಹರಿಜನರ ಸ್ಥಿತಿ ನೋಡಿದರೆ ಸಂಕಟವಾಗುತ್ತಾ ಇದೆ. ಅದರ ಎಲ್ಲಾ ಚಿತ್ರವನ್ನೂ ಕೊಡುವುದಕ್ಕೆ ಸಾಧ್ಯವಿಲ್ಲ. ಅದರ ಅಂಕಿ ಅಂಶಗಳು ಇಲ್ಲ. ನನ್ನಲ್ಲಿ ಹರಿಜನ ಗಿರಿಜನರ ವಿಚಾರದಲ್ಲಿ ನಾವು ಈಗ ವರ್ತಮಾನ ಪತ್ರಿಕೆಗಳಲ್ಲಿ ಬರುವುದನ್ನು ನೋಡಿದರೆ 25 ವರ್ಷಗಳ ಹಿಂದೆ ಈ ವರ್ತಮಾನವನ್ನು ನಾವು ಕೇಳುತ್ತಾ ಇರಲಿಲ್ಲ. ಇವರನ್ನು ಕಂಡರೆ ಎಷ್ಟರಮಟ್ಟಿಗೆ ಸೌಜನ್ಯ ಇತ್ತು ನೋಡಿ. ಈಗಿನ ಕಾಲದಲ್ಲಿ ಹರಿಜನರ ವಿಷಯದಲ್ಲಿ ಮಾಡಬಾರದ ಕೆಲಸವನ್ನು ಮಾಡುತ್ತಾ ಇದ್ದಾರೆ. ಇನ್ನು ಹರಿಜನರ ವಿಚಾರದಲ್ಲಿ ಹೆಚ್ಚು ಎಷ್ಟೋ ಹೇಳಬಹುದು.

ಇನ್ನೊಂದು ವಿಷಯ ಏನೆಂದರೆ, ಲೆದರ್ ಬೋರ್ಡ್ ಅಂತ ಮಾಡಿದರು. ಅದು ಅಸ್ತಿತ್ವದಲ್ಲಿ ಇದೆಯೋ ಎನ್ನುವುದು ಕಾಣುವುದಿಲ್ಲ. ಅದಕ್ಕೆ ಬೇಕಾದ ಹಣ ಕೊಟ್ಟು ಸುವ್ಯವಸ್ಥಿತವಾಗಿ ಕೆಲಸ ಮಾಡಲಿ ಅಂತ ಮಾಡಿದರು. ಅದು ಯಾವ ರೀತಿಯಾಗಿ ಕೆಲಸ ಮಾಡುತ್ತಿದೆಯೋ ಗೊತ್ತಿಲ್ಲ. ಈ ಬೋರ್ಡಿಗೆ ಸಾಕಾದಷ್ಟು ಹಣ ಒದಗಿಸಿ ಸರಿಯಾದ ರೀತಿ ನಡೆಯುವಂತೆ ಮಾಡಬೇಕು. ಇನ್ನು ಹರಿಜನರ ಅಭಿವೃದ್ಧಿ ಬಗ್ಗೆ ಒಂದು ಹಣದ ಕಾರ್ಪೊರೇಷನ್ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ನಾನು ಕೇಳಿದ್ದೇನೆ. ಆದರೆ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಿ ಆ ಕೆಲಸ ಅತಿ ಶೀಘ್ರವಾಗಿ ಕಾರ್ಯಗತವಾಗುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ಈ ಜನ ಏನು ಹಿಂದುಳಿದಿದ್ದಾರೋ ಅವರನ್ನು ಮುಂದಕ್ಕೆ ಬರುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಅವರಿಂದ ಓಟು ತೆಗೆದುಕೊಳ್ಳಬೇಕಾದರೆ ಪಂಗಡ ಇಲ್ಲ, ಪಕ್ಷ ಇಲ್ಲ, ಎಲ್ಲರೂ ಹೋಗಿ ಓಟು ಕೇಳುತ್ತಾರೆ. ಹಾಗೆಯೇ ಅವರ ಕಷ್ಟಸುಖಗಳನ್ನು ನೋಡಿಕೊಳ್ಳುವುದಾಗಲಿ, ಅವರಿಗೆ ಒಂದು ನೌಕರಿಯನ್ನು ಒದಗಿಸುವುದೇ ಆಗಲಿ ಅಥವಾ ಅವರಿಗೆ ಒಂದು ಜಮೀನನ್ನು ಒದಗಿಸುವುದೇ ಆಗಲಿ ಅಥವಾ ಅವರಿಗೆ ಇನ್ನಾವುದೇ ಸೌಕರ್ಯವನ್ನು ಒದಗಿಸುವುದೇ ಆಗಲಿ ಪ್ರತಿಯೊಂದು ವಿಚಾರದಲ್ಲೂ ಅವರಿಗೆ ಸಹಾನುಭೂತಿ ತೋರಿಸಬೇಕು ಎಂದು ಸದಸ್ಯರನ್ನು ನಾನು ಕೇಳುತ್ತೇನೆ. ಮತ್ತು ಈಗ ಹರಿಜನ ವಿಚಾರದಲ್ಲಿ ಒಂದು ಸಹಾನುಭೂತಿ ತೋರಿಸಿ ಅವರಿಗೆ ಜನತಾ ಯೋಜನೆಯಲ್ಲಿ ವಸತಿ ಸೌಕರ್ಯಗಳನ್ನು ಮಾಡುತ್ತಿದ್ದಾರೆ. ಹಿಂದೆ ಅವರಿಗೆ ವಸತಿ ಸೌಕರ್ಯಗಳನ್ನು ಒದಗಿಸುವುದಕ್ಕೋಸ್ಕರ ಅನೇಕ ಸೊಸೈಟಿಗಳು ಕಾರ್ಪೊರೇಷನ್ನಿನಿಂದ ಲೈಫ್ ಇನ್‌ಷೂರನ್ಸ್ ಸುಮಾರು 3 ಕೋಟಿ ಸಾಲ ಪಡೆದು ಅವರಿಗೆ ಸತ್ಕಾರ ಕೊಡುತ್ತಾ ಇದ್ದರು. ಈಗ ಏನಾಗಿದೆ ಎಂದರೆ ಅನೇಕ ಸೊಸೈಟಿಗಳು ಸಾಲಗಾರರಾಗಿ ಆ ಸೊಸೈಟಿಗಳು ಕೆಲಸ ಮಾಡುತ್ತಾ ಇಲ್ಲ. ಆದುದರಿಂದ ಈಗ ಅವರಿಗೆ ವಸತಿ ಸೌಕರ್ಯಗಳನ್ನು ಒದಗಿಸಿಕೊಡುವ ವಿಷಯ ಹಾಗೆಯೇ ನಿಂತಿದೆ. ಹರಿಜನ ಗಿರಿಜನರ ವಸತಿ ನಿರ್ಮಾಣಕ್ಕಾಗಿ ಈ ಹಿಂದಿನಂತೆ ಈಗ ಮುಂಬರುವ ಬಜೆಟ್ಟಿನಲ್ಲಿ ಹೆಚ್ಚು ಹಣವನ್ನು ಒದಗಿಸಿ ಅವರಿಗೆ ತಕ್ಕ ಸೌಕರ್ಯಗಳನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ. ಈಗ ಒಂದೊಂದು ತಾಲ್ಲೂಕಿಗೆ 100-120 ಮನೆಗಳನ್ನು ಕಟ್ಟುವ ಒಂದು ಅಂದಾಜು ಇದೆ. ಅದು ಏನೇನೂ ಸಾಲದು. ರಾಜ್ಯದಲ್ಲಿ 40-45 ಲಕ್ಷ ಇರತಕ್ಕಂಥ ಹರಿಜನರಿಗೆ ಈ 120 ಮನೆಗಳನ್ನು ಪ್ರತಿ ತಾಲ್ಲೂಕಿಗೆ ತೆಗೆದುಕೊಂಡರೆ ಏನೇನೂ ಸಾಕಾಗುವುದಿಲ್ಲ, ಅದಕ್ಕಾಗಿ ಇವರ ಒಂದು ವಸತಿ ಸೌಕರ್ಯಕ್ಕೆ ಮುಂಬರುವ ಬಜೆಟ್ಟಿನಲ್ಲಿ ಹೆಚ್ಚು ಹಣವನ್ನು ಮೀಸಲಾಗಿಡಬೇಕು ಎಂದು ನಾನು ಕೇಳುತ್ತೇನೆ.

ಇನ್ನು ಹರಿಜನ ಮತ್ತು ಗಿರಿಜನರ ನೌಕರಿ ವಿಚಾರದಲ್ಲಿ ಹೇಳುವುದಾದರೆ ಲಕ್ಷಾಂತರ ಜನ ಅಲೆಯುತ್ತಿದ್ದಾರೆ ಈಗ ಬಹುಜನರು ವಿದ್ಯಾವಂತರಾಗಿ ನೌಕರಿಗಾಗಿ ಅಲೆದಾಡುತ್ತಿದ್ದಾರೆ.

ಆದುದರಿಂದ ಅವರಿಗೆ ನೌಕರಿಗಳನ್ನು ಸಾಕಾದಷ್ಟು ಕೊಡಿಸಿಕೊಡುವ ಏರ್ಪಾಡು ಮಾಡಬೇಕು, ಬರೀ ಸರ್ಕಾರೀ ವಲಯ ಒಂದರಲ್ಲೇ ಅಲ್ಲ, ಪಬ್ಲಿಕ್ ಸೆಕ್ಟರ್‌ನಲ್ಲೂ ಕೂಡ ಅವರಿಗೆ ಇಂತಿಷ್ಟು ಎಂದು ಮೀಸಲಾಗಿಟ್ಟು ಅವರಿಗೆ ಕೊಡಿಸಬೇಕು ಎಂದು ಕೇಳುತ್ತೇನೆ. ಸರ್ಕಾರೀ ವಲಯದಲ್ಲೂ ಭರ್ತಿ ಕೊಡುವಾಗಲೂ ಕೂಡ ಅವರಿಗೆ 18 ಪರ್ಸೆಂಟ್ ನೌಕರಿ ಕೊಡಬೇಕು ಎಂದು ಹೇಳುತ್ತೇನೆ. ಈಗಾಗಲೇ ಅವರ ಬಗ್ಗೆ ಅನೇಕ ಯೋಜನೆಗಳನ್ನು ತೆಗೆದುಕೊಂಡಿದ್ದರೂ ಕೂಡ ಅದು ಕಾರ್ಯ ಗತವಾಗಿಲ್ಲ. ಆದುದರಿಂದ ಈ ಬಗ್ಗೆ ನಾನು ಹೇಳುವುದು ಒಂದು ರಚನಾತ್ಮಕವಾದ ಯೋಜನೆ ಯನ್ನು ತಯಾರುಮಾಡಿ ಅತಿ ಶೀಘ್ರದಲ್ಲೇ ಒಂದು ನಿರ್ದಿಷ್ಟವಾದ ಅವಧಿಯಲ್ಲಿ ಅಂದರೆ ರಾಜ್ಯಾಂಗದ ಕಾಲದ ಅವಧಿ ಏನು ಇದೆ ಆ ಅವಧಿಯಲ್ಲಿ ಇವರು ಮುಂದಕ್ಕೆ ಬರಬೇಕು ಅನ್ನುವ ಮನಸ್ಸು ಇದ್ದರೆ ಒಂದು ನಿರ್ದಿಷ್ಟವಾದ ಯೋಜನೆ ಮಾಡಿ ಅವರ ಜನಸಂಖ್ಯೆ ಏನು ಇದೆ ಅದಕ್ಕೆ ತಕ್ಕಂತೆ ಅವರ ಸಾಮಾಜಿಕ ಸ್ಥಿತಿ ಏನು ಇದೆ. ಅವರ ಆರ್ಥಿಕ ಸ್ಥಿತಿ ಏನು ಇದೆ ಅದಕ್ಕೆ ತಕ್ಕ ಹಾಗೆ ಒಂದು ಯೋಜನೆ ಮಾಡಿ. ಅವರ ಅಭಿವೃದ್ಧಿಗೆ ಶ್ರಮಿಸಿ ನೂರಾರು ವರ್ಷಗಳಿಂದ ಆ ಜನ ಏನು ಹಿಂದುಳಿದಿದ್ದಾರೆ, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ವಿದ್ಯಾಭ್ಯಾಸದಲ್ಲಿ. ಆದ್ದರಿಂದ ಒಂದು ನಿರ್ದಿಷ್ಟವಾದ ಸಮಗ್ರ ಯೋಜನೆಗಳನ್ನು ತಯಾರುಮಾಡಬೇಕು ಎಂದು ನಾನು ಕೇಳುತ್ತೇನೆ. ಹರಿಜನರಿಗೆ ಬೋರ್ಡಿಂಗು ಚಾರ್ಜಸ್ಸುಗಳಿಗಾಗಿ ಮಾಹೆಯಾನ 40 ರೂಪಾಯಿ ಗಳೆಂದು ಮಾಡಿದ್ದಾರೆ. ಹಿಂದೆ 30 ರೂಪಾಯಿ ಎಂದು ಕೊಡುತ್ತಿದ್ದರು. ಇದನ್ನು ಈಗ ಹತ್ತು ರೂಪಾಯಿಗಳಷ್ಟು ಹೆಚ್ಚು ಮಾಡಿದ್ದಾರೆ. ಇಂದು ಇರುವ ಪರಿಸ್ಥಿತಿಯಲ್ಲಿ ಒಬ್ಬ ಹುಡುಗನಿಗೆ ನಲವತ್ತು ರೂಪಾಯಿಗಳನ್ನು ಕೊಟ್ಟರೆ ಅವನು ಊಟಕ್ಕೆ ಏನೇನೂ ಸಾಲುವುದಿಲ್ಲ. ಇದನ್ನು ಕನಿಷ್ಠಪಕ್ಷ 75 ರೂಪಾಯಿಗಳಷ್ಟು ಹೆಚ್ಚುಮಾಡಬೇಕೆಂದು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ. ಹರಿಜನರನ್ನು ಉದ್ಧಾರ ಮಾಡುತ್ತೇವೆಂದು ಬರೀ ಬಾಯಲ್ಲಿ ಹೇಳಿದರೆ ಅದು ಸರಿಯಾಗುವುದಿಲ್ಲ. ಇದಕ್ಕಾಗಿ ಸೆಂಟ್ರಲ್ ಗವರ್ನಮೆಂಟಿನವರೂ ಹರಿಜನರಿಗೆ ಹೆಚ್ಚು ಹಣ ಸಹಾಯ ಮಾಡಬೇಕೆಂದು ವಿದ್ಯಾರ್ಥಿವೇತನ ಇತ್ತೀಚೆಗೆ ಹೆಚ್ಚಿಸಿದ್ದಾರೆ. ಅದರಂತೆ ನಮ್ಮ ರಾಜ್ಯ ಸರಕಾರವೂ ಕೂಡ ಹೆಚ್ಚು ಹಣ ಹರಿಜನರಿಗಾಗಿ ಒದಗಿಸಿಕೊಡಬೇಕೆಂದೂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಜಾಸ್ತಿ ಮಾಡಬೇಕೆಂದೂ ಒತ್ತಾಯ ಮಾಡುತ್ತೇನೆ. ಅಲ್ಲದೆ ಹರಿಜನರಿಗಾಗಿ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನಕ್ಕಾಗಿ ಕೊಡುವ ಹಣವನ್ನು ಫೆಬ್ರವರಿ ತಿಂಗಳಲ್ಲಿ ಕೊಟ್ಟರೆ ಅವರಿಗೆ ಅನುಕೂಲವಾಗು ವುದಿಲ್ಲ, ಇದನ್ನು ಮುಂದಾಗಿಯೇ ವರ್ಷದ ಮೊದಲಿನಲ್ಲಿಯೇ ಕೊಡುವ ವ್ಯವಸ್ಥೆ ಸರಕಾರ ಮಾಡಿದರೆ ಅವರುಗಳು ವಿದ್ಯಾಭ್ಯಾಸ ಮಾಡಲು ಅನುಕೂಲವಾಗುತ್ತದೆ. ಇಲ್ಲದೆ ಇದ್ದರೆ ಇಲ್ಲದ ಕಿರುಕುಳಗಳು ಆಗುವ ಸಂಭವವಿರುತ್ತದೆ. ಸರಕಾರ ಆದಷ್ಟು ಜಾಗ್ರತೆ ಹರಿಜನ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಕೊಡುವ ಹಣವನ್ನು ಆದಷ್ಟು ಜಾಗ್ರತೆ ಹೆಚ್ಚುಮಾಡಬೇಕೆಂದು ಕೇಳಿಕೊಳ್ಳು ತ್ತೇನೆ.

ಇನ್ನು ಹರಿಜನರಿಗಾಗಿ ಕಾಲೋನಿಗಳನ್ನು ಕಟ್ಟಲು ಜಮೀನು ಅಕ್ವೀಜಷನ್ ಮಾಡಬೇಕು. ಮಲೆನಾಡಿನಲ್ಲಿ ಬರೀ ಬೆಟ್ಟಗುಡ್ಡಗಳು ಹಾಗೂ ಕಾಫೀ ಪ್ಲಾಂಟೇಷನ್‌ಗಳು ಹೆಚ್ಚಾಗಿ ಇರುವುದ ರಿಂದಲೂ ಅಲ್ಲಿ ಸ್ವಲ್ಪ ಸ್ವಲ್ಪವೇ ಮಾತ್ರ ತರಿ ಜಮೀನು ಇರುತ್ತದೆ. ಇದರಿಂದ ಹರಿಜನರು ಹಾಗೂ ಗಿರಿಜನ ಪ್ಲಾಂಟೇಷನ್ ಪೈರನ್ನೇ ಮಾಡಬೇಕು. ಇದನ್ನು ಮುಫತ್ತಾಗಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈಗ ಅಪ್‌ಸೆಟ್ಟು ಪ್ರೈಸು ಸುಮಾರು ಎಕರೆ 1ಕ್ಕೆ 700 ರೂಪಾಯಿ ಗಳು ಕೊಡಬೇಕೆಂದು ಇದೆ. ಈ ಭಾರಿ ಹಣ ಅವರಿಗೆ ಕೊಡಲು ಶಕ್ತಿ ಇರುವುದಿಲ್ಲ. ಇದು ಬಹು ಮುಖ್ಯವಾದ್ದರಿಂದ ಹರಿಜನರಿಗೆ ಮುಫತ್ತಾಗಿ ಕಾಫಿ ಜಮೀನು ಕೊಡುವುದರ ಬಗ್ಗೆ ಸರಕಾರ ಒಂದು ಗವರ್ನಮೆಂಟು ಆರ್ಡರು ಈ ವರ್ಷವೇ ಮಾಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಲ್ಯಾಂಡ್ ಗ್ರಾಂಟ್ ರೂಲ್ಸ್ ಈ ವಿಚಾರದಲ್ಲಿ ಅಮೆಂಡ್ ಮಾಡಿ ಕಾಫಿ ಬೆಳೆಯುವ ಪ್ರದೇಶದಲ್ಲಿರುವ ಹರಿಜನ ಗಿರಿಜನರಿಗೆ ಸಹಾಯಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ಕುಡಿಯುವ ನೀರಿನ ಬಾವಿ ಬಗ್ಗೆ ಮಲೆನಾಡಿನಲ್ಲಿ ತೋಡಬೇಕಾದರೆ ಬಹಳ ಆಳವಾಗಿ ತೋಡಬೇಕಾಗುತ್ತದೆ. ಕೆಲವು ವೇಳೆ 120 ಅಡಿ ಆಳ ತೋಡಿದರೂ ನೀರು ಬರುವುದಿಲ್ಲ. ಈಗ ಕೊಳವೆ ಬಾವಿ ಯೋಜನೆ ಮಾಡಬೇಕೆಂದು ಹೇಳುತ್ತಿದ್ದಾರೆ. ಇದು ಸರಿಯಲ್ಲ. ಇದನ್ನು ಸರಕಾರ ಕೈಬಿಡಬೇಕು. N.R.W.S. ಯೋಜನೆ ಏನಿದೆ ಅದನ್ನೇ ಇಲ್ಲಿ ಮುಂದುವರಿಸಿ ಕಾರ್ಯ ರೂಪಕ್ಕೆ ತರಬೇಕೆಂದು ಸರಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಪಶುಸಂಗೋಪನೆ ಬಗ್ಗೆ ರಾಜ್ಯಪಾಲರು ಹೇಳಿದ್ದಾರೆ. ಸರಕಾರ ಪರದೇಶಗಳಿಂದ ಒಳ್ಳೆಯ ತಳಿಗಳನ್ನು ಇಲ್ಲಿಗೆ ತರಿಸಿ ಅಭಿವೃದ್ಧಿ ಮಾಡುತ್ತಿದ್ದಾರೆ. ಇದನ್ನು ಬಡವರಿಗೆ ಹಾಗೂ ದುರ್ಬಲ ವರ್ಗದವರಿಗೂ ಕೊಟ್ಟು ಅವರ ಆರ್ಥಿಕ ಶಕ್ತಿಯನ್ನು ಹೆಚ್ಚು ಮಾಡಿಕೊಳ್ಳಲು ಸರಕಾರ ಸಹಾಯ

ಮಾಡಬೇಕು. ಹಸು, ಕುರಿ ಹಾಗೂ ಕೋಳಿ ಸಾಕಾಣಿಕೆ ಇತ್ಯಾದಿ ಯೋಜನೆಗಳನ್ನು ಮಾಡಲು ಸರಕಾರ ಮುಫತ್ತಾಗಿ ಹರಿಜನ ಗಿರಿಜನ ಮತ್ತು ದುರ್ಬಲ ವರ್ಗದವರಿಗೆ ಕೊಟ್ಟು ಸಹಾಯ ಮಾಡಬೇಕೆಂದು ಹೇಳುತ್ತೇನೆ. ಇದರಿಂದ ಹರಿಜನರನ್ನು ಪ್ರಗತಿ ಮಾಡಲು ಸಾಧ್ಯವಾಗುತ್ತದೆ.

ಇನ್ನು ತೋಟಗಾರಿಕೆ ಇಲಾಖೆಯಲ್ಲಿ ಕೆಲವು ಯೋಜನೆಗಳನ್ನು ಮಾಡಿದ್ದಾರೆ. ಇದರಲ್ಲೂ ಕೂಡ ಹರಿಜನರಿಗೆ ಹಾಗೂ ಬಡವರಿಗೆ ಗಿಡಗಳನ್ನು ತರಕಾರಿ ಬೀಜಗಳನ್ನು ಕೊಟ್ಟು ಅವರೂ ಮುಂದಕ್ಕೆ ಬರಲು ಸಹಾಯವನ್ನು ಸರಕಾರ ಒದಗಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಪೂರ್ತಿಯಾಗಿ ಮಾಡಿ ಅನುಷ್ಠಾನಕ್ಕೆ ತರಬೇಕು, ಕನ್ನಡ ಸ್ಟೆನೋಗ್ರಾಫರುಗಳನ್ನು ಮತ್ತು ಕನ್ನಡ ಟೈಪಿಸ್ಟುಗಳನ್ನು ಸರ್ಕಾರದ ಪ್ರತಿ ಇಲಾಖೆಯಲ್ಲಿಯೂ ಮತ್ತು ಪ್ರತಿಯೊಬ್ಬ ಮಂತ್ರಿಯವರ ಆಫೀಸಿನಲ್ಲಿಯೂ ನೇಮಕ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದರಿಂದ ನಮ್ಮ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಲು ಹೆಚ್ಚು ಸಹಕಾರಿಯಾಗುತ್ತದೆಂದು ಹೇಳಿ ನನ್ನ ಭಾಷಣ ಮುಗಿಸಿ ಸನ್ಮಾನ್ಯ ಅಧ್ಯಕ್ಷಣಿಯವರು ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

MADAM SPEAKER.—Now Sri Shammanna may move his amendment.

Sri T. R. SHAMANNA (Fort).—Madam I beg to move :

"That the following words shall be added at the end of the motion :

" but regret to note that :

1. Failure of Government to take concrete measures for increasing production and bringing down prices of Essential Commodities.

2. Failure of the Government in preventing abnormal rise in cost of the Bangalore Dairy Milk and the constant increase of the rates of rice, Joola etc.,

3. Failure of Government to take effective measures to stop rampant corruption from top to bottom.

4. Failure of Government to take effective measures to reduce the growing unemployment in the State.

5. Failure of Government to take measures to re-introduce prohibition as has been done in the neighbouring State of Tamil Nadu and as contemplated in Rajasthan though the Government is aware of the fact that prohibition is a cause for the Miserable plight of the weaker section of the people.

6. Failure of the Government to bring down the cost of power which is essential for all economic development of the State both in agricultural as well as in industrial sectors.

7. Failure of the Government in giving useful and practical education to the students to enable them to become good citizens of the Country and also to build up a Welfare State.

8. Failure of the Government in getting a legitimate share for the use of the Rivers Cauvery, Krishna, and other Water Resources.

9. Failure of the Government bringing pressure on the Central Government to complete the Railway Link between Hassan and Mangalore and taking up the other Railway Projects.

10 Failure of the Government in putting sufficient pressure on the Central Government on immediately starting the Hospet Iron and Steel Unit.

11 Failure of the Government in properly conserving the Forest Resources and preventing in unlawful smuggling of forest products,

12. Failure of the Government in exploiting fully, the rich mineral wealth of the State.

13. Failure of the Government in giving protection to the rights of women, widows, minors and invalid persons and small holders in respect of land holdings in Land Reforms (Amendment) Act.

14. Failure of the Government in preventing the abnormal rise in the cost of paper which has caused great hardship to the public in general and the students in particular.

15. Failure of the Government in supplying the stamp paper of required value which has caused great hardship for preparing legal documents and getting copies of judgments from Courts, etc.

16. Failure of the Government in providing adequate financial assistance to the pensioners to enable them to live atleast a moderate life in their advanced age.

17. Failure of the Government in executing and completing many projects and also improving the roads and bridges.

18. Miserable failure of the Government in checking the mosquito nuisance in Bangalore City

19 Failure of the Government in preventing large-scale theft and other criminal acts by unsocial elements.

20. Failure of the Government in bringing down the cost of chemical manure by increasing the production of artificial manurs.

21. Failure of the Government in cancelling the levy of Rs. 10 levied for all-electric-homes.

22. Failure of the Government in supplying the required quantity of essential drugs and allowing spurious drugs and medicines being sold in the Bazaars.

23. Failure of the Government in developing of the Karwar Port which will be a natural harbour when developed.

24. Failure of the Government discontinuing the harmful lottery system, horse race, and the night clubs which are run on large scale.

25. Failure of the Government in taking action against several courts where undue delay is caused in taking decisions.

26. Failure of the Government in bringing down the cost of food stuffs which is essential to improve the living conditions of the house holders, if need be by giving substantial subsidy to the growers.

27. Failure of the Government in not allowing maladministration, misappropriation and misuse of power in many Co-operative Societies.

28. Failure of the Government in not allowing largescale increase af transport cost which has a direct bearing on the cost of production and distribution.

29. Failure of the Government in giving a clean and efficient administration.

30. Failure of the Government in the working of the Fourth Five Year Plan properly and profitably to the best advantage of the State.

31. Failure of the Government in completing the several River Projects in time."

MADAM SPEAKER.—Amendment moved :

" That the following words shall be added at the end of the motion :

"but regret to note the :

1. Failure of Government to take concrete measures for increasing production and bringing down prices of Essential Commodities.

2. Failure of the Government in preventing abnormal rise in cost of the Bangalore Dairy Milk and the constant increase of the rates of rice, Joola etc.,

3. Failure of Government to take effective measures to stop rampant corruption from top to bottom.

4. Failure of Government to take effective measures to reduce the growing unemployment in the State.

5. Failure of Government to take measures to re-introduce prohibition as has been done in the neighbouring State of Tamil Nadu and as contemplated in Rajasthan though the Government is aware of the fact that prohibition is a cause for the miserable plight of the weaker sectiog of the people.

6. Failure of the Government to bring down the cost of power which is essential for all economiu development of the State both in agricultural as well as in industrial sectors.

7. Failure of the Government in giving useful and practical education to the students to enable them to become good citizens of the Country and also to build up a Welfare State.

8. Failure of the Government in getting a legitimate share for the use of the Rivers – Cauvery, Krishna, and other Water Resources.

9. Failure of the Government bringing pressure on the Central Government to complete the Railway Link between Hassan and Mangalore, and taking up the other Railway Projects.

10. Failure of the Government in putting sufficient pressure on the Central Government on immediately starting the Hospet Iron and Steel Unit.

11. Failure of the Government in properly conserving the Forest Resources and preventing in unlawful smuggling of forest products.

12. Failure of the Government in exploiting fully, the rich mineral wealth of the State.

13. Failure of the Government in giving protection to the rights of women, widows, minors and invalid persons and small holders in respect of land holdings in Land Reforms (Amendment) Act.

14. Failure of the Governmet in preventing the abnormal rise in the cost of paper which has caused great hardship to the public in general and the students in particular.

15. Failure of the Government in supplying the stamp paper of required value which has caused great hardship for preparing legal documents and getting copies of judgements from Courts, etc.

16. Failure of the Government in providing adequate financial assistance to the pensioners to enable them to live atleast a moderate life in their advanced age.

17. Failure of the Government in executing and completing many projects and also improving the roads and bridges.

18. Miserable failure of the Government in checking the mosquito nuisance in Bangalore City.

19. Failure of the Government in preventing large-scale sheft and other criminal acts by unsocial elements.

20. Failure of the Government in bringing down the cost of chemical manure by increasing the production of artificial manure.

21. Failure of the Government in cancelling the levy of Rs. 10 levied for all-electric-homes.

22. Failure of the Government in supplying the required quantity of essential drugs and allowing spurious drugs and medicines being sold in the Bazaars.

23. Failure of the Government in developing of the Karwar Port which will be a natural harbour when developed.

24. Failure of the Government discontinuing the harmful lottery system, horse race and the night clubs which are run on large scale.

25. Failure of the Government in taking action against several courts where undue delay is caused in taking decisions.

26. Failure of the Government in bringing down the cost of food stuffs which is essentail to improve the living conditions of the house holders, if need be by giving substantial subsidy to the growers.

27. Failure of the Government in not allowing maladministration, misappropriation and misuse of power in many Co-operative Societies.

28. Failure of the Government in not allowing large scale increase of transport cost which has a direct bearing on the cost of production and distribution.

29. Failure of the Government in giving a clean and efficient administration.

30. Failure of the Government in the working of the Fourth Five Year Plan properly and profitably to the best advantage of the State.

31. Failure of the Government in completing the several River Projects in time."

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ವಿಧಾನಮಂಡಲದಲ್ಲಿ ಮಾಡಿದ ಭಾಷಣದ ಮೇಲೆ ತಂದಿರುವ ವಂದನಾ ನಿರ್ಣಯದ ಮೇಲೆ ಒಪ್ಪಲು ಹೆಚ್ಚು ಕಷ್ಟವಾಗುತ್ತದೆ. ಆದರೂ ಇದಕ್ಕೆ ಸಂಬಂದಪಟ್ಟಹಾಗೆ ಕೆಲವು ವಿಚಾರಗಳನ್ನು ನಮ್ಮ ಮುಖೇನ ಸರಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ರಾಜ್ಯಪಾಲರು ತಮ್ಮ ಭಾಷಣವನ್ನು ಆರಂಭ ಮಾಡುತ್ತಾ

"ಹಿಂದಿನ ವರ್ಷ ಸಮಗ್ರ ರಾಜ್ಯಕ್ಕೆ ಸಂಕಟಕಾಲವಾಗಿತ್ತು....1975ರಲ್ಲಿ ಈ ಪರಿಸ್ಥಿತಿ ಬದಲಾಗಿ ಒಳ್ಳೆಯ ಕಾಲ ಬಂದೀತೆಂದು ಹಾರೈಸುತ್ತೇನೆ..."

ಎಂದು ಹೇಳಿದ್ದಾರೆ.

ನನಗೆ ಈಗ ನಡೆಯುತ್ತಿರುವ ನಡವಳಿಕೆಗಳು ಹಾಗೂ ವ್ಯವಹಾರಗಳನ್ನು ನೋಡಿದರೆ ಇದಕ್ಕಿಂತ ಇನ್ನೂ ಕಠಿಣವಾದ ಪರಿಸ್ಥಿತಿ ಒದಗುತ್ತದೆಯೇ ಹೊರತು ಇದನ್ನು ಸುಧಾರಣೆ ಮಾಡುತ್ತಾರೆ ಎನ್ನುವ ನಂಬಿಕೆ ಇದರಲ್ಲಿ ಸ್ವಲ್ಪವಾದರೂ ನನಗೆ ಇಲ್ಲ. ರಾಜ್ಯದಲ್ಲಿ ಈಗಾಗಲೇ ಸುಮಾರು 28 ಸಾವಿರ ಕೋಟಿಯಷ್ಟು ಯೋಜನೆ ಮಾಡಲು ಖರ್ಚು ಮಾಡಿದರೂ ಸಾಕಾದಷ್ಟು ಪ್ರಗತಿಯನ್ನು ಸಾಧಿಸಲು ಹಾಗೂ ನಮ್ಮ ಜನತೆಗೆ ಅನುಕೂಲವಾಡಲು ಮತ್ತು ಇತರ ಸೌಲಭ್ಯಗಳನ್ನು ದೊರಕಿಸಲಾಗಲಿಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಇದು ತುಂಬಾ ಶೋಚನೀಯವಾದ ವಿಚಾರ. ಈಗ ಸರಕಾರ ಹೇಗಿದೆ ಎಂದರೆ ಸರಕಾರದಲ್ಲಿ ಅಭಾವದಿಂದ ಕೂಡಿದ ಆಡಳಿತ ಇದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ನಮಗೆ ಆಹಾರದ ಒಂದು ಅಭಾವ, ಸಿಮೆಂಟ್‌ಗೆ ಅಭಾವ, ಅವಶ್ಯಕ ಸಾಮಗ್ರಿಗಳ ಅಭಾವ, ಮನೆ ಬಾಡಿಗೆ ಸಿಗುವುದು ಅಭಾವ, ಹಾಗೂ ವಾಹನಗಳಿಗೆ ಬೇಕಾದ ಟೈರು ಟ್ಯೂಬುಗಳ ಅಭಾವ, ಎಲೆಕ್ಟ್ರಿಸಿಟಿ ಅಭಾವ, ಪವರಿನ ಅಭಾವ, ಹಾಲಿನ ಅಭಾವ, ಹೀಗೆ ಸಾಕಷ್ಟು ಅಭಾವಗಳೇ ರಾಜ್ಯದಲ್ಲಿ ಜಾಸ್ತಿಯಾಗಿವೆ. ಸರಕಾರಕ್ಕೆ ಯಾವುದರಲ್ಲಿ ಅಭಾವವಿಲ್ಲ ಎಂದರೆ ಲಂಚಗೋಳಿತನಕ್ಕೆ ಅಭಾವ ಇಲ್ಲ, ಕಳ್ಳಬಟ್ಟಿ ಸಾರಾಯಿಗೆ ಅಭಾವವಿಲ್ಲ ಮತ್ತು ಈಚೆಗೆ ಕಡಲೆಕಾಯಿಎಣ್ಣೆ ಹಾಗೂ ಇನ್ನಿತರ ಎಣ್ಣೆಗಳ ಬೆಲೆಗಳು ವಿಪರೀತ ಹೆಚ್ಚಾಗಿ ಹೋಗಿ ಇದರಿಂದ ಎಲ್ಲೂ ಕೂಡ ಬೆಲೆಗಳು ಹೆಚ್ಚಾಗಿವೆ ಇದಲ್ಲದೆ ಪೆಟ್ರೋಲು ಹಾಗೂ ಎಲೆಕ್ಟ್ರಿಸಿಟಿ ಚಾರ್ಜುಗಳೂ ಜಾಸ್ತಿಯಾಗಿವೆ ಮತ್ತು ಬಟ್ಟೆಗಳ ಬೆಲೆ ಕೂಡ ಹೆಚ್ಚಾಗಿವೆ ಮತ್ತು ಪ್ರಯಾಣಿಕರಿಗೆ ಸಾಮಾನ್ಯವಾಗಿ ಸಾಗಾಣಿಕೆ ಮಾಡುವ ವಸ್ತುಗಳ ಮೇಲೆ ಬೆಲೆಗಳು ಹೆಚ್ಚಾಗಿವೆ ಇದರಿಂದಾಗಿ ಜನಗಳು ಬಹಳ ಕಷ್ಟಕ್ಕೆ ಸಿಕ್ಕಿ ಬಹು ತೊಂದರೆ ಪಡುತ್ತಿದ್ದಾರೆ. ಇದನ್ನು ಅನುಭವಿಸುವವರಿಗೇ ಗೊತ್ತಾಗುತ್ತದೆ ಇದರ ಕಷ್ಟ. ನಮ್ಮ ವಿರೋಧ ಪಕ್ಷದ ಸ್ನೇಹಿತರುಗಳು ಇದರ ಬಗ್ಗೆ ಹೇಳಿದರು. ಅವರು ಸ್ವಲ್ಪ ತಮ್ಮ ಎದೆ ಮುಟ್ಟಿ ನೋಡಿಕೊಂಡು ಇದರಲ್ಲಿ ಜನರಿಗೆಏನಾದರೂ ಅನುಕೂಲ ಮಾಡಿದ್ದಾರೆಯೇ ಎನ್ನುವುದು ಅವರಿಗೇ ಗೊತ್ತಾಗುತ್ತದೆ. ಯಾವುದರಲ್ಲಿ ನಮ್ಮ ಸರಕಾರಕ್ಕೆ ಅಭಾವವಿಲ್ಲ ಎಂದರೆ ಕಲಬೆರಕೆ ಸಾಮಾನುಗಳನ್ನು ಮಾರುವುದರಲ್ಲಿ ಅಭಾವವಿಲ್ಲ ಬ್ಲಾಕು ಮಾರ್ಕೆಟ್ಟಿನಲ್ಲಿ ಯಾವ ಸಾಮಾನು ಬೇಕಾದರೂ ಸಿಗುತ್ತದೆ ಇದಕ್ಕೆ ಅಭಾವವಿಲ್ಲ, ಕುದುರೆ ಜೂಜು ಹಾಗೂ ಲಾಟರಿಗೆ ಸರಕಾರದಲ್ಲಿ ಅಭಾವವಿಲ್ಲ. ಹಾಗೂ ರಾತ್ರಿಯ ಕ್ಲಬ್ಬುಗಳಲ್ಲಿ ಜೂಜಾಡಲು ಅಭಾವವಿಲ್ಲ ಹೀಗೆ ಇವರಲ್ಲಿ ಯಾವುದಕ್ಕೂ ಅಭಾವವೇ ಇಲ್ಲ. ಇದಕ್ಕೆ ಕಾರಣಗಳನ್ನು ಸರಕಾರದವರು ಹೇಳುತ್ತಾ ಕೆಲವು ವೇಳೆ ಇದಕ್ಕೆ ಪ್ರಕೃತಿ ನಿಯಮವೇ ಕಾರಣ ಹಾಗೂ ವಿರೋಧ ಪಕ್ಷದವರೇ

ಕಾರಣ ಎನ್ನುತ್ತಾರೆ. ಇವರಲ್ಲಿ ಸ್ವಲ್ಪ ಅನುಕೂಲವಾಗಿದ್ದರೂ ವರ್ತಕರು ಸರಕಾರದೊಡನೆ ಸಹಕರಿಸದೆ ವಿಪರೀತ ಹೆಚ್ಚು ಬೆಲೆಗಳನ್ನು ಹಾಕಿ ಮಾರುತ್ತಿರುವುದರಿಂದಾಗಿ ಜನತೆಗೆ ಬಹಳ ಕಷ್ಟವಾಗುತ್ತಿದೆ. ಆದರೆ ನಮ್ಮ ಸರಕಾರಕ್ಕೆ ಸರಿಯಾದ ಕಾರ್ಪೊರೇಷನ್ಸ್ ಎನ್ನುವುದು ಇದ್ದರೆ ಹಾಗೂ ಜವಾಬುದಾರಿಯುತರಾದ ಅಧಿಕಾರವರ್ಗದವರು ಇದ್ದರೆ ಈ ರೀತಿ ಬೆಲೆಗಳು ಸಿಕ್ಕಾಪಟ್ಟೆ ಮಿತಿ ಮೀರಿ ಏರುತ್ತಿರಲಿಲ್ಲ. ಹಿಂದೆ ಬ್ಯಾಂಕು ನ್ಯಾಷನಲೈಸೇಷನ್ ಜಾರಿಗೆ ತಂದಾಗ ಚುನಾವಣೆ ಬಂದಿತ್ತು ಮತ್ತು ಆಗ ಕೂಡ ಬೆಲೆಗಳು ಏರಲು ಕಾರಣವಾಯಿತು ಎಂದು ಹೇಳಿದರು.

MADAM SPEAKER.—The House now stands adjourned to meet again tomorrow at 8-30 A.M

The House adjourned at Thirty minutes past One of the Clock, to meet again at Thirty Minutes past Eight of the Clock on Saturday the 15th February 1975.